is a self impose discipline, they cannot object to us if we take up discussion, ನಾವು ಸದಾ ಕಾಲ ನಮ್ಮ ನಡತೆಯಲ್ಲಿ ಬೇರೆಯವರಿಗೆ ಮಾದರಿಯಾಗಿರಬೇಕಾಗುತ್ತದೆ. ಆದ್ದರಿಂದ, House restrain itself from taking up any transaction, ನಮ್ಮ ಮೇಲೆ ಸಾಮಾಜಿಕ ನಿರ್ಬಂಧ ಹಾಗೂ ಕಾನ್‌ಸ್ಟಿಟ್ಯೂಶನಲ್ ಅಬ್ಲಿಗೇಷನ್ ಇತ್ತು. ಇವತ್ತು ಯಾವ ಕೆಲಸ ನಾವು ನಿರ್ವಹಿಸಬೇಕಾಗಿತ್ತೋ ಅಷ್ಟಕ್ಕೆ ಇವತ್ತು ನಾವು ಸೀಮಿತವಾಗಿದ್ದೇವೆ.

ಡಾ|| ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೆ, ನಾನೊಂದು ಪ್ರಿವಿಲೇಜ್ ಮೋಷನ್ ಮೂವ್ ಮಾಡಿದ್ದೆ. ಇದಕ್ಕೆ ತಾವು ಕೂಡ ಅಪ್ಪಣೆ ಕೊಟ್ಟಿದ್ದೀರಿ. ಆದ್ದರಿಂದ ಒಂದು ಅವಕಾಶ ಕೊಡಿ.

ಅಧ್ಯಕ್ಷರು : ತಾವು ಹೇಳಿರತಕ್ಕಂಥದ್ದು ನಿಜ. ನಾನು ಈ ಸದನದಲ್ಲಿ ನಿಮಗೆ ವಾಗ್ದಾನ ಕೊಟ್ಟಿದ್ದೆ. ಇವತ್ತು ಗೃಹ ಸಚಿವರ ತಾಯಿ ದುರಾದೃಷ್ಟವಶಾತ್ ತೀರಿಕೊಂಡಿದ್ದಾರೆ. ನೆನ್ನೆ ದಿವಸ ಈ ಘಟನೆ ಸಂಭವಿಸುತ್ತದೆ ಎಂದು ನಾನು ನಿರೀಕ್ಷೆ ಮಾಡಿರಲಿಲ್ಲ. ಬೆಳಿಗ್ಗೆ ನಾವೆಲ್ಲಾ ಹೋಗಿ ಪಾರ್ಥಿವ ಶರೀರಕ್ಕೆ ಗೌರವ ಸಲ್ಲಿಸಿ ಬಂದೆವು. ಮಾನ್ಯ ಗೃಹ ಮಂತ್ರಿಗಳು ಶವ ಸಂಸ್ಕಾರ ಕೆಲಸದಲ್ಲಿ ಇದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ಗೃಹ ಸಚಿವರ ಪರವಾಗಿ ಮಾನ್ಯ ನಾಣಯ್ಯನವರು ಉತ್ತರ ಕೊಡಲಿ.

ಅಧ್ಯಕ್ಷರು ; ನಿಮಗೆ ನಾನು ಹೇಳಿದ ಮಾತು ಅರ್ಥವಾಗುತ್ತಿಲ್ಲ. ನಂತರ ನೀವೆಲ್ಲರೂ ನನ್ನ ಹತ್ತಿರ ಬಂದಾಗ ಅಲ್ಲಿ ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುತ್ತೇನೆ. ಮಧ್ಯಾಹ್ನ 3-30 ಗಂಟೆಗೆ ವಿಧಾನ ಸೌಧದ ಪೂರ್ವ ದ್ವಾರದ ಸ್ಟೆಪ್ ಮೇಲೆ ಫೋಟೋ ವ್ಯವಸ್ಥೆ ಮಾಡಲಾಗಿದೆ. ಆದ್ದರಿಂದ ಎಲ್ಲಾ ಸದಸ್ಯರು ಬರಬೇಕು. ಈಗ ಊಟಕ್ಕೆ ಅಡ್ಜರ್ನ್ ಮಾಡಿ ಪುನಃ ಸಭೆ 4-00 ಗಂಟೆಗೆ ಸದನ ಸಮಾವೇಶಗೊಳ್ಳಲಿದೆ.

(ಸದನವು ಮಧ್ಯಾಹ್ನ 1 ಗಂಟೆ 26 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ 4-00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

ಸಭೆಯು ಪುನಃ 4.30 ಸಮಾವೇಶಗೊಂಡಿತು

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

## ಪರಸ್ಪರ ಅಭಿನಂದನೆ

ಅಧ್ಯಕ್ಷರು : ಮಾನ್ಯ ಎಲ್ಲ ಸದಸ್ಯರುಗಳ, ಪ್ರಸ್ತುತ ವಿಧಾನಸಭೆಯ ಕಡೆಯ ಅಧಿವೇಶನ ಕಡೆಯ ಹಂತವನ್ನು ನಾವು ತಲುಪಿಸಿದ್ದೇವೆ. ಬೆಳಿಗ್ಗೆ ನಮ್ಮ ಅಧಿಕೃತ ಕಲಾಪ ಅದೆಲ್ಲವನ್ನು ನಿರ್ವಹಣೆ ಮಾಡಿದ್ದೇವೆ. ಔಪಚಾರಿಕವಾಗಿ ಕಳೆದ ಐದು ವರ್ಷಗಳಲ್ಲಿ ರಾಜ್ಯದ ನಾನಾ ಭಾಗಗಳಿಂದ ಹಲವಾರು ಪಕ್ಷಗಳಿಂದ ಹಲವಾರು ಮೂಲೆಗಳಿಂದ ಜನ ಪ್ರತಿನಿಧಿಗಳಾಗಿ ಆರಿಸಿ ಬಂದಂತಹ ನಾವು ಪುನಃ ಇಲ್ಲಿ ಸೇರತಕ್ಕ ಅವಕಾಶ ಇನ್ನು ಸಿಗುವುದಿಲ್ಲ. ಐದು ವರ್ಷಗಳಲ್ಲಿ ನಾವು ನಡೆಸಿದ ಕಲಾಪಗಳು ನಮ್ಮ

ಅನುಭವಗಳು ನಮ್ಮ ಅಭಿಪ್ರಾಯಗಳು ಮತ್ತೊಬ್ಬರ ಬಗ್ಗೆ ಸದ್ಭಾವನೆ ಇಷ್ಟನ್ನು ವ್ಯಕ್ತಪಡಿಸಿ ನಾವು ಈ ಕಲಾಪವನ್ನು ಅಂತ್ಯಗೊಳಿಸಬೇಕಾಗಿದೆ. ಮೊಟ್ಟಮೊದಲನೆಯದಾಗಿ ವಿರೋಧಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಸಭೆಯನ್ನು ಉದ್ದೇಶಿಸಿ ಮಾತನಾಡಬೇಕು. ಮಲ್ಲಿಕಾರ್ಜುನ ಖರ್ಗೆಯವರು 1972ನೇ ಇಸವಿಯಿಂದ ಇಲ್ಲಿಯವರೆಗೆ ಸತತವಾಗಿ ಈ ಸಭೆಗೆ ಆರಿಸಿ ಬಂದಂತಹ ಅತಿ ದೊಡ್ಡ ಗೌರವಕ್ಕೆ ಪಾತ್ರರಾಗಿರತಕ್ಕವರು. ಹಲವಾರು ಸ್ಥಾನಗಳಲ್ಲಿದ್ದು ಈ ಸದನದಲ್ಲಿ ಕೆಲಸ ಮಾಡಿದ್ದಾರೆ. ಅವರು ಈ ಸಭೆಯನ್ನು ಉದ್ದೇಶಿಸಿ ಮಾತನಾಡಬೇಕು.

+ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಹಾಗೂ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳೆ, ಎಲ್ಲ ಗೌರವಾನ್ವಿತ ಸದಸ್ಯ ಮಿತ್ರರೆ. ಇವತ್ತು ಸುಮಾರು ನಾಲ್ಕು ವರ್ಷ ಎಂಟು ತಿಂಗಳು ಈ ಸದನದಲ್ಲಿ ತಮ್ಮ ಘನ ಅಧ್ಯಕ್ಷತೆಯಲ್ಲಿ ಕೆಲಸ ಮಾಡತಕ್ಕ ಒಂದು ಅವಕಾಶ ನಮಗೆಲ್ಲರಿಗೂ ದೊರಕಿದೆ. ಈ ನಾಲ್ಕು ವರ್ಷ ಎಂಟು ತಿಂಗಳಿನಲ್ಲಿ ಅನೇಕ ಒಳ್ಳೆಯ ಕೆಲಸಕಾರ್ಯಗಳನ್ನು ಮಾಡತಕ್ಕ ಅವಕಾಶ ಕೂಡ ನಮಗೆ ಸಿಕ್ಕಿತ್ತು. ಅದೇ ಸಂದರ್ಭದಲ್ಲಿ ಕೆಲವೊಮ್ಮೆ ನಾವು ಬೇಸತ್ತು ಸರ್ಕಾರದ ಕಾರ್ಯಕಲಾಪಗಳಾಗಲೀ, ಅಥವಾ ನಾವು ಯಾವ ಸಮಸ್ಯೆಗೆ ಈ ಸರ್ಕಾರ ಸ್ಪಂದಿಸುತ್ತದೆ ಎಂದು ಹೇಳಿ ಭಾವಿಸಿದ್ದೇವೆ, ಅದು ಆಗದೇ ಇದ್ದಾಗ ಬೇಸರಪಟ್ಟುಕೊಂಡಿದ್ದು ಕೂಡ ಇದೆ. ಇದೆಲ್ಲವನ್ನೂ ಕೂಡ ಬಹಳ ಅತ್ಯಂತ ಚತುರತೆಯಿಂದ ನಮ್ಮೆಲ್ಲರನ್ನೂ ಒಗ್ಗೂಡಿಸಿ ತಾವು ಒಂದುಮಾಡಿ ತೆಗೆದುಕೊಂಡು ಹೋಗತಕ್ಕಂಥ ಕೆಲಸವನ್ನು ಮಾಡಿದ್ದೀರಿ. ಮತ್ತು ಅನೇಕ ಸಲ ನಾವು ಸರ್ಕಾರದ ಜತೆಯಲ್ಲಿ ವಾದವಿವಾದ ಮಾಡಿದರೂ ಕೂಡ ಆ ವಾದವನ್ನು ಸರ್ಕಾರ ಕೆಲವು ಸಲ ಗಂಭೀರವಾಗಿ ತೆಗೆದುಕೊಂಡು, ಕೆಲವು ಸಲ ಅದಕ್ಕೆ ಯಾವರೀತಿಯಾಗಿ ಸ್ಪಂದಿಸಬೇಕು ಅದು ಆಗದೇ ಹೋದರೂ ಕೂಡ ತಮ್ಮ ನೆರವಿನಿಂದ ಈ ಕೆಲವು ಸಮಸ್ಯೆಗಳನ್ನು ಬಗೆಹರಿಸತಕ್ಕಂಥ ಪ್ರಯತ್ನ ಕೂಡ ಈ ಸದನದಲ್ಲಿ ನಡೆಯಿತು. ಸುಮಾರು ನನ್ನ ಈ 28 ವರ್ಷಗಳ ಅವಧಿಯಲ್ಲಿ ನಿಜವಾಗಲೂ ಕೂಡ ಅಂತಹ ಗಂಭೀರ ಸ್ವರೂಪದ ಚರ್ಚೆಗಳು ಇಲ್ಲಿ ಆದವು ಎಂದು ಹೇಳಿಕೊಳ್ಳುವುದಕ್ಕೆ ನಾನು ತಯಾರಿಲ್ಲ. ಅದಕ್ಕೆ ಕಾರಣಗಳೂ ಇವೆ. ಏಕೆಂದರೆ ಕೆಲವು ಸಲ ನಮ್ಮ ಕಡೆ ಇರತಕ್ಕಂಥ ಸದಸ್ಯರು ಆಳವಾಗಿ ಅಭ್ಯಾಸ ಮಾಡಿ ಹೇಳತಕ್ಕಂಥಾದ್ದು ಅಥವಾ ಅದನ್ನು ಪರಿಣಾಮಕಾರಿಯಾಗಿ ಇರತಕ್ಕಂಥಾದ್ದು ಇದು ಒಂದು ಕಡೆ ಇದ್ದರೆ, ಎರಡನೆಯದು ಇದೇ ರೀತಿಯಾಗಿ ಸರ್ಕಾರದವರು ಕೂಡ ಸ್ಪಂದಿಸತಕ್ಕಂಥಾದ್ದು, ಮಾತನಾಡತಕ್ಕಂಥಾದ್ದು ಅಥವಾ ಅದಕ್ಕೆ ಉತ್ತರವನ್ನು ನೀಡತಕ್ಕಂಥಾದ್ದು ಈ ಅಪೇಕ್ಷೆಯನ್ನು ಕೂಡ ನಾವು ಹೊಂದಿರುತ್ತಿದ್ದೆವು. ಆದರೆ, ಕೆಲವು ಸಲ ನಮ್ಮ ಅಪೇಕ್ಷೆಗೆ ಅನುಗುಣವಾಗಿ ಕಾರ್ಯಕಲಾಪಗಳು ನಡೆಯದೇ ಹೋದಾಗ ಬೇಸರ ಉಂಟುಮಾಡತಕ್ಕಂಥ ಅನೇಕ ಸಂದರ್ಭಗಳನ್ನು ಕೂಡ ನಾವು ನೋಡಿದ್ದೇವೆ. ಕೆಲವು ಸಲ ನಮ್ಮ ಅನೇಕ ಸದಸ್ಯರು ತಂದಂಥ ಸಮಸ್ಯೆಗಳಿಗೆ ಆಗಲಿ ಅಥವಾ ಪ್ರಶ್ನೆಗಳಿಗೆ ಆಗಲಿ ಈ ಕಡೆ ಮಂತ್ರಿಗಳು ಸಮಂಜಸವಾಗಿ ಉತ್ತರ ಕೊಡದೇ ಇರತಕ್ಕದ್ದು ಅಥವಾ ಹಾಜರಾತಿ ಬಹಳ ಕಡಿಮೆ ಇರತಕ್ಕದ್ದು, ಇದು ಒಂದು ಸಲ ಅಲ್ಲ ಅನೇಕ ಸಲ ಈ ಸದನದಲ್ಲಿ ನಾವು ಪ್ರಸ್ತಾಪ ಮಾಡಿದ್ದೇವೆ. ಹಾಜರಾತಿ ಕಡಿಮೆ ಇರತಕ್ಕದ್ದು ಇದು ಒಂದೇ ಅವಧಿಯಲ್ಲಿ ಅಲ್ಲ ಹಿಂದೆ ಕೂಡ ಇರುತ್ತಿತ್ತು ಎಂಬ ಮಾತನ್ನು ನಾವು ಒಪ್ಪಿಕೊಂಡರೂ ಕೂಡ ಈ ಸಾರಿ ದುರ್ದೈವದಿಂದ ಹೆಚ್ಚಿನ

ಸಂಖ್ಯೆಯಲ್ಲಿ ನಾವು ಅಬ್ಸೆಂಟೀಸ್ ಆಗಿಬಿಟ್ಟಿದ್ದೇವೆ. ಇದಕ್ಕೆ ಕಾರಣಗಳು ಇರತಕ್ಕದ್ದು, ಒಟ್ಟಾರೆ ಸ್ವಲ್ಪ ಹೆಚ್ಚುಕಡಿಮೆ ನಮಗೆ ತೃಪ್ತಿಯಾಗುವಷ್ಟು ಕೆಲಸ ಆಗಿಲ್ಲವೆಂದರೂ ಕೂಡ ತಪ್ಪಾಗಲಿಕ್ಕಿಲ್ಲ. ಈ ದಿಕ್ಕಿನಲ್ಲಿ ನಾವು ಯೋಚನೆ ಮಾಡಬೇಕಾಗಿದೆ. ಏಕೆಂದರೆ ಇವತ್ತು ನಾವು ಏನು ಇಲ್ಲಿ ಚಿಂತಿಸುತ್ತೇವೆ ಅಥವಾ ನಡೆದುಕೊಳ್ಳುತ್ತೇವೆ, ಮಾತನಾಡುತ್ತೇವೆ ಆ ಒಂದು ನಡವಳಿಕೆ ಮಾತು ಮುಂದಿನ ಪೀಳಿಗೆಗೆ ಮಾರ್ಗದರ್ಶನವಾಗುತ್ತದೆ. ಇದು ಒಂದು ರೀತಿಯಲ್ಲಿ ಗೈಡೆನ್ಸ್ ಏಕೆಂದರೆ ಮುಂದೆ ಬರತಕ್ಕಂಥವರು ಕೂಡ ಹಿಂದೆ ಏನೇನು ನಡೆಯಿತು ಎನ್ನತಕ್ಕದ್ದು ನೋಡುತ್ತಾರೆ. ನಮಗಿಂತಲೂ ಹಿಂದೆ ಇರತಕ್ಕಂಥ ಅನೇಕ ಹಿರಿಯರು ಈ ಸದನದಲ್ಲಿ ಯಾವರೀತಿಯಾಗಿ ನಡೆದುಕೊಂಡರು ಎಂದು ಹೇಳಿ, ನಾವು ಸಂದರ್ಭ ಬಂದಾಗ ಅದರ ಬಗ್ಗೆ ಮಾತನಾಡಿ ಹೇಳಿ ಸಮಜಾಯಿಶಿ ಕೊಡುತ್ತೇವೆ. ಅದೇರೀತಿ ಮುಂದಿನ ಪೀಳಿಗೆ ಕೂಡ ನಮ್ಮ ಕಡೆ ನೋಡುತ್ತಾರೆ. ಆಗ ನಾವು ಮಾಡಿದಂಥ ಕೆಲಸವನ್ನು ಅವರು ಎಷ್ಟರಮಟ್ಟಿಗೆ ಮೆಚ್ಚುತ್ತಾರೆ ಎನ್ನತಕ್ಕದ್ದು ಅದು ಮುಂದೆ ಬರತಕ್ಕಂಥ ಪೀಳಿಗೆಗೆ ಬಿಟ್ಟಿದ್ದು. ಆದರೆ, ಒಂದು ಮಾತನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತಿದ್ದೇನೆ. ಈ ನಾಲ್ಕು ವರ್ಷ ಎಂಟು ತಿಂಗಳ ಅವಧಿಯಲ್ಲಿ ಇತ್ತೀಚೆಗೆ ಏನು ಭಾರತದೇಶದಲ್ಲಿ ಅನೇಕ ರಾಜ್ಯಗಳ ವಿಧಾನಸಭೆಗಳಲ್ಲಿನ ಅವರ ನಡೆವಳಿಕೆಗಳನ್ನು ನೋಡಿದಾಗ, ಅಲ್ಲಿನ ಕಾರ್ಯಕಲಾಪಗಳನ್ನು ನೋಡಿದಾಗ ಅಥವಾ ಅಲ್ಲಿನ ಚಟುವಟಿಕೆಗಳನ್ನು ನೋಡಿದಾಗ ನಿಜವಾಗಲೂ ಅವರೆಲ್ಲರಿಗಿಂತಲೂ ನಮ್ಮ ಕಾರ್ಯಕಲಾಪಗಳು ಉತ್ತಮವಾಗಿದ್ದವು ಎಂದು ನಾವು ಹೇಳಿಕೊಳ್ಳಬಹುದು, ಇದು ನಿಸ್ಸಂದೇಹ. ಏಕೆಂದರೆ ಅನೇಕ ಕಡೆ ಹೊಡೆತ, ಏಟುಗಳು ಮತ್ತು ಸದನದಲ್ಲಿ ಜಗಳ, ಕೂಗಾಟ ಇವೆಲ್ಲ ನಡೆದಿದ್ದನ್ನು ನಾವೆಲ್ಲರೂ ಕೂಡ ನೋಡಿದ್ದೇವೆ. ಒಂದು ಸಲ ನಾವು ಇಲ್ಲೇ ರಾಜ್ಯಪಾಲರು ಭಾಷಣ ಮಾಡುವಾಗ ಅದನ್ನು ಸ್ವಲ್ಪ ಪ್ರತಿಭಟನೆ ಮಾಡಿದಾಗ, ರೈತರ ಸಮಸ್ಯೆ ಬಗ್ಗೆ ಅದನ್ನು ಪ್ರತಿಭಟನೆ ಮಾಡಿದಾಗ ಅದಕ್ಕೆ ಟೀಕೆಟಿಪ್ಪಣಿಗಳನ್ನು ಇಡೀ ಭಾರತದೇಶದಲ್ಲಿ ಕೆಲವು ಪತ್ರಿಕೆಗಳು ಮಾಡಿದವು ಮತ್ತು ಅನೇಕ ಎಲೆಕ್ಟ್ರಾನಿಕ್ ಮೀಡಿಯಾಗಳು ಕೂಡ ಇದರ ಬಗ್ಗೆ ಕಾಮೆಂಟ್ ಮಾಡಿದ್ದವು. ಅದು ಬಂದಮೇಲೆ ತಕ್ಷಣ ನಾವು ಅದನ್ನು ತಿದ್ದಿಕೊಂಡು ಈ ಸದನದಲ್ಲಿ ಇರತಕ್ಕಂಥ ಅನೇಕ ಗೌರವಾನ್ವಿತ ಸದಸ್ಯರು ಮತ್ತು ಹಿರಿಯರೆಲ್ಲರೂ ಕೂಡ ಕ್ಷಮೆಯನ್ನು ಕೇಳಿಕೊಂಡು ನಾವು ಇನ್ನುಮುಂದೆ ಈ ರೀತಿಯಾಗಿ ವರ್ತಿಸುವುದಿಲ್ಲ, ಸರಿಯಾಗಿ ನಡೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಸದನಕ್ಕೆ ಕೊಟ್ಟಮೇಲೆ ಬಹುಶಃ ಅಂತಹ ಘಟನೆ ಯಾವತ್ತೂ ಕೂಡ ಈ 4 ವರ್ಷ 8 ತಿಂಗಳಲ್ಲಿ ನಡೆದಿಲ್ಲವೆಂದು ನನ್ನ ಭಾವನೆ. ಮತ್ತು ಅನೇಕ ಸಂದರ್ಭಗಳಲ್ಲಿ ನಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಬೇಕೆಂದು ಹೇಳಿ ನಾವು ಸ್ವಲ್ಪ ಜೋರಾಗಿ ಮಾತನಾಡಿದ್ದೇವೆ ಅಥವಾ ನಮ್ಮದೇ ಆದ ಧಾಟಿಯಲ್ಲಿ ಅನೇಕಸಾರಿ ಹೇಳಿರತಕ್ಕದ್ದು ಇರುತ್ತದೆ. ಏಕೆಂದರೆ ನಮ್ಮ ನಮ್ಮ ಧಾಟಿಯಲ್ಲಿ ನಾವು ಮಾತನಾಡಿದಾಗ ನಮಗೆ ಅದರಿಂದ ಕೆಲವು ಸಲ ಸಮಾಧಾನವಾಗುತ್ತದೆ. ಅದಕ್ಕೆ ಕೆಲವು ಸಲ ಈ ಮಾತನಾಡತಕ್ಕಂಥ ಧಾಟಿಯನ್ನು ನೋಡಿಕೊಂಡು ಬೇರೆಯವರು ಸ್ವಲ್ಪ ಬೇಸರ ಪಡತಕ್ಕಂಥಾದ್ದು ಅಥವಾ ಇಷ್ಟು ಅನುಭವ ಇದ್ದರೂ ಕೂಡ ಇವರು ಈ ರೀತಿ ಮಾತನಾಡುತ್ತಾರೆ ಎಂದು ಹೇಳತಕ್ಕದ್ದು ಕೂಡ ಇದೆ ಎಂಬುದು ಅನೇಕಸಾರಿ ನಮಗೆ ಅನ್ನಿಸಿದರೂ ಕೂಡ ಆ ಸಮಸ್ಯೆಯ ಗಂಭೀರತೆಯನ್ನು ಕಂಡುಕೊಂಡು ಮಾತನಾಡತಕ್ಕಂಥ ಪ್ರಸಂಗ ಬಂದು ಇಲ್ಲಿ ಧರಣೆ ಮಾಡತಕ್ಕದ್ದು,

ನಡೆಯಿತು. ಆಮೇಲೆ ಒಮ್ಮೆ ಭೂಸುಧಾರಣೆ ಕಾನೂನು ಸಂಬಂಧವಾಗಿ ಅಂತೂ ಒಂದು ರಾತ್ರಿ ಇಲ್ಲಿ ಕುಳಿತುಕೊಂಡಿದ್ದು ಇದೆ. ಹಾಗೆಯೇ ಕೆ.ಇ.ಬಿ. ಮತ್ತು ಬಸ್ಸು ದರಗಳನ್ನು ಏರಿಸಿದ್ದರ ಬಗ್ಗೆ ಅನೇಕ ಸಾರಿ ಧರಣಿ ಸಭಾತ್ಯಾಗ ಇಂಥಾದ್ದನ್ನು ನಾವು ಮಾಡಿದ್ದೇವೆ. ಕೆಲವು ಸಲ ತಮಗೆ ಬೇಸರ ತರತಕ್ಕದ್ದು ಕೂಡ ಆಗಿದೆ. ಏಕೆಂದರೆ ಈಗಾಗಲೇ ನಾನು ಹೇಳಿದಹಾಗೆ ಸಮಸ್ಯೆಗೆ ಸ್ಪಂದನ ಸಿಗಲಿ, ಏನಾದರೂ ಉತ್ತರ ಪಡೆದುಕೊಳ್ಳಬೇಕೆಂಬ, ರಿಲೀಫ್ ಸಿಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ನಾವು ಹಾಗೆ ಹೇಳಿದ್ದೇವೆ ಹೊರತಾಗಿ ತಮ್ಮ ಮನಸ್ಸು ನೋಯಿಸಬೇಕು ಅಥವಾ ಸದನದಲ್ಲಿ ಇರತಕ್ಕಂಥ ಮುಖ್ಯಮಂತ್ರಿಗಳಿಗೆ ಅಥವಾ ಬೇರೆ ಮಂತ್ರಿಗಳಿಗೆ ಅಥವಾ ಯಾವುದೇ ಸದಸ್ಯರುಗಳಿಗೆ ಅವರ ಮನಸ್ಸನ್ನು ನೋಯಿಸಬೇಕು ಎಂದು ಆ ದೃಷ್ಟಿಯಿಂದ ಹೇಳಿಲ್ಲ. ಅನೇಕ ಸಮಸ್ಯೆಗಳಿಗೆ ಪರಿಹಾರ ಸಿಗಲಿ ಎನ್ನತಕ್ಕಂಥ ದೃಷ್ಟಿಯಿಂದ ಮಾತ್ರ ಹೀಗೆ ಆಡಿರತಕ್ಕಂಥ ಮಾತುಗಳು ಇವೆ. ಇದೇರೀತಿಯಾಗಿ ಕೆಲವು ಸಲ ನಮ್ಮ ನಮ್ಮ ಮಧ್ಯೆ ಕೂಡ ಕೆಲವು ಚಕಮಕಿಗಳು ನಡೆಯಿತು. ಬಿ.ಜೆ.ಪಿ. ಮತ್ತು ಕಾಂಗ್ರೆಸ್‌ನವರು, ಕೆಲವು ಸಲ ಕಾಂಗ್ರೆಸ್ ಮತ್ತು ಜನತಾದಳ, ಕೆಲವು ಸಲ ಇಂಡಿಪೆಂಡೆಂಟ್‌ಗಳ ನಡುವೆ ಹೀಗೆ ಅನೇಕಸಾರಿ ವಾದವಿವಾದ ನಡೆದಿವೆ. ಕೆಲವು ಸಲ ನಾವು ನಾವೇ ಕಚ್ಚಾಡುತ್ತಿದ್ದಾಗ ತಾವು ನಕ್ಕುಕೊಂಡು ಕೂಡುತ್ತಿದ್ದುದು ನಮಗೆ ಮುಜುಗರ ಉಂಟು ಮಾಡಿರತಕ್ಕಂಥಾದ್ದು ಕೂಡ ಆಗಿದೆ. ಹೀಗೆ ಅನೇಕ ಪ್ರಸಂಗಗಳನ್ನು ಹೇಳಿಕೊಂಡು ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಈಗ ಇದೆಲ್ಲ ಈ ಸದನದ ಇತಿಹಾಸದಲ್ಲಿ ಒಂದು ಭಾಗವಾಗಿರುತ್ತದೆ. ಸುಮಾರು ನಾಲ್ಕು ವರ್ಷ ಎಂಟು ತಿಂಗಳು ನಾವು ಇಲ್ಲಿ ಕಳೆದಿದ್ದೇವೆ ಮತ್ತು ಅನೇಕ ನಡಾವಳಿಗಳನ್ನು ಕೂಡ ನಾವು ತೋರಿಸಿಕೊಟ್ಟಿದ್ದೇವೆ. ನಾವು ಉತ್ತಮವಾದ ಕೆಲಸವನ್ನು ನಿರ್ವಹಿಸಿದ್ದೇವೆ ಮತ್ತು ಇತರ ಬೇರೆ ರಾಜ್ಯಗಳ ವಿಧಾನಸಭೆಗಳಿಗೆ ಹೋಲಿಸಿದರೆ ಕರ್ನಾಟಕ ಅಸೆಂಬ್ಲಿ ಇನ್ನೂ ಕೂಡ ಸರ್ವೋತ್ತಮವಾಗಿ ಇದೆ. ಇನ್ನೂ ಒಳ್ಳೆಯ ರೀತಿಯಿಂದ ನಮ್ಮ ಸಂಪ್ರದಾಯ ಮತ್ತು ಹಿಂದಿನ ಪದ್ಧತಿ ಏನಿದೆ ಅದನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಬಂದಿದ್ದೇವೆ ಆ ದಿಕ್ಕಿನಲ್ಲಿ ನಡೆಯತಕ್ಕಂಥ ವಾತಾವರಣವನ್ನು ಇಟ್ಟುಕೊಂಡು ಬಂದಿದ್ದೇವೆ. ಇದಕ್ಕಾಗಿ ನಾನು ತಮಗೆ ತುಂಬು ಹೃದಯದಿಂದ ಅಭಿನಂದಿಸುತ್ತೇನೆ. ಮತ್ತು ಇದೇ ರೀತಿಯಾಗಿ ನಮ್ಮ ಎಷ್ಟೇ ಅನಿಸಿಕೆಗಳು ಅಥವಾ ನಮ್ಮ ಅನಿಸಿಕೆಗಳ ಪ್ರಕಾರ ಕೆಲಸ ಆಗದೇ ಹೋದರೂ ಕೂಡ ಒಂದು ಒಳ್ಳೆಯ ವಾತಾವರಣವನ್ನು ಈ ಸದನದಲ್ಲಿ ಇಟ್ಟು ಸದನದ ನಾಯಕರು ಮತ್ತು ಸದಸ್ಯರು ಕೂಡ ಸ್ಪಂದಿಸಿದ್ದಕ್ಕಾಗಿ ಅವರಿಗೂ ಕೂಡ ಈ ಸಂದರ್ಭದಲ್ಲಿ ನಾನು ಅಭಿನಂದಿಸುತ್ತೇನೆ. ಮತ್ತು ಜೊತೆಯಲ್ಲಿ ನಮ್ಮೆಲ್ಲರಿಗೆ ತಪ್ಪು ಮಾಡಿದರೆ ಇದು ತಪ್ಪು ಅಥವಾ ಸದನದಲ್ಲಿ ಈ ರೀತಿಯಾಗಿ ನಡೆಯಿತು ಎಂದು ಹೇಳುವವರು ನಮ್ಮ ಪ್ರೆಸ್ ಮಿತ್ರರು. ಮತ್ತು ಎಲೆಕ್ಟ್ರಾನಿಕ್ ಮೀಡಿಯಾ ಮತ್ತು ಅನೇಕ ಸಿಬ್ಬಂದಿವರ್ಗದವರೂ ಕೂಡ ನಮಗೆ ಸಹಾಯಕರಾಗಿ ಕೆಲಸವನ್ನು ಮಾಡಿದ್ದಾರೆ. ಅವರೆಲ್ಲರಿಗೂ ಕೂಡ ಈ ಸಂದರ್ಭದಲ್ಲಿ ತುಂಬು ಹೃದಯದಿಂದ ಅಭಿನಂದಿಸುತ್ತೇನೆ. ಕೆಲವುಸಲ ನಾವು ಸಿಟ್ಟಿಗೆ ಬಂದಾಗ, ನಮ್ಮ ಸಿಟ್ಟು ಇರತಕ್ಕಂತಾದ್ದು ಸರ್ಕಾರದ ಮೇಲೆ. ಕೆಲವು ಸಲ ನಮ್ಮ ಸೆಕ್ರೆಟರಿಗಳ ಮೇಲೆ, ಕೆಲವಾರು ಸಲ ಇಲ್ಲಿನ ಸಿಬ್ಬಂದಿ ಮೇಲೆ ತೆಗೆಯತಕ್ಕಾಂತದ್ದು, ಮತ್ತೆ ಕೆಲವು ಸಲ ನಮಗೆ ಪ್ರಚಾರ ಸಿಗದೇಹೋದರೆ ಆ ಕಡೆಯೂ ನೋಡಿ ಅನೇಕಸಾರಿ ಮಾತನಾಡತಕ್ಕಂತಾದ್ದು. ಈ ರೀತಿಯಾಗಿ ಅನೇಕಸಾರಿ ಆಗುತ್ತಿರುತ್ತವೆ. ಇದೆಲ್ಲವೂ ಕೂಡ

ಒಂದು ವಾತಾವರಣದ ಸೃಷ್ಟಿ. ವಾತಾವರಣ ಆ ರೀತಿಯಾಗಿದ್ದಾಗ, ಅದನ್ನು ಹೇಳತಕ್ಕಂಥ ಮಾತುಗಳೇ ಹೊರತಾಗಿ, ಯಾರ ಮನಸ್ಸನ್ನು ನೋಯಿಸಬೇಕೆಂಬ ದೃಷ್ಟಿಯಿಂದ ಮಾತನಾಡಿರತಕ್ಕಂತಾದ್ದಲ್ಲ. ಅವೆಲ್ಲವೂ ಕೂಡ, ನಮ್ಮ ಕೆಲಸಕಾರ್ಯ ಸುಗಮವಾಗಿ ನಡೆಯಲಿ, ನಮ್ಮ ಕೆಲಸಕ್ಕೆ ಒಳ್ಳೆಯ ರೀತಿಯಲ್ಲಿ ಸ್ಪಂದಿಸಲಿ ಎಂಬತಕ್ಕಂಥ ದೃಷ್ಟಿಯಿಂದಲೇ ಹೇಳಿದಂತಹ ಮಾತುಗಳು. ಈ ಸಂದರ್ಭದಲ್ಲಿ ಅವರೆಲ್ಲರಿಗೂ ಕೂಡ ನಾನು ಅಭಿನಂದಿಸಿ, ತಾವು ಈ ನಾಲ್ಕೂವರೆ ವರ್ಷಗಳಲ್ಲಿ ಸಹಕಾರ ಕೊಟ್ಟು, ತಾವು, ತಮ್ಮ ಸಮಸ್ಯೆಗಳಿಗೂ ಸ್ಪಂದಿಸಿದ್ದೀರಿ. ಕೆಲವು ಸಲ ನಾವು ನಾವೇ ಜಗಳ ಆಡಿಕೊಂಡಾಗ, ನಮ್ಮ ಚೇಂಬರಿಗೆ ಕರೆಸಿ, ಸಮಸ್ಯೆಗಳನ್ನು ಬಗೆಹರಿಸತಕ್ಕ ಕೆಲಸವನ್ನು ಕೂಡ ಮಾಡಿದ್ದೀರಿ. ಕೆಲವು ಸಮಸ್ಯೆಗಳ ಬಗ್ಗೆ ಸದನದ ಒಳಗಡೆ ಮಾಡುವುದಕ್ಕಾಗದಿದ್ದರೂ, ಸದನದ ಹೊರಗಡೆ ಮಾಡಿದ್ದೇವೆ. ಅದೇನೇ ಇರಲಿ, ಒಟ್ಟಾರೆ ಒಳ್ಳೆಯ ವಾತಾವರಣದಲ್ಲಿ ನಾವು ಚುನಾವಣೆಗೆ ಹೋಗುತ್ತಾ ಇದ್ದೇವೆ. ಚುನಾವಣೆಯಲ್ಲಿ ಜನ ತೀರ್ಮಾನ ಮಾಡುತ್ತಾರೆ. ಅದನ್ನು ಇಲ್ಲಿ ಕಾಮೆಂಟ್ ಮಾಡಿ, ಪುನಃ ಕಾಂಟ್ರವರ್ಸಿ ಕ್ರಿಯೇಟ್ ಮಾಡುವುದು ಬೇಡ. ಏಕೆಂದರೆ, ನಮ್ಮ ಮಟ್ಟಿಗೆ ಏನು ಕೆಲಸ ಮಾಡಿದ್ದೇವೆ, ಸರ್ಕಾರ ಏನು ಕೆಲಸ ಮಾಡಿದೆ, ನಾವು ಯಾವರೀತಿಯಾಗಿ ನಡೆದುಕೊಂಡಿದ್ದೇವೆ ಎನ್ನುವುದಕ್ಕೆ ಅಂತಿಮವಾಗಿ ತೀರ್ಮಾನ ಕೊಡತಕ್ಕಂಥವರು ಕರ್ನಾಟಕ ರಾಜ್ಯದ 5 ಕೋಟಿ ಜನರು. ಸುಮಾರು 3 ಕೋಟಿ 15 ಲಕ್ಷ ಮತದಾರರು ನಮ್ಮ ಹಣೆಬರಹವನ್ನು 4 ಮತ್ತು 11ನೇ ತಾರೀಖು ಬರೆಯುತ್ತಾರೆ. ನಮ್ಮ ಲಾಟರಿ ಚೀಟಿಗಳು ಏಳುವುದು 5ನೇ ಅಕ್ಟೋಬರ್. ಆಗ ನೋಡೋಣ ಯಾರು ಯಾರದು ಎಷ್ಟೆಷ್ಟು ಬಲ ಇದೆ ಶಕ್ತಿ ಇದೆ ಅಥವಾ ಹೇಳದೇ ಇದ್ದರೂ ಕೂಡ ದೈವ ಬಲ ಎಂದು ಹೇಳುತ್ತಾರಲ್ಲ, ಕೆಲವು ಸಲ ಅದರ ಮೇಲೆ ನಮಗೆ ನಂಬಿಕೆ ಇಲ್ಲದೇ ಹೋದರೂ ಕೂಡ ನಮ್ಮ ಪ್ರಯತ್ನ, ನಮ್ಮ ಸಾಹಸ ಮತ್ತು ನಮ್ಮ ನಡವಳಿಕೆಗಳ ಮೇಲೆಯೂ ಹೋಗುತ್ತದೆ. ಆದ್ದರಿಂದ, ಎಲ್ಲರಿಗೆ ಒಳ್ಳೆಯದಾಗಲಿ. ತಾವೂ ಕೂಡ ನಮಗೆ ಮಾರ್ಗದರ್ಶನ ಮಾಡಿ, ಸದನವನ್ನು ಸುಗಮವಾಗಿ ನಡೆಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಪುನಃ ತಮಗೆ ವಂದಿಸಿ, ಎಲ್ಲರಿಗೂ ಕೂಡ ನಾನು ತುಂಬು ಹೃದಯದಿಂದ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಸನ್ಮಾನ್ಯ ಸಭಾಧ್ಯಕ್ಷರೇ, ಈಗತಾನೆ ವಿರೋಧ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಏನೇನು ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ ಅದರ ಜೊತೆಗೆ ನಾನು ಕೂಡ ನಮ್ಮ ಪಕ್ಷದ ವತಿಯಿಂದ ಧ್ವನಿಗೂಡಿಸುತ್ತಾ, ಅವರ ವಿಚಾರದಲ್ಲಿ ನಾನೂ ಭಾಗಿಯಾಗುತ್ತೇನೆ. ಸುಮಾರು ನಾಲ್ಕು ಮುಕ್ಕಾಲುವರ್ಷಗಳಾಯಿತು. 5 ಬಜೆಟ್ ಮತ್ತು 6 ರಾಜ್ಯಪಾಲರ ಭಾಷಣವನ್ನು ನೋಡಿದ್ದೇವೆ. ಅನೇಕ ವಿಚಾರಗಳನ್ನು ಇಲ್ಲಿ ಚರ್ಚೆ ಮಾಡಿದ್ದೇವೆ. ನಾವು ಸಾಧಿಸಿರುವ ಪ್ರಗತಿ ಬಗ್ಗೆ ನಮಗೇ ಸಮಾಧಾನ ಇಲ್ಲದೇ ಇರಬಹುದು. ಆದರೆ, ತಲೆತಗ್ಗಿಸುವ ಹಾಗೆ ಯಾವತ್ತು ಕೂಡ ನಡೆದುಕೊಂಡಿಲ್ಲ. ಇಲ್ಲಿ ಚರ್ಚೆ ಮಾಡುವಾಗ ರಾಜ್ಯದ ಜನತೆಯ ದುಃಖದುಮ್ಮಾನ ಮತ್ತು ನಮ್ಮ ಮನಸ್ಸಿನಲ್ಲೂ ಕೂಡ ರಾಜ್ಯದ ಪ್ರಗತಿಯಾಗಬೇಕೆಂಬ ಒತ್ತಾಸೆ ಇತ್ತು. ಅದರ ಆಧಾರದ ಮೇಲೆ ಇಲ್ಲಿ ಚರ್ಚೆ ಮಾಡಿದ್ದೇವೆ. ಒಂದೊಂದು ಸಲ ನಮಗೂ ಕೂಡ ಕೋಪ ಬಂದು ಉಪಯೋಗಿಸಬಾರದ ಮಾತುಗಳನ್ನು ಉಪಯೋಗಿಸಿರಬಹುದು. ಧರಣಿ

ಮಾಡಿರಬಹುದು, ಸಭಾತ್ಯಾಗ ಮಾಡಿರಬಹುದು. ಆದರೆ ಯಾವುದನ್ನೂ ಕೂಡ, ವಿರೋಧಪಕ್ಷವಾಗಿ ವಿರೋಧಮಾಡತಕ್ಕ ಕೆಲಸವನ್ನು ಮಾಡದೇ, ನಮಗೆ ಸರಿ ಎನಿಸಿದ ನಿಟ್ಟಿನಲ್ಲಿ ನಾವು ಮಾಡಿದ್ದೇವೆ. ಒಟ್ಟಿನಲ್ಲಿ ನಮ್ಮ ಈ ನಾಲ್ಕು ಮುಕ್ಕಾಲು ವರ್ಷದ ಅನುಭವ ಶ್ರೀಮಂತಿಕೆ ಏನಿದೆ, ಅದು ಅನೇಕ ಜನ ಯುವ ಶಾಸಕರಿಗೆ ಮುಂದಿನ ದಿನಗಳಲ್ಲಿ ಒಳ್ಳೆಯ ಮಾರ್ಗದರ್ಶಕವಾಗಬಹುದು ಎಂದು ನನ್ನ ಪ್ರಾಮಾಣಿಕ ಅನಿಸಿಕೆ. ಮುಖ್ಯಮಂತ್ರಿಗಳಾದ ಜೆ.ಹೆಚ್.ಪಟೇಲರು ನನಗೆ ಒಂದು ರೀತಿಯಲ್ಲಿ Enigma. ಬಹಳ ಮೇಧಾವಿ. ಎಂತಹ ಸಮಯವನ್ನು ಕೂಡ ಕರಗಿಸಬಲ್ಲ ಹಾಸ್ಯ ಪ್ರಜ್ಞೆ, ಜೊತೆಗೆ ಹೃದಯವಂತಿಕೆ. ಪ್ರಾಯಶಃ ನಾವು ಕೂಡ ಬಹಳ ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಇಂತಹರೊಬ್ಬರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ನಾವು ಈ ಸದನದಲ್ಲಿದ್ದೆವು ಎಂದು. ಈ ಸೆನ್ಸ್ ಆಫ್ ಹ್ಯೂಮರ್ ಅಂತೂ ಪ್ರಾಯಶಃ ಯಾರೂ ಇದರ ಜೊತೆ ಹೋಲಿಸುವುದಕ್ಕೆ ಆಗುವುದಿಲ್ಲ. ಹೇಳುತ್ತಾರೆ, ಸೆನ್ಸ್ ಆಫ್ ಹ್ಯೂಮರ್ ಬಹಳ ಕಡಿಮೆಯಾಗಿದೆ. ಸೆನ್ಸ್ ಆಫ್ ರೂಮರ್ ಬಹಳ ಜಾಸ್ತಿಯಾಗಿದೆ ಎಂದು. Rumour is the only thing which become thicker as you spread it.ಎಂದು ಹೇಳುತ್ತಾರೆ. ಅದು ರೆಕ್ಕೆ ಪುಕ್ಕ ಎಲ್ಲಾ ಬೆಳೆದುಕೊಂಡು ಹೋಗುತ್ತದೆ. ರೂಮರ್‌ಗಳಿಗೆ ಅವಕಾಶ ಕೊಡದೇ ಕೆಲಸ ಮಾಡಿದ್ದಾರೆ. ಮೊನ್ನೆ ಅವರು ಬಹಳ ಚೆನ್ನಾಗಿ ಹೇಳಿದರು. ಒಬ್ಬ ಅಧಿಕಾರಿ ಮನೆ ಬಿಟ್ಟು ಆಫೀಸಿಗೆ ಹೋಗಿ, ಆಫೀಸಿನಲ್ಲಿ ನಿದ್ದೆ ಯಾವರೀತಿ ಮಾಡುತ್ತಾರೆ ಎಂಬುದನ್ನು ತಮ್ಮದೇ ಆದ ಶೈಲಿಯಲ್ಲಿ ಹೇಳಿದರು. ಪ್ರಾಯಶಃ ಚುರುಕು ಮುಟ್ಟುವವರಿಗಾದರೆ ಅದು ಮುಟ್ಟಬೇಕು. ಆದರೆ, ಎಲ್ಲಿ ಮುಟ್ಟುತ್ತದೋ ಗೊತ್ತಿಲ್ಲ. ನಾನು ಎನಿಗ್ಮ ಎಂದು ಏಕೆ ಹೇಳಿದೆ ಎಂದರೆ, ಶ್ರೀ ಜೆ.ಹೆಚ್. ಪಟೇಲ್‌ರವರ ಮಂತ್ರಿಮಂಡಲ ಮತ್ತೆ ಇಂಡಿಯನ್ ಕ್ರಿಕೆಟ್ ಟೀಂ ಎರಡೂ ಒಂದೆಯೇ ಎಂದು ನನಗನಿಸುತ್ತದೆ. ಬಹಳ ಒಳ್ಳೊಳ್ಳೆಯ ಪ್ಲೇಯರ್ಸ್ ಇದ್ದಾರೆ. ಎಂ.ಪಿ. ಪ್ರಕಾಶ್, ಭೈರೇಗೌಡರು, ಗೋವಿಂದೇಗೌಡರು, ನಾಗೇಗೌಡರು, ಬಚ್ಚೇಗೌಡರು, ಸೋಮಶೇಖರ್ ಹೀಗೆ ಹೆಸರು ಹೇಳುತ್ತಾ ಹೋಗಬಹುದು, individually very good performers ಆದರೆ ಏಕೋ ವರ್ಲ್ಡ್‌ಕಪ್ ಮ್ಯಾಚ್‌ಗೆ ಹೋದಾಗ, ಸೆಮಿ ಫೈನಲ್ಸ್‌ಗೆ ಹೋಗಲಿಕ್ಕಾಗಲಿಲ್ಲ.As a team, performಮಾಡುವುದಕ್ಕೆ ಏನು ತೊಂದರೆಯಾಯಿತು ಎಂದು ನನಗೆ ಗೊತ್ತಿಲ್ಲ. ಆದರೆ, ನಾನು ಆಗಲೇ ಹೇಳಿದಹಾಗೆ, ನಾವು ಬೇರೆ ರಾಜ್ಯಗಳಿಗೆ ಹೋಲಿಸಿದಾಗ ನಾಚಿಕೆಪಟ್ಟುಕೊಳ್ಳಬೇಕು. You have done your best. You could have done better. ಎನ್ನುವ ಅಂಶ ಕೇವಲ ಸರ್ಕಾರಕ್ಕೆ ಮಾತ್ರವಲ್ಲ,ಈ ಸದನಕ್ಕೆ, ವಿರೋಧಪಕ್ಷಕ್ಕೆ ಪ್ರತಿಯೊಬ್ಬ ಸದಸ್ಯನಿಗೂ ಕೂಡ ಅನ್ವಯವಾಗುತ್ತದೆಂಬುದು ನನ್ನ ಪ್ರಾಮಾಣಿಕ ಅನಿಸಿಕೆ. ಇನ್ನು ಸಭಾಧ್ಯಕ್ಷರಾದ ಶ್ರೀ ರಮೇಶ್ ಕುಮಾರ್‌ರವರು ಒಂದು ರೀತಿಯಿಂದ ಯುವ ಶಾಸಕರಿಗೆ, ಒಬ್ಬ ಸ್ನೇಹಿತನಾಗಿ ಒಬ್ಬ ಮಾರ್ಗದರ್ಶಕನಾಗಿ, ಒಬ್ಬ ತತ್ವಚಿಂತಕನಾಗಿ ನಡೆದುಕೊಂಡಿದ್ದಾರೆ. ಪ್ರಾಯಶಃ ಅಧಿವೇಶನದ ಎರಡನೇ ದಿವಸದಿಂದಲೇ ಪ್ರತಿಯೊಬ್ಬ ಸದಸ್ಯರ ಹೆಸರನ್ನು ಕರೆಯುವಷ್ಟುಮಟ್ಟಿಗೆ ಅವರ ನೆನಪಿನ ಶಕ್ತಿ, ಅವರ ಜಾಣ್ಮೆಯನ್ನು ಕಂಡು ನಾನು ಮೆರಗಾದೆ. ನಾವು ಎಡವಿದಾಗ ತಿದ್ದಿ, ನಾವು ಸ್ವಲ್ಪ ಚೆನ್ನಾಗಿ ಫರ್ಫಾಮೆನ್ಸ್ ಮಾಡಿದಾಗ ಬೆನ್ನುತಟ್ಟಿ ನಮಗೆ ಪ್ರೋತ್ಸಾಹ ನೀಡಿದ್ದಾರೆ. ನಮಗೆ ಒಂದೇ ಅನಿಸುವುದು ಸಭಾಧ್ಯಕ್ಷರಾದ ರಮೇಶ್ ಕುಮಾರ್‌ರಂಥ ವ್ಯಕ್ತಿ ನಮಗೆ 10 ವರ್ಷದ ಮುಂಚೆ

ಸ್ನೇಹಿತರಾಗಿ ಸಿಕ್ಕಿದ್ದರೆ ನಮ್ಮ ನಾಲೆಡ್ಜ್ ಇನ್ನಷ್ಟು ಜಾಸ್ತಿಯಾಗುತ್ತಿತ್ತು ಎಂದು ನನ್ನ ಅನಿಸಿಕೆ. ಒಟ್ಟಾರೆ, ಈ ಸದನ ನಾಲ್ಕುಮುಕ್ಕಾಲು ವರ್ಷ ನಡೆದಿದೆ. ಮಾನ್ಯ ಖರ್ಗೆಯವರು ಹೇಳಿದಹಾಗೆ, ಮುಂದಿನ ಫಲಿತಾಂಶವನ್ನು ಜನಕ್ಕೆ ಬಿಡೋಣ. ಆದರೆ, ನಾವು ಯಾವುದೇ ಕಹಿ ಭಾವನೆ ಇಟ್ಟುಕೊಳ್ಳದೇ, ಈ ಒಂದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಟ್ರಜರಿ ಬೆಂಚ್ ಮತ್ತು ಅಪೊನೆಂಟ್ಸ್ ಹೇಗಿರಬೇಕೋ ಆ ರೀತಿ ನಮ್ಮ ಕರ್ತವ್ಯವನ್ನು ಮಾಡಿದ್ದೇವೆ. ಒಟ್ಟಾರೆ ನೀವು ಆ ಜಾಗದಿಂದ, ನಾವು ಈ ಜಾಗದಿಂದ ಕರ್ನಾಟಕದ ಜನತೆಯ ಆಶೋತ್ತರವನ್ನು ಪ್ರತಿಬಿಂಬಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದ್ದೇವೆಂದು ಹೇಳಿ, ಈ ಸದನದಲ್ಲಿ ನನ್ನದು ಮೊದಲನೇ ಬಾರಿಯಾದರೂ ಕೂಡ ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳುತ್ತೇನೆ. ಹಿರಿಯ ಸದಸ್ಯರಾದ ವೈ. ರಾಮಕೃಷ್ಣರವರು ಅಕಾಲಿಕ ಮರಣಕ್ಕೆ ತುತ್ತಾದುದರಿಂದ, ನನಗೆ ಅನುಭವ ಇಲ್ಲದೇ ಹೋದರೂ ನನ್ನನ್ನು ಈ ಸ್ಥಾನಕ್ಕೆ ಕರೆದುಕೊಂಡು ಬಂದು ಕೂಡಿಸಿದರು. ಹಾಗೆಯೇ ಇನ್ನೊಬ್ಬ ಓರ್ವ ಹಿರಿಯ ಚಿತ್ತರಂಜನ್ ಬಹಳ ಸಂಭಾವಿತ ವ್ಯಕ್ತಿ. ಅವರನ್ನೂ ಕೂಡ ನಾವು ಕಳೆದುಕೊಂಡಿದ್ದೇವೆ. ಈ ರೀತಿ ಸದನದ ಅನೇಕ ಸ್ನೇಹಿತರನ್ನು ಕಳೆದುಕೊಂಡಿದ್ದೇವೆ. ಅವರೆಲ್ಲರನ್ನೂ ಸ್ಮರಿಸಿಕೊಂಡು, ನಮ್ಮ ಶಾಸಕಾಂಗ ಶಾಖೆಯ ಸಿಬ್ಬಂದಿ ಮತ್ತು ಪತ್ರಿಕಾಕರ್ತರು ಕೂಡ ನಮ್ಮ ಓರೆಕೋರೆಗಳನ್ನು ಕಂಡುಹಿಡಿದು ನಮ್ಮ ಕಾರ್ಯವನ್ನು ಪ್ರಗತಿದಾಯಕ ಮಾಡುವುದಕ್ಕೆ ಸಹಾಯ ಮಾಡಿದ್ದಾರೆ, ಅವರೆಲ್ಲರಿಗೂ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮತ್ತೊಂದು ವಿಷಯವೇನೆಂದರೆ, ವಿರೋಧಪಕ್ಷದ ನಾಯಕನಾಗಿ ಇಷ್ಟೊಂದು ಕೆಲಸ ನಿರ್ವಹಿಸುವುದಕ್ಕೆ ನಮ್ಮ ಎಲ್ಲಾ ವಿರೋಧಪಕ್ಷದ ಶಾಸಕರು ಅದು ಬಿಜೆಪಿ ಇರಬಹುದು, ಇಂಡಿಪೆಂಡೆಂಟ್ಸ್ ಇರಬಹುದು, ರೈತ ಸಂಘ, ಸಿ.ಪಿ.ಐ., ಸಿ.ಪಿ.ಎಂ., ಆರ್.ಪಿ.ಐ., ಮತ್ತು ವಾಟಾಳ್ ನಾಗರಾಜುರವರು ಎಲ್ಲರೂ ಕೂಡ ಸಹಕಾರ ಕೊಟ್ಟಿದ್ದಾರೆ. ನನಗೆ ಯಾವುದೇ ತೊಂದರೆ ಇಲ್ಲದೇ ಇವರೆಲ್ಲರೂ ಕೂಡ ಸಹಕಾರ ಕೊಟ್ಟಿದ್ದಕ್ಕಾಗಿ ನಾನು ಅವರಿಗೆ ಹೃತ್ಪೂರ್ವಕವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕಳೆದ ಮೂರೂವರೆ ವರ್ಷಗಳ ಕಾಲ ನನಗೆ ಯಾವ ತೊಂದರೆಯನ್ನು ಕೊಡದೆ ವಿರೋಧಪಕ್ಷದ ನಾಯಕನಾಗಿ ಕೆಲಸ ಮಾಡುವುದಕ್ಕೆ ಸಹಕಾರವನ್ನು ಎಲ್ಲರೂ ಕೊಟ್ಟಿದ್ದಾರೆ. ನಾನು ಅವರಿಗೂ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಇವತ್ತು ಮತ್ತು ನಾಳೆ ಈ ಸದನ ನಡೆಯಬೇಕೆಂದು ನಾವು ನಿಶ್ಚಯ ಮಾಡಿದ್ದೆವು. ಆದರೆ ಇವತ್ತು ಮೂರುಗಂಟೆ ನಂತರ ಮತ್ತೆ ನಾವು ಸಭೆ ಸೇರಿ ಶುಭ ಹೇಳಿ ಮುಕ್ತಾಯ ಮಾಡುವ ಹಂತಕ್ಕೆ ಬಂದಿದ್ದೇವೆ. ಅದಕ್ಕೆ ವಿಧಿ ಎಂದು ಹೇಳುವುದು. ವಿಧಿ ಇದೆಯೋ ಇಲ್ಲವೋ ಗೊತ್ತಿಲ್ಲ. ನಾನಂತೂ ಅದರ ಬಗ್ಗೆ ವ್ಯಾಖ್ಯಾನ ಮಾಡಿಲ್ಲ. ಮತ್ತು ವಿಧಿ ಇದೆ ಅಂತಲೂ ನಾನು ಅಂದು ಕೊಂಡಿಲ್ಲ. ಯಾವ ಘಳಿಗೆಯಲ್ಲಿ ಏನು ಬರುತ್ತದೆಯೋ ಅದನ್ನು ನಾವು ಸ್ವೀಕಾರ ಮಾಡಬೇಕು ತಪ್ಪೇನೂ ಇಲ್ಲ. ಮತ್ತು ಈ ಸಂದರ್ಭದಲ್ಲಿ ನಡೆದಂತಹ ಘಟನೆಗಳನ್ನು ಮೆಲಕು ಹಾಕಬೇಕಾದುದು ನಮ್ಮ ಕರ್ತವ್ಯ. ಅದಕ್ಕೆ ಈ ಸದನವನ್ನು ಕಟ್ಟಿಸಿದಂತಹ ಕೆಂಗಲ್ ಹನುಮಂತಯ್ಯನವರು ಒಂದು ದಿನ ಈ ಪೀಠದಲ್ಲಿ ಕುಳಿತುಕೊಳ್ಳುವುದಕ್ಕೆ ಆಗಲಿಲ್ಲ. ಬಹಳ

ಚೆನ್ನಾಗಿ ಈ ಸದನವನ್ನು ಕಟ್ಟಬೇಕು, ಈ ಸದನ ಆಗಿರಬೇಕು, ಈ ರೀತಿ ಇರಬೇಕು ಎಂದು ಹೇಳಿ, ಈ ಕಟ್ಟಡ ಯಾವ ಯಾವ ರೀತಿ ಇರಬೇಕು, ತಾವೇ ಸ್ವತಃ ಮೇಸ್ತ್ರಿಯ ರೀತಿ ನಿಂತು ಕೆಲಸ ಮಾಡಿಸುತ್ತಿದ್ದರು. ವಿಧಾನಸೌಧ ಆದಮೇಲೆ ಅವರು ಈ ರಾಜ್ಯದ ಮುಖ್ಯಮಂತ್ರಿಯಾಗಿರಲಿಲ್ಲ. ನಾಲ್ಕು ಮುಕ್ಕಾಲು ವರ್ಷಗಳ ಕಾಲ, ಈ ಕರ್ನಾಟಕ ರಾಜ್ಯ ಉದಯವಾಗಬೇಕಾದರೆ ಅವರು ಬಹಳ ಪ್ರಾಮುಖ್ಯವಾದ ಪಾತ್ರವನ್ನು ವಹಿಸಿದರು. ಅವರು ಒಬ್ಬ ಪ್ರಮುಖ ವ್ಯಕ್ತಿ. ಈ ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ನಗರ ರಾಜಧಾನಿ ಆಗಬೇಕಾದರೆ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರೇ ಕಾರಣ. ಅವರು ಈ ವಿಧಾನಸೌಧದ ಎದುರಿಗೆ ಇದ್ದಂತಹ ಕಟ್ಟಡದಲ್ಲಿ ಮುಖ್ಯಮಂತ್ರಿಗಳಾಗಿ ಕೆಲಸ ಮಾಡುತ್ತಿದ್ದರು. ಅವರ ಜೊತೆಯಲ್ಲಿ 9 ಜನ ಮಂತ್ರಿಗಳು ಇದ್ದರು. ಎಲ್ಲರಿಗೂ ಒಂದೇ ತರಹ ಉಡುಪುಗಳು. ಆ ಉಡುಪುಗಳನ್ನು ಧರಿಸಿ ಅವರು ಕಾರ್ಯಾಲಯಕ್ಕೆ ಬರುತ್ತಿದ್ದರು. ಮತ್ತು ಪ್ರತಿಯೊಬ್ಬ ಮಂತ್ರಿಗಳ ಹಿಂದೆ ಒಬ್ಬರು ದಂಡ ಹಿಡಿದುಕೊಂಡು ಹೋಗುತ್ತಿದ್ದರು. ಆ ಒಂದು ದೃಶ್ಯವನ್ನು ನೋಡಿ, ಅದಕ್ಕೆ ಕಾರಣ ಇದನ್ನು ನಾವು ಭವಿಷ್ಯ ಎಂದು ಹೇಳುತ್ತೇವೆಯೋ ಏನು ಎಂದು ಹೇಳುತ್ತವೆಯೋ ಹೇಳುವುದಕ್ಕೆ ಆಗುವುದಿಲ್ಲ. ಯಾವ ಘಳಿಗೆಯಲ್ಲಿ ಏನಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ಸದನದ ಒಳಗೆ ಅಲ್ಲ ಈ ಕಟ್ಟಡದ ಒಳಗೆ ಅವರಿಗೆ ಒಂದು ಕಾರ್ಯಾಲಯ ಸಿಗಲಿಲ್ಲ. ಈ ಕಟ್ಟಡದ ಒಳಗೆ ಆಡಳಿತ ಸುಧಾರಣೆ ಸಮಿತಿ ಮಾಡಿದಾಗ ಅವರಿಗೆ ಒಂದು ಕೊಠಡಿ ಸಿಗಲಿಲ್ಲ. ಆದ್ದರಿಂದ ಯಾವ ಘಳಿಗೆಯಲ್ಲಿ ಯಾರು ಮುಖ್ಯಮಂತ್ರಿಗಳಾಗುತ್ತಾರೆ, ಯಾರೂ ಈ ಸ್ಥಳದಲ್ಲಿ ಬರುತ್ತಾರೆ, ಮತ್ತು ಈ ಪೀಠವನ್ನು ಯಾವ ಯಾವ ಸಂದರ್ಭದಲ್ಲಿ ಯಾರು ಅಲಂಕರಿಸುತ್ತಾರೆಂದು ಹೇಳುವುದಕ್ಕೆ ಆಗುವುದಿಲ್ಲ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಈ ಸದನವನ್ನು ಉದ್ಘಾಟನೆ ಮಾಡಬೇಕಾಯಿತು. ಯಾವ ಘಳಿಗೆಯಲ್ಲಿ ಏನಾಗುತ್ತದೆಂದು ಹೇಳುವುದಕ್ಕೆ ಆಗುವುದಿಲ್ಲ. ಒಂದು ಸಂತೋಷ. ಹನುಮಂತಯ್ಯನವರ ಕಾಲವನ್ನು ನಾನು ಶಾಸಕನಾಗದಿದ್ದರೂ ಆದರ್ಶವಾದಂತಹ ಕಾಲವನ್ನು ನೋಡಿದ್ದೇವೆ. ಈ ಸದನವನ್ನು ಕಟ್ಟಿಸುವಂತಹ ಸೌಭಾಗ್ಯ ಆ ದೃಶ್ಯವನ್ನು ನಾವು ನೋಡಿದ್ದೇವೆ. ಮತ್ತು ಈ ಸದನದಲ್ಲಿ ಬಹಳ ದೊಡ್ಡ ದೊಡ್ಡ ದಿಗ್ಗಜಗಳು ಶ್ರೀಮಾನ್ ನಿಜಲಿಂಗಪ್ಪನವರು, ಮುಖ್ಯಮಂತ್ರಿಗಳಾಗಿ ಆ ಸ್ಥಳದಲ್ಲಿ ಕುಳಿತುಕೊಂಡಿದ್ದು ನಾವು ಈ ಕಡೆ ಸದಸ್ಯರಾಗಿ ಕುಳಿತುಕೊಂಡಂತಹ ಸೌಭಾಗ್ಯವನ್ನು ಪಡೆದಿದ್ದು ಆಯಿತು. ನಮ್ಮ ಪಕ್ಕದಲ್ಲಿ ಸಾಹುಕಾರ್ ಚೆನ್ನಯ್ಯನವರು, ಈ ಸದನದಲ್ಲಿ ಕುಳಿತು ನಮ್ಮ ಜೊತೆಯಲ್ಲಿ ಕೆಲಸ ಮಾಡಿದಂತಹ ಇತಿಹಾಸವನ್ನು ನಾವು ಕಂಡಿದ್ದು ಆಯಿತು. ಶ್ರೀಮಾನ್ ವೈಕುಂಠಬಾಳಿಗರನ್ನು ಈ ಸದನದಲ್ಲಿ ನೋಡಿದಾಗ ಇಡೀ ಸದನಕ್ಕೆ ತುಂಬಾ ಗೌರವ ಇತ್ತು. ಅವರು ಗಾಂಧಿ ಟೋಪಿಯನ್ನು ಹಾಕಿಕೊಂಡು ಆ ಕಡೆಯಿಂದ ಬಂದು ಕುಳಿತರೆ ಇಡೀ ಸದನದ ತುಂಬಾ ಅವರು ಕಾಣುತ್ತಾ ಇರತಕ್ಕಂಥ ದೃಶ್ಯವನ್ನು ನಾವು ನೋಡಿದ್ದೇವೆ. ಈ ಸದನದಲ್ಲಿ ಶ್ರೀಮಾನ್ ಎಸ್. ಶಿವಪ್ಪನವರು ವಿರೋಧಪಕ್ಷದ ನಾಯಕರಾಗಿದ್ದರು. ಶ್ರೀಮಾನ್ ದೇವೇಗೌಡರು ವಿರೋಧಪಕ್ಷದ ನಾಯಕರಾಗಿದ್ದರು. ಶ್ರೀಮಾನ್ ಚಂದ್ರೇಗೌಡರು, ಶ್ರೀಮಾನ್ ದೇಶಪಾಂಡೆ, ಶ್ರೀಮಾನ್ ಯಡಿಯೂರಪ್ಪನವರು ಶ್ರೀಮಾನ್ ಖರ್ಗೆಯವರು ಎಲ್ಲರೂ ವಿರೋಧಪಕ್ಷದ ನಾಯಕರಾಗಿ ಇದ್ದಾಗ ನಾವು ಬರತಕ್ಕಂಥ ಒಂದು ಸಂದರ್ಭ, ಒಂದು ಸುಯೋಗ, ಸುವರ್ಣಾವಕಾಶ ನನಗೆ ಸಿಕ್ಕಿತು.

ಅದಕ್ಕೆ ನಾನು ಸಂತೋಷಪಟ್ಟಿದ್ದೇನೆ. ಶ್ರೀಮಾನ್ ಗೋಪಾಲಗೌಡರದ್ದು ಒಂದು ವಿಶಿಷ್ಟವಾದಂತಹ ವ್ಯಕ್ತಿತ್ವ. ಅವರು ಈ ಸದನದಕ್ಕೆ ಹೇಳಿ ಮಾಡಿಸಿದಂತಹ ಒಬ್ಬ ವ್ಯಕ್ತಿ. ಅವರು ಸಮಾಜವಾದದಿಂದ, ಬೆಳೆದು ಬಂದವರು. ಅವರು ಕನ್ನಡದ ಧೀಮಂತ ಶಕ್ತಿಯಾಗಿ ಬಂದವರು. ಶ್ರೀಮಾನ್ ಗೋಪಾಲಗೌಡರು ಶಾಸಕರ ಭವನದಿಂದ ಇಲ್ಲಿಗೆ ಬರುವಂತಾದ್ದು ಒಂದು ವೈವಿಧ್ಯಮಯ. ಅವರು ಜುಬ್ಬ, ಕಚ್ಚೆ, ಅದನ್ನು ನೀಟಾಗಿ ತೀಡಿ ವ್ಯವಸ್ಥಿತವಾಗಿ ಬರುತ್ತಿದ್ದರು. ಜುಬ್ಬ ಸರಿ ಇರಬೇಕು, ಕಚ್ಚೆ ಸರಿ ಇರಬೇಕು, ಕೈಯಲ್ಲಿ ಬೆತ್ತ ಇರಬೇಕು ಇವೆಲ್ಲಾ ಇತಿಹಾಸದಲ್ಲಿ ತಿಳಿದಿರುವವರಿಗೆ ಮಾತ್ರ ಗೊತ್ತು. ನೋಡಿರುವವರಿಗೆ ಮಾತ್ರ ಗೊತ್ತು. ಇಂತಹವರ ಇತಿಹಾಸವನ್ನು ಬರೆಯುವುದಾದರೆ ಒಂದು ದೊಡ್ಡ ದೊಡ್ಡ ಗ್ರಂಥಗಳು ಆಗುತ್ತವೆ. ಈ ಸದನದಲ್ಲಿ ಕೆಲಸ ಮಾಡಿದ ಇತಿಹಾಸ ಪುರುಷರು ಯಾರ್‍ಯಾರು ಇದ್ದಾರೆ ಅವರ ಬಗ್ಗೆ ಇತಿಹಾಸ ಬರೆದರೆ ಒಳ್ಳೆಯದು. ಅವರು ಅವತ್ತು ರಾಜಕಾರಣಿಗಳಾಗಿ ಈ ರಾಜ್ಯದ ಸೇವೆ ಮಾಡಿದರು. ಇವತ್ತು ಅವರು ದೈವತ್ವಕ್ಕೆ ಹೋಗಿದ್ದಾರೆ. ಇವತ್ತು ಶ್ರೀಮಾನ್ ಹನುಮಂತಯ್ಯನವರು ಆಗಿರಬಹುದು, ನಿಜಲಿಂಗಪ್ಪನವರು ಆಗಿರಬಹುದು ಬಿ.ಡಿ.ಜತ್ತಿಯವರು ಆಗಿರಬಹುದು, ಅವರನ್ನು ನೋಡಿದಾಗ ಈ ಸದನದಲ್ಲಿ ನಾನು ಎಸ್.ಆರ್. ಕಂಠಿಯವರನ್ನು ನೋಡಿದ್ದೇನೆ. ಸಿ.ಜೆ. ಮುಕ್ಕಣ್ಣಪ್ಪನವರು ಮತ್ತು ಕಂಠಿಯವರಿಗೆ ಆದಂತಹ ಆ ಘರ್ಷಣೆಗಳು ಮುಕ್ಕಣ್ಣಪ್ಪ ಅಲ್ಲ ಮೂರು ಕಣ್ಣಪ್ಪ ಬಂದರೂ ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿ ಅಲ್ಲಿ ಕುಳಿತು ಕಂಠಿಯವರು ಹೇಳಿದಂತಹ ಅನೇಕ ವಿಚಾರಗಳನ್ನು ನಾನು ನೋಡಿದ್ದೇನೆ. ಈ ಸದನವನ್ನು ಅತಿ ಎತ್ತರಕ್ಕೆ ಬೆಳೆಸಿದಂತಹ ವ್ಯಕ್ತಿಗಳನ್ನು ಸಹ ನಾನು ನೋಡಿದ್ದೇನೆ. ತಾವು ಈ ಸದನಕ್ಕೆ ಬಂದಾಗ ನಮಗೆಲ್ಲರಿಗೂ ಬಹಳ ಸಂತೋಷವಾಯಿತು. ಬಹಳ ಹೋರಾಟದ ಹಿನ್ನೆಲೆಯಲ್ಲಿ ತಾವು ಈ ಸದನಕ್ಕೆ ಬಂದಿದ್ದೀರಿ. ಬಹುಶಃ ತಮ್ಮನ್ನು ತಂದು ಇಲ್ಲಿ ಕೂರಿಸಬೇಕೆಂದು ಹೇಳಿ ತೆರೆಯ ಮರೆಯಲ್ಲಿ ತಂದು ಕೂರಿಸಿರಬೇಕೆಂದು ನಾನು ಅಂದು ಹೇಳಿದೆ. ಆದರೆ ತಮ್ಮಂತಹವರು ಅಲ್ಲಿಗೆ ಬಂದಿದ್ದೆ ಒಳ್ಳೆಯದಾಯಿತು. ತಾವು ನಡೆದು ಬಂದಂತಹ ದಾರಿ ಮೆಚ್ಚತಕ್ಕಂಥಾದ್ದು, ಸಂತೋಷ ಪಡತಕ್ಕಂಥಾದ್ದು, ಒಂದು ಮಾತನ್ನು ನಾನು ಈ ಹಿಂದೆಯೇ ಹೇಳಿದ್ದೇನೆ. ನಮ್ಮ ಎಲ್ಲಾ ವಿರೋಧಪಕ್ಷದ ನಾಯಕರಿಗೆ ಯಾರು ಶಾಸನ ಸಭೆಯ ಅಧ್ಯಕ್ಷರಾಗುತ್ತಾರೆ ಅವರು ಚುನಾವಣೆಗೆ ನಿಂತಾಗ ಅವರ ಮೇಲೆ ಯಾವುದೇ ಪಕ್ಷದವರು ಅಭ್ಯರ್ಥಿಗಳನ್ನು ಹಾಕಬಾರದು ಎನ್ನತಕ್ಕಂಥಾ ಒಂದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಂದು ಕನಿಷ್ಟ ವ್ಯವಸ್ಥೆ ಬೇಕು. ಆ ಪೀಠ ಇಲ್ಲಿ ಪಕ್ಷಾತೀತವಾಗಿರತಕ್ಕಂಥಾದ್ದು. ಆ ಪೀಠದ ಅಧ್ಯಕ್ಷರಾಗಿರುವಂತಹವರ ಮೇಲೆ ಯಾವುದೇ ಪಕ್ಷದವರು ಸ್ಪರ್ಧೆ ಮಾಡಬಾರದು. ಅದನ್ನು ನಾವು ಒಂದು ಶಿಷ್ಟಾಚಾರ ಎಂದು ಹೇಳಿ ತಿಳಿದುಕೊಂಡರೆ ಆ ಸ್ಥಾನಕ್ಕೂ ನಾವು ಒಂದು ಗೌರವವನ್ನು ಕೊಟ್ಟಂತೆ ಆಗುತ್ತದೆ. ಮತ್ತು ಈ ಸ್ಥಾನಕ್ಕೆ ಬರುವಂತಹವರು ಆದರ್ಶವನ್ನು ಮೇಲಕ್ಕೆ ಎತ್ತತಕ್ಕಂಥಾದ್ದಕ್ಕೆ ಅವಕಾಶವಾಗುತ್ತದೆ. ಈ ಸಾರಿಯಾದರೂ ನಾನು ಎಲ್ಲಾ ಪಕ್ಷದವರಿಗೂ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ ಶ್ರೀ ರಮೇಶ್ ಕುಮಾರ್ ಎಂದು ಅಲ್ಲ, ಅವರು ಸ್ವತಂತ್ರವಾಗಿ ಸ್ಪರ್ಧೆ ಮಾಡಲಿ ಯಾವ ಪಕ್ಷವೂ ಅವರಿಗೆ ಬೇಕಾಗಿಲ್ಲ. ನಿಮ್ಮ ಮೇಲೆ ನಾವು ಯಾವ ಅಭ್ಯರ್ಥಿಯನ್ನು ಹಾಕುವುದಿಲ್ಲ ಎಂದು ಒಂದು ತೀರ್ಮಾನಕ್ಕೆ ಎಲ್ಲಾ ಪಕ್ಷಗಳು ಬಂದರೆ ಆಗ ಕರ್ನಾಟಕ ರಾಜ್ಯ ಮಾದರಿ ರಾಜ್ಯ ಆಗುತ್ತದೆ. ಆ ಅಧ್ಯಕ್ಷ ಪೀಠವನ್ನು ನಾವು ಶಕ್ತಿಯುತವಾಗಿ

ಕಾಣುವುದಕ್ಕೆ ಅವಕಾಶವಾಗುತ್ತದೆ. ಇಡೀ ಭಾರತ ದೇಶದಲ್ಲಿ ಮಾದರಿಯಾಗುತ್ತೇವೆ. ಕರ್ನಾಟಕ ರಾಜ್ಯದ ಅಧ್ಯಕ್ಷರು ಸ್ಪರ್ಧೆಗೆ ಇಳಿದಾಗ ಅವರ ವಿರುದ್ಧ ಯಾರು ಸ್ಪರ್ಧೆ ಮಾಡಲಿಲ್ಲ ಎನ್ನುತಕ್ಕಂಥ ಚರಿತ್ರೆಯನ್ನು ನಿರ್ಮಾಣ ಮಾಡೋಣ ಎನ್ನತಕ್ಕಂಥಾದ್ದು ನನ್ನ ಪ್ರಾಮಾಣಿಕ ಅನಿಸಿಕೆ. ನಾನು ಅವರಿಗೆ ಈಗಾಗಲೇ ಭರವಸೆ ಕೊಟ್ಟಿದ್ದೇನೆ ನೀವು ಯಾವ ಕ್ಷೇತ್ರದಲ್ಲಿಯೇ ನಿಲ್ಲಲಿ. ಕನಿಷ್ಠ ನಾನು ಈ ಜನಗಳ ಮುಂದೆ ಒಂದು ಭಾಷಣ ಮಾಡಿ ತಮಗೆ ಮತ ಹಾಕಿ ಎಂದು ಕೇಳುವುದಕ್ಕೆ ಸಿದ್ಧವಾಗಿದ್ದೇನೆ. ನಿಮ್ಮ ಕಾಲದಲ್ಲಿ ಗಂಟೆಯನ್ನೇ ಹೊಡೆಯದೆ ಅಧ್ಯಕ್ಷರಾಗಿ ತಾವು ತಮ್ಮ ಪೀಠದಲ್ಲಿ ಕಾರ್ಯ ನಿರ್ವಹಿಸಿರುವುದು ಇತಿಹಾಸದಲ್ಲಿಯೇ ಪ್ರಪ್ರಥಮ. ಇದು ನಿಜವಾಗಿಯೂ ಒಂದು ದಾಖಲೆ. ನಿಮ್ಮ ಹಾವಭಾವದಲ್ಲಿಯೇ ನಮಗೆ ಮಾರ್ಗ ತೋರಿಸುತ್ತಿದ್ದೀರಿ. ನೀವು ಮುಖ ಆ ಕಡೆ ತೋರಿಸಿದಾಗ ಇವತ್ತು ನಮ್ಮ ಭಾಷಣ ಸರಿ ಇಲ್ಲವೇನೋ ಎಂದು ಕೊಳ್ಳುವುದು. ತಾವು ತೀರಾ ಸಂತೋಷವಾಗಿದ್ದಾಗ ನಮ್ಮ ಭಾಷಣ ಚೆನ್ನಾಗಿದೆ ಎಂದು ಅಂದುಕೊಳ್ಳುವುದು. ತಾವು ಬಹಳ ಬುದ್ಧಿವಂತಿಕೆಯಿಂದ ಈ ಸದನವನ್ನು ನಡೆಸಿದ್ದೀರಿ.

5.00 ಪಿ.ಎಂ

ಮತ್ತೆ ನಾವು ಈ ಸದನದ ಅಧ್ಯಕ್ಷರಾಗಿ ಬರಬೇಕೆಂದು ನನಗೆ ಆಸೆ ಆಕಾಂಕ್ಷೆಗಳು ಇವೆ. ಹಾಗೆಯೇ ಇಲ್ಲಿ ಅಧ್ಯಕ್ಷರಾಗಿ ಇದ್ದವರ ಮೇಲೆ ಯಾರೂ ಚುನಾವಣೆಯಲ್ಲಿ ಸ್ಪರ್ಧೆಗೆ ಇಳಿಯಬಾರದು ಎಂದು ನನ್ನ ಸಲಹೆಯನ್ನು ಕೂಡ ಕೊಡಬಯಸುತ್ತೇನೆ. ಅಧ್ಯಕ್ಷರ ಸ್ಥಾನಕ್ಕೆ ಬರುವುದು ಶಾಪ ಎಂದು ಕೆಲವರು ಹೇಳಬಹುದು. ನಾನು ಅದನ್ನು ಒಂದು ವರ ಎಂದು ಹೇಳಬಯಸುತ್ತೇನೆ. ಆ ಸ್ಥಳವನ್ನು ಅಲಂಕರಿಸುವುದು ಒಂದು ರೀತಿಯಲ್ಲಿ ಪೂರ್ವಜನ್ಮದ ಪುಣ್ಯ. ಒಂದು ಪಕ್ಷದ ನಾಯಕರಾಗಿ ಇರಬಹುದು, ಮುಖ್ಯಮಂತ್ರಿಗಳಾಗಿ ಇರಬಹುದು, ವಿರೋಧಪಕ್ಷದ ನಾಯಕರಾಗಿರಬಹುದು. ಆದರೆ ಇಲ್ಲಿ ಎಲ್ಲರನ್ನೂ ಗುರುತಿಸತಕ್ಕಂಥ ಒಂದು ಸ್ಥಳವಿದ್ದರೆ ಅದು ಅಧ್ಯಕ್ಷಸ್ಥಾನ ಎಂದು ಹೇಳುತ್ತೇನೆ. ಆ ಪೀಠವು ಬಹಳ ಮಹತ್ವವುಳ್ಳದ್ದು, ಅದೊಂದು ನ್ಯಾಯದೇಗುಲವಾಗಿದೆ. ಹೀಗಾಗಿ ಆ ಸ್ಥಳವನ್ನಲಂಕರಿಸುವುದು ಪೂರ್ವಜನ್ಮದ ಪುಣ್ಯ ಎಂದು ಹೇಳಬೇಕಾಗುತ್ತದೆ. ತಾವುಗಳು ಆ ಸ್ಥಾನಕ್ಕೆ ಬರುವುದಕ್ಕೆ ಎಲ್ಲಾ ಯೋಗ್ಯತೆಗಳನ್ನು ಪಡೆದಿರುತ್ತೀರಿ. ಮತ್ತೆ ತಾವುಗಳು ಆ ಸ್ಥಾನವನ್ನು ಅಲಂಕರಿಸಬೇಕೆಂದು ಭಗವಂತನಲ್ಲಿ ನಾವು ಪ್ರಾರ್ಥಿಸುತ್ತೇವೆ. ಶಾಸಕಾಂಗದ ಅಧಿಕಾರಿ ವರ್ಗದವರು, ಸಿಬ್ಬಂದಿ ವರ್ಗದವರು ಎಲ್ಲರೂ ಒಳ್ಳೆಯವರು. ಕಾರ್ಯದರ್ಶಿಯವರಿಂದ ಹಿಡಿದು ಒಬ್ಬ ಸಾಮಾನ್ಯ ಸೇವಕನವರೆಗೂ ಎಲ್ಲರೂ ಒಳ್ಳೆಯ ಸಿಬ್ಬಂದಿವರ್ಗದವರು. ನಾವು ಎಷ್ಟೋ ಸಾರಿ ಗದ್ದಲ ಗಲಾಟೆಗಳನ್ನು ಮಾಡಿದಾಗಲೂ ಬಹಳ ಪ್ರೀತಿವಿಶ್ವಾಸಗಳಿಂದ ಕಂಡಿದ್ದಾರೆ. ಅವರುಗಳಿಗೂ ನಮ್ಮ ಅಭಿನಂದನೆಗಳು ತಾವುಗಳು ಅಧ್ಯಕ್ಷರಾಗಿ ಮುಂದುವರಿಯಲೇ ಬೇಕು. ನಾನು ಕೂಡ ಇಲ್ಲಿ ಸದಸ್ಯನಾಗಿ ಮುಂದುವರಿಯುತ್ತೇನೆ. ಅದರಲ್ಲಿ ಯಾವ ಸಂಶಯವೂ ಬೇಡ. ತಾವುಗಳು ಅಧ್ಯಕ್ಷರಾಗಿ ಮುಂದುವರಿದರೆ ಅದು ಬಹಳ ಚೆಂದ ಎಂದು ಹೇಳಿ ನನ್ನ ವೈಯಕ್ತಿಕ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಸದಸ್ಯರು ಹೇಳಿದ ಹಾಗೆ ಅಧ್ಯಕ್ಷರು ಆ ಸ್ಥಾನದಲ್ಲಿ ಮುಂದುವರಿಯಬೇಕು. ಶ್ರೀಮತಿ ಬಿ.ಟಿ. ಲಲಿತಾನಾಯಕ್‌ರವರು ಹೇಳಿದ ಹಾಗೆ ಉಪಾಧ್ಯಕ್ಷರುಗಳು

ಮುಂದುವರಿಯಬೇಕು, ಹಾಗೆಯೇ ಈ ಸದನದಲ್ಲಿ ಯಾರು ಜಾಸ್ತಿ ಮಾತನಾಡಿದ್ದಾರೋ ಅವರು ಕೂಡ ಮುಂದುವರಿಯಬೇಕೆಂದು ಒಂದು ನಿರ್ಣಯ ಮಾಡೋಣವೇ?

ಶ್ರೀ ವಾಟಾಳ್ ನಾಗರಾಜ್ : ಇದು ತಮಗೆ ಒಂದು ರೀತಿಯಲ್ಲಿ ಹಾಸ್ಯವಾಗಿ ಕಂಡಿರಬಹುದು. ಆದರೆ ಇದರಲ್ಲಿ ಅಡಗಿರುವ ಒಂದು ತತ್ವವನ್ನು ತಾವುಗಳು ಗುರುತಿಸಬೇಕು. ನಮ್ಮ ರಾಜ್ಯದ ಈ ಅವಧಿಯ ಮೊದಲ ಮುಖ್ಯಮಂತ್ರಿಗಳಾಗಿ ಮಾನ್ಯ ದೇವೇಗೌಡರು ಕೆಲಸವನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ನಾವು ಒಬ್ಬರ ಬಗ್ಗೆ ರಾಜಕೀಯವಾಗಿ ಮಾತನಾಡಬಹುದು, ವಾದ ಮಾಡಬಹುದು, ಯಾವುದೇ ಜಿಜ್ಞಾಸೆಗಳನ್ನು ಮುಂದಿಡಬಹುದು. ಆದರೆ ಒಬ್ಬ ಮುಖ್ಯಮಂತ್ರಿಯಾಗಿ ಬೆಳಿಗ್ಗೆ ಐದು ಗಂಟೆಗೆ ಎದ್ದು ರಾತ್ರಿ 10-11ಗಂಟೆಯವರೆಗೆ ದುಡಿದು ಶ್ರಮಿಸಿದ ಒಂದು ಇತಿಹಾಸವನ್ನು ಮಾನ್ಯ ದೇವೇಗೌಡರು ಮಾಡಿದ್ದಾರೆ. ಅವರು ಮುಖ್ಯಮಂತ್ರಿ ಯಾಗಿದ್ದಾಗ ಹೆಚ್ಚಿನ ರೀತಿಯಲ್ಲಿ ಎಲ್ಲರೊಂದಿಗೆ ಹೊಂದಿಕೊಂಡು ಕೆಲಸ ಮಾಡಿದ್ದಾರೆ. ಅವರು ಈ ರಾಜ್ಯದ ಮುಖ್ಯಮಂತ್ರಿಯಾಗುವ ಜೊತೆಗೆ ದೇಶದ ಪ್ರಧಾನಿಯಾದುದು ನಮ್ಮೆಲ್ಲರಿಗೂ ಅತ್ಯಂತ ಅಭಿಮಾನ ಮತ್ತು ಹೆಮ್ಮೆಯನ್ನು ತಂದ ವಿಚಾರ. ಕರ್ನಾಟಕ ರಾಜ್ಯದ ಒಬ್ಬ ರಾಜಕಾರಣಿ ದೇಶದ ಪ್ರಧಾನಿಯಾದುದು ನಮ್ಮ ರಾಜ್ಯಕ್ಕೆ ಮತ್ತು ರಾಜ್ಯದ ಐದು ಕೋಟಿ ಜನರಿಗೆ ತಂದಂಥ ಒಂದು ಶೋಭಾಯಮಾನವಾದ ಕಿರೀಟ ಎಂದು ಹೇಳಬಯಸುತ್ತೇನೆ. ಅವರು ಒಮ್ಮೆ ರಾಜ್ಯಸಭೆಗೆ ನಿಂತಾಗ ದೂರವಾಣಿಯ ಮೂಲಕ ನಿಮ್ಮ ಮತವನ್ನು ಹಾಕಬೇಕೆಂದು ಕೇಳಿಕೊಂಡರು. ನಾನು ವಿನಯದಿಂದ ಅವರಿಗೆ ಇದನ್ನು ದೂರವಾಣಿಯಲ್ಲಿ ಹೇಳಬಾರದಿತ್ತು. ಮಾನ್ಯ ಪಿ.ವಿ. ನರಸಿಂಹರಾಯರನ್ನು ಆಂಧ್ರದವರು ಮತ್ತು ಬೇರೆ ಬೇರೆ ರಾಜ್ಯದವರು ನಮ್ಮಲ್ಲಿ ಸ್ಪರ್ಧಿಸಿ ಎಂದು ಕರೆಯುತ್ತಾ ಇದ್ದಾರೆ, ಆದರೆ ನಮ್ಮ ರಾಜ್ಯದಲ್ಲಿ ನಿಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡುವುದಕ್ಕೆ ನಾನು ಮತ್ತಿತ್ತರರು, ಮಾನ್ಯ ಜೆ.ಹೆಚ್. ಪಟೇಲ್‌ರವರು, ಯಡಿಯೂರಪ್ಪನವರು ಮುಂತಾಗಿ ಪ್ರತಿಯೊಬ್ಬರೂ ನಿಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಬೇಕೆಂಬ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ನಿಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡುತ್ತೇವೆ ಎಂಬ ಮಾತನ್ನು ನಾನು ಅವರಿಗೆ ಹೇಳಿದೆ. ಅವರು ಪ್ರಧಾನಿಯಾಗಿದ್ದರೂ ನಮ್ಮಂಥವರೊಂದಿಗೆ ಮಾತನಾಡುವಾಗ ಏನು ಗುರುಗಳೇ? ಹೇಗಿದ್ದೀರಿ? ಎಂದು ತುಂಬಾ ವಿನಯದಿಂದ ಮಾತನಾಡುವ ಸ್ವಭಾವದವರು. ಅವರ ನಂತರ ಮಾನ್ಯ ಜೆ.ಹೆಚ್. ಪಟೇಲ್‌ರವರು ಇಲ್ಲಿ ಮುಖ್ಯಮಂತ್ರಿಗಳಾದರು. ಈ ಒಂದು ಸ್ಥಿತಿಯಲ್ಲಿ ಅವರು ಮೂರೂವರೆ ವರ್ಷಗಳ ತನಕ ಮುಖ್ಯಮಂತ್ರಿಗಳಾಗಿ ಹೇಗಿದ್ದರು ಎಂದು ನನಗೇ ಆಶ್ಚರ್ಯವಾಗುತ್ತಿದೆ. ಅವರಲ್ಲಿರುವ ಒಲುವು, ನಲಿವು, ಮೆದುವು, ಪ್ರೀತಿ ವಿಶ್ವಾಸಗಳು ಎಲ್ಲರನ್ನು ಆಕರ್ಷಿಸಿದ್ದುವು. ಅವರಲ್ಲಿನ ವ್ಯಕ್ತಿತ್ವವನ್ನು ಅವಲೋಕಿಸಿದಾಗ ಅವರು ಭಾರತ ದೇಶದಲ್ಲಿಯೇ ಒಂದನೇ ಸ್ಥಾನವನ್ನು ಪಡೆಯತಕ್ಕಂಥ ಅರ್ಹ ವ್ಯಕ್ತಿ. ಎಂಥ ಕ್ಲಿಷ್ಟ ಸಂದರ್ಭದಲ್ಲಿಯೂ ಅದನ್ನು ನಿಭಾಯಿಸುವ ಅವರ ಕರ್ತೃತ್ವ ಶಕ್ತಿಯು ಶ್ಲಾಘನೀಯ. ನನಗೂ ಅವರಿಗೂ 30-35ವರ್ಷಗಳಷ್ಟು ದೀರ್ಘ ಬಾಂಧವ್ಯ. ನಾನು ಬಂಗಾರಪ್ಪನವರು, ಕಾಗೋಡುತಿಮ್ಮಪ್ಪನವರು, ಮೊದಲಾಗಿ ನಾವೆಲ್ಲರೂ ಹಗಲೂ ರಾತ್ರಿ ಎನ್ನದೆ ಅವರ ಜೊತೆಯಲ್ಲಿ ಓಡಾಡಿದ್ದೇವೆ. ತನ್ನೊಂದಿಗಿರುವವರೊಂದಿಗೆ ಅವರು ತೋರುವ ಹೃದಯ ವೈಶಾಲ್ಯತೆಯು ಅಮೋಘವಾದುದು. ಆದುದರಿಂದ ಅವರು ಮತ್ತೊಮ್ಮೆ ಈ ರಾಜ್ಯದ ಮುಖ್ಯಮಂತ್ರಿಯಾಗಿ

ಬರಲಿ ಎಂದು ಬಯಸುತ್ತೇನೆ. ಆ ತರಹದ ವ್ಯಕ್ತಿತ್ವವು ಈ ರಾಜ್ಯಕ್ಕೆ ಬೇಕು ಎಂದು ಪ್ರಾಮಾಣಿಕವಾಗಿ ಹೇಳಬಯಸುತ್ತೇನೆ. ಅವರು ಸಭೆಗೆ ಬಂದು ಕುಳಿತರೂ ಸಾಕು ಸಭೆಯಲ್ಲಿ ಲವಲವಿಕೆ ಉಂಟಾಗುತ್ತದೆ. ಎಂಥ ಸಮಸ್ಯೆಗಳು ಇದ್ದರೂ ಅದು ಅವರ ಆಗಮನದಿಂದ ದೂರವಾಗುತ್ತಿತ್ತು. ಅವರುಗಳು ಎಂಥೆಂಥ ಸಂದರ್ಭದಲ್ಲಿ ಏನೇನು ಮಾತನಾಡಿದ್ದಾರೆ ಅದನ್ನು ಒಂದು ಪುಸ್ತಕದ ರೂಪದಲ್ಲಿ ಬರೆಯಬೇಕು. ಅವರ ಹಾಸ್ಯದ ಮಾತುಗಳಲ್ಲಿಯೂ ಗಾಂಭೀರ್ಯತೆಯು ತುಂಬಿರುತ್ತಿತ್ತು. ಅವರ ಒಂದು ಮಾತನ್ನು ನಾನು ಮೆಲುಕು ಹಾಕಬಯಸುತ್ತೇನೆ. ಮಹಿಳಾ ಅಧ್ಯಕ್ಷರಾಗುವುದಕ್ಕೆ ನನಗೆ ಬೇಡಿ ಎಂದು ನೀವು ಹೇಳಿ ನಾಳೆ ಮಾನ್ಯ ಪಟೇಲರು ಬರಲಿ ಅವರು ಮಾತನಾಡುತ್ತಾರೆ ಎಂದು ಹೇಳಿದ್ದೀರಿ. ಮಾನ್ಯ ಅಧ್ಯಕ್ಷರಾದ ತಾವುಗಳು ವಾಟಾಳ್‌ನಾಗರಾಜ್‌ರವರು ಮಹಿಳಾ ಅಧ್ಯಕ್ಷರಾಗುವುದಕ್ಕೆ ಒಪ್ಪುತ್ತಾ ಇಲ್ಲ ಅದಕ್ಕೆ ತಾವೇನು ಹೇಳುತ್ತೀರಿ ಎಂದು ಪಟೇಲ್ ಅವರನ್ನು ಕೇಳಿದಿರಿ. ಅದಕ್ಕೆ ಪಟೇಲ್‌ರವರು ಮಾತನಾಡಿ ವಾಟಾಳ್‌ನಾಗರಾಜ್‌ರವರು ಶ್ರೀರಾಮ ಇದ್ದಹಾಗೆ. ನಾನು, ನಂಜೇಗೌಡರು ಕೃಷ್ಣನ ಕುಲಕ್ಕೆ ಸೇರಿದವರು. ಯಾರು ಮಹಿಳಾ ಅಧ್ಯಕ್ಷರಾಗಬೇಕೆಂದು ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ಕೇಳುತ್ತೇನೆ ಎಂದು ಹೇಳಿದರು. ಇದು ಎಂಥ ಮಾತು? ಇದರ ಹಿಂದಿನ ಅರ್ಥ ಏನು? ಇದರಲ್ಲಿ ಅಡಗಿರುವ ಪ್ರೌಢಿಮೆ ಯಾವುದು ಇದರ ಬಗ್ಗೆ ನಾವೇನು ಹೇಳಬೇಕು?

ಅಧ್ಯಕ್ಷರು : ವಾಟಾಳ್‌ರವರು ಮಾನ್ಯ ಪಟೇಲ್‌ರವರ ಮೇಲಿಟ್ಟ ಗೌರವಭಾವನೆಯನ್ನು ನೋಡಿ ವಾಟಾಳ್‌ನಾಗರಾಜ್‌ರವರ ಮೇಲೆ ನನಗೆ ಗೌರವ ಜಾಸ್ತಿಯಾಯಿತು.

ಶ್ರೀ ವಾಟಾಳ್ ನಾಗರಾಜ್: ಒಟ್ಟಿನಲ್ಲಿ ಪಟೇಲ್‌ರವರಂಥವರನ್ನು ಪಡೆಯಲು ನಾವು ಪುಣ್ಯ ಮಾಡಿದ್ದೇವೆ. ನಾವು ಯಾವ ಪಕ್ಷದವರೇ ಆಗಿರಬಹುದು. ಅಂಥವರನ್ನು ಪಡೆದ ಈ ರಾಜ್ಯ ಧನ್ಯ ಎಂಬ ಮಾತನ್ನು ಹೇಳಬಯಸುತ್ತೇನೆ. ಮತ್ತೊಂದು ಸಂದರ್ಭದಲ್ಲಿ ಒಂದು ಮಾತು. ಪತ್ರ ಕರ್ತರು ಕುಡುಕರು, ಬ್ರಾಹ್ಮಣರು ಬಡವರು ಎನ್ನುವ ಬಗ್ಗೆ ಎಂಥ ವ್ಯಾಖ್ಯಾನ ಮಾಡಿದರು ವಕೀಲರು ಸುಳ್ಳರು ಎನ್ನುವ ಬಗ್ಗೆ ಏನು ಹೇಳಿದರು? ಪಟೇಲ್‌ರವರು ಹೇಳುವ ಮಾತು ಹಾಸ್ಯಪೂರಿತ ಗಂಭೀರವಾದುದು. ಅದನ್ನು ಕೇಳಿ ಕೋಪ ಬರುವುದಿಲ್ಲ, ನಗು ಬರುತ್ತದೆ. ಪತ್ರಕರ್ತರು ಅಂದರೆ ಸಾಕು, ಅವರು ಕುಡುಕರು ಎಂದು ಅರ್ಥ. ಆದುದರಿಂದ ಪತ್ರಕರ್ತರು ಕುಡುಕರು ಎಂದು ಹೇಳುವುದು ಬೇಡ. ಬ್ರಾಹ್ಮಣ ಅಂದರೆ ಸಾಕು ಅವರು ಬಡವರು ಎಂದು ಅರ್ಥ. ವಕೀಲ ಅಂದರೆ ಸಾಕು ಅವರು ಸುಳ್ಳರು ಎಂದು ಅರ್ಥ. ಇಂಥ ಮಾತುಗಳನ್ನು ಇನ್ನು ಯಾರಾದರೂ ಹೇಳುವುದಕ್ಕೆ ಸಾಧ್ಯವೆ? ಅಂಥ ಗಟ್ಟಿತನ ಮತ್ತು ವ್ಯಾಖ್ಯಾನಿಸುವ ಸಾಮರ್ಥ್ಯ ಇರುವ ಅವರಿಂದ ಮಾತ್ರ ಇಂಥ ಮಾತುಗಳು ಬರಲು ಸಾಧ್ಯ. ಜೀಟಿವಿಯಲ್ಲಿ ಒಂದು ವ್ಯಾಖ್ಯಾನದ ಮಾತುಗಳ ಬಗ್ಗೆ ಬಹಳ ಕಡೆಯಿಂದ ಬಹಳ ಟೀಕೆಗಳು ಬಂದವು. ಅವರು ಏನು ಹೇಳಿದರು? ಅವರು ಸತ್ಯವನ್ನು ಮಾತ್ರ ಹೇಳಿದ್ದರು. ಹಾಗೆ ಹೇಳಿದರು, ಹಾಗೆ ಹೇಳಬಾರದು ಎಂದು ಕೆಲವರು ಆಡಿಕೊಂಡರು. ಆದರೆ ಪಟೇಲ್‌ರವರು ಅಸತ್ಯವನ್ನು ಎಲ್ಲೋ ಮುಚ್ಚಿಟ್ಟುಕೊಂಡು ಹೇಳಲಿಲ್ಲ. ಇದ್ದುದನ್ನು ಇದ್ದ ಹಾಗೆ ಹೇಳಿದರು. ಮದ್ಯ ಮತ್ತು ಮಾನಿನಿಯ ಬಗ್ಗೆ ಅವರು ಹೇಳಿದ ಮಾತು ಇಡೀ ಪ್ರಪಂಚದ ಎಲ್ಲರೂ ಒಪ್ಪಿರಬೇಕು. ಅನೇಕರು ಇಂಥ ಸತ್ಯವನ್ನು ಹೇಳಲು ಹಿಂಜರಿಯುತ್ತಾರೆ. ಆದರೆ ಮಾನ್ಯ ಪಟೇಲ್‌ರವರು ತಮ್ಮ ಮಾತುಗಳ ಮತ್ತು ಕೃತಿಗಳ

ಮೂಲಕ ತುಂಬಾ ಸೊಗಸಾದ ರಮ್ಯತೆಯಿಂದ ಕೂಡಿದ ಜೀವನವನ್ನು ಮಾಡಿಕೊಂಡು ಬಂದಿದ್ದಾರೆ. ಹೇಳುವ ಮಾತುಗಳನ್ನು ಹಾಸ್ಯಲೇಪನದ ಗಂಭೀರತೆಯ ಮೂಲಕ ಹೇಳಿಕೊಂಡು ಬಂದಿದ್ದಾರೆ. ಅವರದ್ದು ವರ್ಣರಂಜಿತ ಜೀವನ ಎಂದು ಹೇಳಬೇಕಾಗುತ್ತದೆ.1967ರಲ್ಲಿ ಅವರು ಲೋಕಸಭೆಯಲ್ಲಿದ್ದಾಗ, ನಾನು ಬಂಗಾರಪ್ಪನವರು, ಶಿವಪ್ಪನವರ ನಾಯಕತ್ವದಲ್ಲಿ ಮಹಾಜನ್ ವರದಿ ಕುರಿತು ದೆಹಲಿಗೆ ಹೋಗಿದ್ದಾಗ ಸುಮ್ಮನೆ ಮನವಿ ಕೊಟ್ಟರೆ ಅದರಿಂದ ಯಾವ ಪ್ರಯೋಜನ ಆಗುವುದಿಲ್ಲ, ಒಂದಷ್ಟು ಗಲಾಟೆ ಮಾಡೋಣ ಎಂದಾಗ ಬಂಗಾರಪ್ಪನವರು ಒಪ್ಪಿದರು. ನಾನು ಬಂಗಾರಪ್ಪನವರು ಪಟೇಲ್‌ರವರ ಮನೆಗೆ ಹೋದೆವು. ಬಂಗಾರಪ್ಪನವರು ಅವರ ಪಕ್ಷದ ನಾಯಕರನ್ನು ಕೇಳುತ್ತೇನೆ ಎಂದು ಪಟೇಲ್‌ರವರನ್ನು ಕೇಳಿದರು. ವಾಟಾಳ್ ಈ ತೀರ್ಮಾನಕ್ಕೆ ಬಂದಿದ್ದಾರೆ ತಾವುಗಳು ಏನು ಹೇಳುತ್ತೀರಿ ಎಂದು ಕೇಳಿದರು. ವಾಟಾಳ್ ಹೇಳಿದ್ದು ಸರಿ. ನೀವು ಹೋಗಿ ಕಪ್ಪು ಬಾವುಟ ಹಿಡಿಯಿರಿ ಎಂದು ಸ್ಪಷ್ಟವಾಗಿ ಹೇಳಿದರು. ಎಂತು ಮಾತು ಹಿಂದೆ-ಮುಂದೆ ಯಾವುದೇ ಚಿಂತನೆ ಮಾಡದೇ ಆಡಿದ ಮಾತುಗಳು ನನಗೆ ಇನ್ನೂ ನೆನಪಿದೆ. ಆಗ ನಾನೂ ಬಂಗಾರಪ್ಪನವರು ಲೋಕಸಭೆ ಮುಂದೆ ಇದ್ದರೂ, ಅದೊಂದು ದೊಡ್ಡ ದೃಶ್ಯ, ಮಹಾಜನ್ ವರದಿ ವಿರುದ್ಧ ಕಪ್ಪು ಬಾವುಟ ಹಿಡಿದಿದ್ದೇವೆ. ನಮ್ಮನ್ನು ಬಂಧಿಸಿದ್ದಾರೆ ನಮ್ಮ ನಿಯೋಗದವರೆಲ್ಲ ಮುಖವನ್ನು ಗಂಟು ಹಾಕಿಕೊಂಡು ಕೂತಿದ್ದಾರೆ, ಆದರೆ ಸಂತೋಷಪಟ್ಟವರು ಜೆ.ಹೆಚ್. ಪಟೇಲ್ ಮತ್ತು ವೀರೇಂದ್ರ ಪಾಟೀಲ್, ನಿಯೋಗದ ಮಾತಿರಲಿ, ನೀವು ಮಾಡಿದ್ದೇ ಸರಿ ಎಂದು. ಆದ್ದರಿಂದ ನನಗನ್ನಿಸುತ್ತದೆ, ಜೆ.ಹೆಚ್. ಪಟೇಲರು ರಾಜಕೀಯದಿಂದ ದೂರ ಸರಿಯುವುದು ನಮಗೇನು ಇಷ್ಟವಿಲ್ಲ. ರಾಜ್ಯಸಭೆಗೂ ಅಥವಾ ರಾಜ್ಯಪಾಲರಾಗುವುದೋ ನನಗಿಷ್ಟವಿಲ್ಲ. ಅವರ ಕಾಲದಲ್ಲಿ ಏನೂ ಆಗಲೇ ಇಲ್ಲವೆಂದು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಗಂಟೆಗಟ್ಟಲೆ ಮಾತನಾಡದೆ ದಿನಗಟ್ಟಲೆ ವಾದ ಮಾಡದೆ ತಿಂಗಳುಗಟ್ಟಲೆ ಚರ್ಚೆ ಮಾಡದೆ ಒಂದೊಂದು ನಿಮಿಷದಲ್ಲಿ ಇತಿಹಾಸವನ್ನು ನಿರ್ಮಾಣ ಮಾಡಿದ್ದಾರೆ, ಶ್ರೀಮಾನ್ ಜೆ.ಹೆಚ್.ಪಟೇಲರು ಏಳು ಹೊಸ ಜಿಲ್ಲೆಗಳಾಗಬೇಕಾದರೆ ಬ್ರಹ್ಮ ಬಂದಿದ್ದರೂ ಆಗುತ್ತಿರಲಿಲ್ಲ. ಅದನ್ನು ನಾನಿವತ್ತು ಸ್ಪಷ್ಟಪಡಿಸುತ್ತೇನೆ. ಕರ್ನಾಟಕದ ಏಕೀಕರಣದ ನಂತರ, ವಿಧಾನಸೌಧ ನಿರ್ಮಾಣದ ನಂತರ, ಕರ್ನಾಟಕ ನಾಮಕರಣದ ನಂತರ ಇತಿಹಾಸ ನಿರ್ಮಿಸಿದ ಮತ್ತೊಂದು ಹೆಸರು ಶ್ರೀಮಾನ್ ಜೆ.ಹೆಚ್. ಪಟೇಲ್, ಅದರ ಬಗ್ಗೆ ವಾದ ವಿವಾದ ಮಾಡುವುದೇನೂ ಬೇಡ. ನಾನಂತೂ ಅವರು ಮತ್ತೊಮ್ಮೆ ಮುಖ್ಯಮಂತ್ರಿಯಾಗಬೇಕೂಂತ ಬಯಸುವ ವ್ಯಕ್ತಿ ಎಂದು ಹೇಳುತ್ತೇನೆ. ಮುಖ್ಯಮಂತ್ರಿಗಳ ಕಾರ್ಯಾಲಯದಲ್ಲಿ ಅಷ್ಟೇ ಪ್ರೀತಿ ವಿಶ್ವಾಸ, ವಾತ್ಸಲ್ಯ ನಾನು ಎಲ್ಲರಲ್ಲೂ ನೋಡಿದ್ದೇನೆ. ಬಿ.ಎಸ್. ಪಾಟೀಲರನ್ನು, ದಯಾಶಂಕರ್ ಸಿದ್ದಯ್ಯ, ಖಾನ್, ಸಾದಿಕ್, ಶಂಕರ ಪಾಟೀಲ, ಪ್ರಕಾಶ್ ಎಲ್ಲರ ಹತ್ತಿರಕ್ಕೂ ಹೋದಾಗ ಒಂದು ದಿನ ನನ್ನ ಹತ್ತಿರ ತಕರಾರು ತೆಗೆಯಲಿಲ್ಲ, ಜಗಳ ಆಡಲಿಲ್ಲ, ಪ್ರೀತಿ ವಿಶ್ವಾಸದಿಂದ, ಪಟೇಲರೆಷ್ಟು ಇದ್ದಾರೋ, ಅಷ್ಟೇ ತಿಳಿ ವಾತಾವರಣದಲ್ಲಿ ಅವರ ಕಾರ್ಯಾಲಯವೂ ನಡೆದಿದೆ. ಅವರನ್ನೂ ನಾನು ಮುಕ್ತಪ್ರಶಂಸೆ ಮಾಡುತ್ತಿದ್ದೇನೆ.

ಇದಾದನಂತರ, ಸಭೆಯ ಗಾಂಭೀರ್ಯ ಉಳಿಸುವುದರಲ್ಲಿ ತಾವು ಹೆಚ್ಚಿನ ರೀತಿಯಲ್ಲಿ ಶ್ರಮಿಸಿದ್ದೀರಿ. ಬೇರೆ ರಾಜ್ಯಗಳಲ್ಲಿ, ಉತ್ತರ ಪ್ರದೇಶದ ವಿಧಾನಸಭೆಯಲ್ಲಿ ಕುರ್ಚಿಗಳನ್ನೆತ್ತಿ ಹೊಡೆದಾಡಿದ್ದು ಕಂಡಿದ್ದೇವೆ.

ತಮಿಳುನಾಡಿನಲ್ಲಿ ಮಂತ್ರಿಗಳನ್ನೇ ಹೊಡೆದರು ಆದರೆ ಕರ್ನಾಟಕದಲ್ಲಿ ಒಂದು ಸಣ್ಣ ಪತ್ರಿಕೆಯನ್ನು ನಾನು ಸದನದಲ್ಲಿ ಸುಡುವುದಕ್ಕೆ ಹೋದಾಗ ನನ್ನ ಸ್ನೇಹವನ್ನೂ ಕಡೆಗಾಣಿಸಿ ನೀವು ನನ್ನ ಮೇಲೆ ಕ್ರಮ ಜರುಗಿಸಿದಿರಿ. ಅದರ ಬಗ್ಗೆ ನನ್ನ ವಿರೋಧವೇನಿಲ್ಲ. ನನ್ನ ತೀರ್ಮಾನ ನಾನು ಮಾಡಹೊರಟಾಗ ಅದನ್ನು ನೀವು ಕಡತದಿಂದ ತೆಗೆದುಹಾಕಬೇಕೆಂದಿರಿ, ಅಂದರೆ ಸದನದ ಮಹತ್ವ ಎತ್ತಿಹಿಡಿಯಬೇಕೆಂದು ನಿಮ್ಮವಾದ, ಅಷ್ಟೇ ಶಕ್ತಿಯುತವಾಗಿ ಹೋರಾಟ ಮಾಡಬೇಕೂಂತ ನನ್ನ ವಾದ. ನಿಮ್ಮ ವಾದ ನಿಮಗೆ ಸರಿ. ಆದ್ದರಿಂದ ಅದನ್ನು ನಾನು ತಪ್ಪು ಎಂದು ಭಾವಿಸಿಲ್ಲ. ಅದನ್ನು ಪುನರ್‌ಪರಿಶೀಲನೆ ಮಾಡಬೇಕೆಂದೂ ತಮಗೆ ನಾನು ಹೇಳಿದೆ. ಅಧ್ಯಕ್ಷರೇ ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ, ನನ್ನೆಲ್ಲಾ ಶಾಸಕ ಮಿತ್ರರಿಗೂ ಹೇಳುತ್ತೇನೆ. ಶಾಸನಸಭೆ ಇವತ್ತು ನೋಡುವುದಕ್ಕೆ ಎಷ್ಟು ಸಂತೋಷವಾಗಿದೆ ಈ ರೀತಿ ಯಾವಾಗಲೂ ಸಭಾನಾಯಕರಿರಲಿ, ವಿರೋಧ ಪಕ್ಷದ ನಾಯಕರಿರದೇಯಿರಲಿ ಈ ಸದನ ತುಂಬಿರಬೇಕು ಯಾವಾಗಲೂ, ಆಗಲೇ ಸದನಕ್ಕೆ ಗಾಂಭೀರ್ಯ, ಶಕ್ತಿ ಎಂದು ನಾನು ಹೇಳುತ್ತೇನೆ. ಈ ಸದನದಲ್ಲಿ ನಾನು ನಡೆಸಿರುವ ಧರಣಿ, ಸಭಾತ್ಯಾಗಗಳು ಕಡತಗಳನ್ನು ಹರಿದಿರುವುದು, 1967ರಿಂದ ವೈಕುಂಠ ಬಾಳಿಗರ ಅನಂತರ ಕೊತಾವಳೆಯವರು ಬಂದಾಗ ಹೆಚ್ಚುಕಮ್ಮಿ ನನ್ನನ್ನು 8 ಸಾರಿ ಎತ್ತಿ ಹೊರಗೆ ಹಾಕಿಸಿದ್ದಾರೆ. ಒಂದು ಸಾರಿ ತಿಮ್ಮಪ್ಪನವರು, ಕೋಣಂದೂರು ಲಿಂಗಪ್ಪನವರು ನನ್ನ ಮೇಲೆ ಪ್ರೀತಿಗೆ ಒಂದು ಕಡೆ ಇವರು ಎಳೆಯುತ್ತಿದ್ದಾರೆ. ಒಂದು ಕಡೆ ಮಾರ್ಶಲ್ ಎಳೆಯುತ್ತಿದ್ದಾರೆ, ಮಧ್ಯೆ ಇವರ ವಸ್ತುವಾಗಿ ನಾನು ಸಿಕ್ಕಿಹಾಕಿಕೊಂಡಿದ್ದೇನೆ. ಅಂತಹ ಸಂದರ್ಭಗಳೂ ಸದನದಲ್ಲಿ ನಡೆದಿವೆ. ನನಗನ್ನಿಸುತ್ತದೆ, ಸದನದ ಇತಿಹಾಸವನ್ನು ಬರೆಯುವುದಾದರೆ ನಾನೇ ಸದನದ ವ್ಯಕ್ತಿಯಾಗಿ ನಿರ್ಮಾಣವಾಗುತ್ತೇನೆ, ಅದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ. ಸದನದಲ್ಲಿ ನನ್ನಷ್ಟು ಧರಣಿ, ಸಭಾತ್ಯಾಗ, ಹೊರಗೆ ಹಾಕಿಸಿಕೊಂಡಿರುವುದು, ಮಾತಾಡಿರುವುದು ಎಲ್ಲದರಲ್ಲೂ ನನ್ನದೇ ಹೆಚ್ಚುಗಾರಿಕೆ. ಇನ್ನು ಮಹಿಳಾ ಶಾಸಕರದ್ದು ಬಹಳ ಆದರ್ಶವಾದ ವೇಷಭೂಷಣ. ಮೊನ್ನೆ ನೋಡಿ, ನನಗೆ ಎಷ್ಟು ಸಂತೋಷವೆಂದರೆ ಬಚ್ಚೇಗೌಡರು ಕೆಂಪೇಗೌಡರನ್ನು ನೆನಸಿಕೊಂಡರು, ನಮ್ಮ ಮುಖ್ಯಮಂತ್ರಿಗಳು ಏನು ಮಹಾರಾಜರೇ ನಮಸ್ಕಾರ ಎಂದು ಬಂದರು, ಅದಕ್ಕೂ ಒಂದು ತಾಕತ್ ಬೇಕಲ್ಲ. ಆ ವೇಷಭೂಷಣ ಹಾಕಿಕೊಂಡು ಹೊರಗಡೆ ಬಂದು ನಿಂತು ಜನರ ಮಧ್ಯೆ ಮತ್ತು ಸಭೆಯ ಒಳಗೆ ಬರಬೇಕಾದರೆ ಶಕ್ತಿ ಬೇಕಲ್ಲ. ನಿಮ್ಮೆಲ್ಲರ ಆಶೀರ್ವಾದದಿಂದ ಅದು ನಡೆದದ್ದು ಒಂದು ಇತಿಹಾಸ ಎಂದು ನಾನಂದು ಕೊಂಡಿದ್ದೇನೆ. ಮತ್ತು ಮಹಿಳಾಶಾಸಕಿಯರನ್ನು ನಿಜವಾಗೂ ಮೆಚ್ಚತಕ್ಕಂಥಾದ್ದೇ, ಅದರಲ್ಲೂ ಪ್ರಮೀಳಾರು ನಮ್ಮ ಕಡೆ ಒಬ್ಬರೇ ಇದ್ದರೂ ಒಬ್ಬ ವೀರಮಹಿಳೆಯಾಗಿ, ಮೊನ್ನೆ ಕೊಟ್ಟಿರುವ ವರದಿಯನ್ನು ಮಹಿಳೆಯರ ಪರವಾಗಿ ಯಾವುದೇ ಸರ್ಕಾರ ಬಂದರೂ ಒಪ್ಪಬೇಕು. ಎಂಥಾ ವರದಿ ಕೊಟ್ಟಿದ್ದಾರೆಂದರೆ ಇಡೀ ಮಹಿಳಾ ಕುಲಕ್ಕೆ ಕಿರೀಟ ತಂದ ರೀತಿ ಪ್ರಮೀಳಾರು ಕೊಟ್ಟಿದ್ದಾರೆ. ಅದನ್ನು ನಿಜವಾಗೂ ಒಪ್ಪತಕ್ಕಂಥದ್ದೇ ಎಂದು ಹೇಳೇಬೇಕಾಗಿದೆ. ಮತ್ತೊಂದು ಅತ್ಯಂತ ಸುದೈವ ಅಂದರೆ ಬ್ರಹ್ಮಚಾರಿ ಸದಸ್ಯ ಶ್ರೀರಾಮರೆಡ್ಡಿಯವರನ್ನು ಪಡೆದದ್ದು. ನಿಜವಾಗೂ ಪಾಪ ಒಳ್ಳೆಯ ವ್ಯಕ್ತಿ. ಸಿಟ್ಟು ಅಂದರೆ ಅಂತಹ ಸಿಟ್ಟು ನಾನೆಂದೂ ಕಂಡಿಲ್ಲ, ಆ ಸಿಟ್ಟಿನಲ್ಲೂ ಪ್ರೀತಿ ವಿಶ್ವಾಸವಿದೆ ರಾಜೇಂದ್ರನ್ನ ನಾವು ಅಷ್ಟು ಕಳೆಯುವ ಹಾಗಿಲ್ಲ, ಏನು ಹಾಸ್ಯಮಯವಾಗಿ ನಿಜವಾಗೂ ಎತ್ತರವಾದ ಭಾಷಣ. ಹಶ್ಮಿ ಕನ್ನಡದಲ್ಲಿ ಮಾತನಾಡಿದರೂ

ನಮಗೆ ಸಂತೋಷವಿರಬೇಕು. ಪುಟ್ಟಣ್ಣಯ್ಯ ರೈತರ ಪರವಾಗಿ ಪ್ರತಿಪಾದನೆ ಸದನದಲ್ಲಿ ಹೆಚ್ಚಿನ ಮೆಚ್ಚುಗೆ ತರುವಂಥದು. ಅನೇಕರು ನಮ್ಮಲ್ಲಿ ಕೆಲಸ ಮಾಡಿದ್ದಾರೆ ಶ್ರೀಮಾನ್ ಯಡಿಯೂರಪ್ಪನವರು ಇಲ್ಲಿದ್ದಾಗ ಪೂರಾ ಕೂಗಾಡುತ್ತಿದ್ದರು ಮೊನ್ನೆ ನಾನು ಏನು ಯಡಿಯೂರಪ್ಪನವರೇ ತಾವು ಬರುತ್ತಾ ಇಲ್ಲ ಎಂದು ಕೇಳಿದೆ. ಇಲ್ಲಿ ಸ್ವಲ್ಪ ಪಾರ್ಟಿ ಕೆಲಸ ಇದೆ ಅಂದರು. ಉಪಾಧ್ಯಾಯರ ಬಗ್ಗೆ ನೀವ್ಯಾಕೆ ಮಾತನಾಡುತ್ತಿಲ್ಲ ಅಂದರೆ ಎಲ್ಲಾದರೂ ಉಂಟೆ, ನಾಳೆ ನಮ್ಮ ಸರ್ಕಾರ ಬಂದರೆ, ನೋಡಿ ಆಗಲೇ ನಮ್ಮ ಸರ್ಕಾರ ಬಂದರೆ ಅನ್ನುವುದು ತಲೆಗೆ ಬಂದುಬಿಟ್ಟಿದೆ. ಅಷ್ಟು ಮಟ್ಟಿಗೆ ಭಯಭೀತಿ ಹುಟ್ಟಿದೆ. ನಮ್ಮಲ್ಲಿ ಅನೇಕರು ಈ ಸದನದಲ್ಲಿ ಮತ್ತೆ ಮತ್ತೆ ಬರಬೇಕು ಎರಡು ಮೂರು ಸಾರಿ ಗೆದ್ದಿರುವವರು ಮತ್ತೆ ಗೆಲ್ಲುತ್ತಾರೆ ಎಂದು ಒಂದು ತೀರ್ಮಾನ. ಮೊಯ್ಲಿಯವರು ನಿರಂತರ ಗೆದ್ದುಬರುತ್ತಿದ್ದಾರೆ. ಖರ್ಗೆಯವರು ಗೆದ್ದುಬರುತ್ತಿದ್ದಾರೆ ಅವರ ಮೇಲೆ ಅಭ್ಯರ್ಥಿಗಳನ್ನು ಹಾಕಬಾರದು, ಏಕೆ ಈ ಮಾತು ಹೇಳುತ್ತೇನೆ ಅಂದರೆ ಗೆದ್ದು ಬಂದೇ ಬರುತ್ತಾರೆ ಮತ್ತು ಅವರು ಸದನಕ್ಕೂ ಬೇಕು, ಇವರು ಯಾರೂ ಇಲ್ಲ ಅಂದರೆ ಸದನ ಅಲ್ಲ. ಶ್ರೀಮಾನ್ ನಂಜೇಗೌಡರು ನನಗನ್ನಿಸುತ್ತದೆ, ಕರ್ನಾಟಕದ ಇತಿಹಾಸದಲ್ಲೇ ಒಂದು ಧೀಮಂತ ಶಕ್ತಿ, ಎಚ್.ಎಂ. ಚನ್ನಬಸಪ್ಪನವರ ನಂತರ ನೀರಾವರಿಯಲ್ಲಿ ಪರಿಣಿತರಾದ ಒಂದು ಶಕ್ತಿ, ಮೊನ್ನೆ ಅವರು ನನ್ನ ಕರೆದರು, ಬಿಜೆಪಿಯಿಂದ ಹೊರಗೆ ಹಾಕಿದ ನಂತರ ಅವರು ಒಂದು ಸಮಾರಂಭ ಮಾಡಿದರು. ನಾನು ಹೇಳಿದೆ. ಮತದಾರರು ಇವರನ್ನು ಚುನಾಯಿಸಿ ಕಳಿಸಲಿಲ್ಲ ಅಂದರೆ ರಾಜ್ಯಕ್ಕೆ ನಷ್ಟವೇ ಹೊರತು ಬೇರೆ ಯಾರಿಗೂ ಅಲ್ಲ ಯಾವುದೇ ಸರ್ಕಾರ ಬರಲಿ, ಕಾವೇರಿ ಬಗ್ಗೆ ಕೃಷ್ಣ ನೀರಾವರಿ ಬಗ್ಗೆ ಬಂದ ತಕ್ಷಣ ಪ್ರತಿಯೊಬ್ಬರೂ ನಂಜೇಗೌಡರನ್ನು ಹುಡುಕಿಕೊಂಡು ಹೋಗುತ್ತೇವೆ. ಏನಾಗಿದೆ, ಏನು ಹೇಳುತ್ತೀರಿ ಎಂದು ಆದ್ದರಿಂದ ಇಂಥವರನ್ನು ಚುನಾಯಿಸಿ ಕಳಿಸಬೇಕಾದ್ದು ಪಕ್ಷದವರು ತೀರ್ಮಾನ ಮಾಡಿಕೊಳ್ಳಬೇಕು. ಅವರು ಎಲ್ಲೇ ನಿಲ್ಲಲಿ, ಅವರು ಗೆಲ್ಲುವುದಕ್ಕೆ ಅವಕಾಶ ಮಾಡಬೇಕಾದ್ದು ಕರ್ತವ್ಯ. ಮಂತ್ರಿಮಂಡಲದಲ್ಲಿ ಎಲ್ಲರೂ ಸೌಜನ್ಯವಾಗಿ ಪ್ರೀತಿಯಿಂದ ನಡೆದುಕೊಂಡಿದ್ದಾರೆ. ಮಂಜುನಾಥ್ ಹಿಂದೆ ಆ ಪೀಠದಲ್ಲಿ ಕುಳಿತಿದ್ದರು ಪ್ರಕಾಶರು ಅತ್ಯಂತ ಪ್ರೀತಿ ವಿಶ್ವಾಸದಿಂದ ಅವರ ಇಲಾಖೆಯನ್ನು ನೋಡಿದ್ದಾರೆ. ನಾವು ಹೋದಾಗಲೆಲ್ಲ ಪ್ರೀತಿ ಮಾತನಾಡಿದ್ದಾರೆ. ಭೈರೇಗೌಡರಂತೂ ಅವರ ಇಲಾಖೆಯಲ್ಲಿ ಇತಿಹಾಸವನ್ನು ನಿರ್ಮಾಣ ಮಾಡಿದ್ದಾರೆ. ಗೋವಿಂದೇಗೌಡರು, ಮತ್ತೊಬ್ಬ ಗೋವಿಂದೇಗೌಡರು ಬರುವುದಕ್ಕೆ ಸಾಧ್ಯವೇ ಇಲ್ಲದ ಇತಿಹಾಸ ನಿರ್ಮಾಣ ಮಾಡಿದ್ದಾರೆ. ಮತ್ತೆ ನಾಗೇಗೌಡರ ಬಗ್ಗೆ ವಾದ ಏನೇ ಹೇಳಲಿ ನೀರಾವರಿಯಲ್ಲಿ ಅವರು ಮಾಡಿದ ಕೆಲಸ ಪ್ರಶಂಸನೀಯ, ಅದರ ಬಗ್ಗೆ ಎರಡನೇ ಅಭಿಪ್ರಾಯವೇ ಇಲ್ಲ. ಹತ್ತಾರು ವರ್ಷಗಳಿಂದ ನಿಂತುಹೋಗಿದ್ದ ಜಲಾಶಯಗಳು ನಾಲೆಗಳು, ಮಂಡ್ಯ ಜನ ಇವತ್ತು ರಾಜಕೀಯ ಮಾಡಬಹುದು, ಆದರೆ ಮಂಡ್ಯದ ಜನ ಇವತ್ತು ನೆನೆಸಿಕೊಳ್ಳಬೇಕು. ಕಾವೇರಿ ನಾಲೆಗೆ ಮಾಡಿದರಲ್ಲ ನಾಗೇಗೌಡರಲ್ಲದೆ ಇನ್ಯಾರ ಕೈಲೂ ಮಾಡುವುದಕ್ಕಾಗುತ್ತಿರಲಿಲ್ಲ. ನನಗೂ ಬಚ್ಚೇಗೌಡರಿಗೂ ಬಹಳ ಬಾಂಧವ್ಯ, ಚೆನ್ನಭೈರೇಗೌಡರ ಕಾಲದಿಂದ ಬಾಂಧವ್ಯ ಅವರು ಉತ್ತರ ಕೊಡುವಾಗ ಸ್ಪಷ್ಟವಾಗಿ ನಿಷ್ಠೂರವಾಗಿ ಹೇಳುವವರು. ಸೋಮಶೇಖರ್ ಅತ್ಯಂತ ವ್ಯಕ್ತಿತ್ವವುಳ್ಳವರು, ಅವರು ಮಂತ್ರಿಯಾಗಬೇಕೂಂತ ವಿರೋಧಪಕ್ಷದವರು ನಾವೆಲ್ಲ ಹೇಳಿದ್ದೇವೆ. ಮಂತ್ರಿಮಂಡಲದಲ್ಲಿ 50-60 ಜನರಿದ್ದಾರೆ ಎಲ್ಲರೂ ಪ್ರೀತಿವಿಶ್ವಾಸದಿಂದ ಕಂಡಿದ್ದಾರೆ. ಆದ್ದರಿಂದ ಇಂಥ ಒಂದು ಒಳ್ಳೆಯ

ಮಾಧುರ್ಯ ಇರತಕ್ಕಂಥ, ಸೊಗಸಿರತಕ್ಕಂಥ ಮಂತ್ರಿಮಂಡಲ, ಈ ಸದನ, ಮತ್ತೊಮ್ಮೆ ನಾವು ಈ ಸದನವನ್ನು ಅಷ್ಟೇ ಚೆನ್ನಾಗಿ ಲವಲವಿಕೆಯಿಂದ ಸಂತೋಷವಾಗಿ ಕಾಣಬೇಕಾಗಿದೆ. ಮತ್ತು ಅಧಿಕಾರಿವರ್ಗದವರಿಗೂ ಅನೇಕಸಾರಿ ಹಿಗ್ಗಾಮುಗ್ಗಾ ನಾವು ಹೇಳಿದ್ದೇವೆ, ಆದರೂ ಅವರು ನಮ್ಮ ಸ್ನೇಹಿತರುಗಳೇ. ಇದನ್ನು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಹೇಳಬೇಕಾಗುತ್ತದೆ. ನಮ್ಮ ಅಧಿಕಾರಿಗಳಲ್ಲಿ ಅತ್ಯಂತ ಹೃದಯವಂತಿಕೆ ಇರುವ ಅಧಿಕಾರಿಗಳೂ ಕೂಡ ಇದ್ದಾರೆ. ಪೊಲೀಸ್ ಅಧಿಕಾರಿಯಾಗಿರುವ ಶ್ರೀನಿವಾಸಲು ಎಂಬ ಒಬ್ಬ ಅಜಾತಶತ್ರು ಅಧಿಕಾರಿ ಕೂಡ ನಮ್ಮಲ್ಲಿದ್ದಾರೆ. ಅಂಥ ಅಧಿಕಾರಿಗಳ ಕೂಟವೇ ನಮ್ಮ ಸರ್ಕಾರಕ್ಕೆ ಕೊಡುಗೆ ಮತ್ತು ಆಸ್ತಿ ಎನ್ನುವ ಮಾತನ್ನು ಕೂಡ ಸ್ಪಷ್ಟವಾಗಿ ಹೇಳುತ್ತೇನೆ. ಮತ್ತು ನಮ್ಮ ಪತ್ರಿಕಾ ಮಿತ್ರರು, ನಮ್ಮ ಅವರ ಬಾಂಧವ್ಯ ಅಂತ್ಯಂತ ಅಪಾರವಾದುದು ವಿಶ್ವಾಸವಾದುದು. ಬಹಳ ಒಳ್ಳೆಯ ಜನರು ಇದ್ದಾರೆ. ಪರಿಣಿತರು ಇರುತ್ತಾರೆ. ವಿಚಾರವಂತರು ಇದ್ದಾರೆ. ಶಕ್ತಿಯುತವಾಗಿ ಬರೆಯುವವರಿದ್ದಾರೆ. ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಟೀಕೆ ಮಾಡುವುದಕ್ಕೆ ಅವರಿಗೆ ಅಧಿಕಾರ ಇದೆ. ಇಲ್ಲಿ ಅನೇಕ ದಿಗ್ಗಜಗಳನ್ನು ನಾವು ನೋಡಿದ್ದೇವೆ. ಪ್ರಜಾವಾಣಿಯಲ್ಲಿ ಸದನ ಸಮೀಕ್ಷೆ ಎಂದು ಬರುತ್ತಿದ್ದುದನ್ನು ತಾವೆಲ್ಲರೂ ನೋಡಿರಬಹುದು. ಏಕೋ ಅದನ್ನು ತಕ್ಷಣ ನಿಲ್ಲಿಸಿದರು. ಸದನ ಸಮೀಕ್ಷೆ ನಿಲ್ಲಬಾರದು. ಸದನ ಸಮೀಕ್ಷೆ ಸದನ ನಿಂತಾಗ ನಿಲ್ಲಬೇಕೆ ಹೊರತು ಅದು ಸದನ ನಡೆಯುವಾಗ ನಿಲ್ಲಬಾರದು. ಅದನ್ನು ಅವರು ಬರೆಯುತ್ತಿರಬೇಕು. ಅದನ್ನು ಅವರು ಮತ್ತೊಮ್ಮೆ ಮುಂದುವರಿಸಲಿ ಎಂದು ಹೇಳಿ ಎಲ್ಲಾ ಪತ್ರಕರ್ತರಿಗೂ ಮತ್ತೊಮ್ಮೆ ತಮಗೆ ಅಭಿನಂದನೆ ಸಲ್ಲಿಸಿ ಇನ್ನು ಒಂದೂವರೆ ತಿಂಗಳಾದ ಮೇಲೆ ನಾನು ಬರುತ್ತೇನೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಒಂದೇ ವಿನಂತಿ, ಎಲ್ಲರಿಗೂ ಅವಕಾಶ ಕೊಡುತ್ತೇನೆ. ಬೇಗ ಬೇಗ ಎಲ್ಲರೂ ಮುಗಿಸಿದರೆ ಕಡೆಯ ದಿವಸ ಹೆಚ್ಚು ಆಸಕ್ತಿಯೂ ಕೂಡ ಇರುತ್ತದೆ. ಮಾತನಾಡುವವರಿಗೆ ಯಾರಿಗೂ ನಿರಾಕರಣೆ ಮಾಡುವ ಅಭಿಪ್ರಾಯ ನನಗಿಲ್ಲ. ನಾನಂದುಕೊಂಡೆ, ವಾಟಾಳರು ಇವತ್ತು ಎಲ್ಲೋ ಹಠ ಹಿಡಿದಿದ್ದಾರೆ. ಇದುವರೆಗೂ ಬೆಲ್ ಉಪಯೋಗಿಸಿಲ್ಲ, ಇವತ್ತು ಉಪಯೋಗಿಸುವ ಹಾಗೆ ಮಾಡುತ್ತೇನೆ ಎಂದು ಹೇಳಿ ತೀರ್ಮಾನ ಮಾಡಿದ್ದಾರೆ ಎಂದು ಅಂದುಕೊಂಡೆ. ನೀವು ಮಾತನಾಡಿದ್ದು ನೋಡಿ ನನ್ನ ಮೇಲೆ ಎಲ್ಲೊ ಹಠ ಹಿಡಿದಿದ್ದೀರಿ ನೀವು, ಇಷ್ಟು ದಿವಸ ಬೆಲ್ ಉಪಯೋಗಿಸಿಲ್ಲ. ಇವತ್ತು ಇವರನ್ನು ಬೆಲ್ ಉಪಯೋಗಿಸುವ ಹಾಗೆ ಮಾಡುತ್ತೇನೆ ಎಂದು ತೀರ್ಮಾನ ಮಾಡಿದಿರಿ ಎಂದು ಲೆಕ್ಕ ಹಾಕಿದೆ. ಅದಕ್ಕೆ ನಾನು ಬೆಲ್ ಕಡೆ ನೋಡಲೇ ಇಲ್ಲ. ಇವತ್ತು ಈ ಕಡೆ ತಿರುಗಿಕೊಂಡು ಬಿಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನೀವು ಬೆಲ್ ಹೊಡೆಯುವುದಿಲ್ಲ ಎಂದು ನನಗೆ ಗೊತ್ತು ನಮ್ಮ ನಿಮ್ಮ ಬಾಂಧವ್ಯದಲ್ಲಿ ಖಂಡಿತಾ ಬೆಲ್ ಹೊಡೆಯುವುದಕ್ಕೆ ಹೋಗುವುದಿಲ್ಲ ಎಂದು ನನಗೆ ಗೊತ್ತಿದೆ.

+ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಅಧ್ಯಕ್ಷರೇ, ಈ ವಿಧಾನಸಭೆಯ ಅವಧಿಯಲ್ಲಿ ವಿಶೇಷವಾಗಿ ಮೊಯಿಲಿಯವರು ಎರಡನ್ನು ಗಮನಿಸಬೇಕು. ಒಂದು ಪಿಟ್ಟಿ ಚೀಫ್ ಮಿನಿಸ್ಟರ್. ಇನ್ನೊಂದು ಆಕ್ಟೀವ್ ಅಂಡ್ ಆಲರ್ಟ್ ಸ್ಪೀಕರ್. ಇವೆರಡನ್ನು ನಾನು ವಿಶೇಷವಾಗಿ ಗಮನಿಸಿದೆ. ದೇವೇಗೌಡರು ಅವರು ಕಷ್ಟವಂದಿಗರು. ಕಷ್ಟ ಮಾಡುವರು, ಎಲ್ಲಾ ಮಾಡುವರು.

ಜೆ.ಹೆಚ್. ಪಟೇಲರು ನಾವು ಈಜಿ ಗೋಯಿಂಗ್. ಅವರ ಹಾಗೆ ನಾವು 18 ಗಂಟೆ ಕೆಲಸಕ್ಕೆ ಕುಳಿತುಕೊಂಡರೆ ನಾವು ಆರಾಮ್ ಆಗಿರುವುದು ಯಾವಾಗ?

ಶ್ರೀ ವಾಟಾಳ್ ನಾಗರಾಜ್ : ಅದು ಸರಿಬಿಡಿ. ಚೆನ್ನಾಗಿ ಹೇಳಿದರು. ಸತ್ಯ ಹೇಳಿ ಬಿಟ್ಟರು. ಸತ್ಯ ಹೇಳುತ್ತಿದ್ದಾರೆ. ಕೆಲಸ ಯಾವುದು ಎಂದು ಕೇಳುವುದಕ್ಕೆ ಹೋಗಬೇಡಿ.

ಶ್ರೀ ಹೆಚ್.ಎನ್. ನಂಜೇಗೌಡ : ಆಮೇಲೆ ಭಾರೀ ಜಾಣ್ಮೆ ನಮ್ಮ ಮುಖ್ಯ ಮಂತ್ರಿಗಳಿಗೆ. ಕೆಲವರು ಬುದ್ಧಿವಂತ ವ್ಯಾಪಾರಿಗಳಿರುತ್ತಿದ್ದರು. ಯಾವುದಾದರೂ ಸಾಮಾನು ಕೇಳಿದರೆ ಇಲ್ಲದಿದ್ದರೂ ಅವರು ಇಲ್ಲ ಎನ್ನುವುದಿಲ್ಲ. ಸಕ್ಕರೆ ಇದೆಯಾ ಎಂದರೆ ಉಪ್ಪು ಇದೆ ಎನ್ನುತ್ತಾರೆ. ಹತ್ತು ಸಾರಿ ಸಕ್ಕರೆ ಇದೆಯಾ ಎಂದು ಕೇಳಿ. ಹತ್ತು ಸಾರಿಯೂ ಅವರು ಉಪ್ಪು ಇದೆ ಎಂತಲೇ ಹೇಳುತ್ತಾರೆ. ನೇರವಾದ ಉತ್ತರವನ್ನೇ ಕೊಡುವುದಿಲ್ಲ. ಇಕ್ಕಟ್ಟಾದ ಪ್ರಶ್ನೆಗಳಿಗೆ ಜೆ.ಹೆಚ್.ಪಟೇಲರು ಅನಾಯಾಸವಾಗಿ, ಉಪಾಯವಾಗಿ ತಮ್ಮ ವಿಟ್ಸ್ ಉಪಯೋಗಿಸಿ ಜಾರಿಕೊಳ್ಳುವುದು. ಜೊತೆಗೆ ಈ ಸದನ ಕಾನ್ಸಿಟ್ಯೂಟ್ ಆದಮೇಲೆ ಅರ್ಥಪೂರ್ಣವಾದ ಅನೇಕ ಚರ್ಚೆಗಳು ಆಯಿತು. ಬಹುಶಃ ಬೇರೆ ವಿಧಾನಸಭೆಗಳಲ್ಲಿ ಆಗದೇ ಇರುವ ಚರ್ಚೆಗಳು ವಿಶೇಷವಾಗಿ ಜುಡಿಷಿಯರಿ ಬಗ್ಗೆ ಚರ್ಚೆ ಮಾಡಿದ್ದೇವೆ. ಅನೇಕ ಚರ್ಚೆಗಳಾಗಿವೆ. ಅದರಲ್ಲಿ ಕೆಲವು ನನ್ನ ಅನಿಸಿಕೆಗಳನ್ನು ಹೇಳಿಬಿಡುತ್ತೇನೆ. ಇನ್ನು ನಾವು ಹಿರಿಯ ಸದಸ್ಯರು ಎಂದು ಅನಿಸಿಕೊಂಡು ಹೇಳದಿದ್ದರೂ ತಪ್ಪಾಗುತ್ತದೆ. ಡಿಮ್ಯಾಂಡ್ಸ್ ಬಗ್ಗೆ ಅದೇನೊ ಎರಡು ಮೂರು ವರ್ಷದಿಂದಲೂ ಚರ್ಚೆಗಳೇ ಆಗಿಲ್ಲ. ಅರ್ಥಪೂರ್ಣ ಚರ್ಚೆ ಡಿಮ್ಯಾಂಡ್ಸ್ ಬಗ್ಗೆ ಆಗಲಿಲ್ಲ. ಏಕೆಂದರೆ ಹಿಂದೆ ಎಲ್ಲಾ ಏನಾಗುತ್ತಿತ್ತು ಎಂದರೆ ಪ್ರತಿಯೊಂದು ಇಲಾಖೆಗೆ ಪ್ರತ್ಯೇಕವಾಗಿ ಚರ್ಚೆ ನಡೆಸುವರು. ಯಾರಾದರೂ ಒಂದು ಹಗರಣ ಆ ಇಲಾಖೆಯ ಮೇಲೆ ಹಾಕಿದರೋ ಆ ಮಂತ್ರಿ ಪಾಪ ಬಾರಿ ಗಡಗಡ ನಡುಗಿಕೊಂಡು ಕುಳಿತುಕೊಳ್ಳುವ ವಾತಾವರಣ ಸೃಷ್ಟಿಯಾಗುತ್ತಿತ್ತು. ಯಾವುದಾದರೂ ಒಂದು ಇಲಾಖೆಗೆ ಆ ರೀತಿಯಾದರೆ ಎಲ್ಲರಿಗೂ ಹೆದರಿಕೆ ಬರುವುದು. ಇಲಾಖಾವಾರು ತೆಗೆದುಕೊಂಡಾಗ. ತಮ್ಮ ಒಂದು ಆಸಕ್ತಿ ಯುವಕರಿಗೆ ಹೆಚ್ಚಿಗೆ ಅವಕಾಶ ಕೊಡಬೇಕೆನ್ನುವ ದೃಷ್ಟಿಯಿಂದ ಈ ಶೂನ್ಯ ವೇಳೆ ಎನ್ನುವುದು ಜೀರೊ ಅವರ್ಸ್ ಆಗಿಹೋಗುತ್ತಿತ್ತು. ಕೆಲವು ದಿನ ಜೀರೊ ಡೇಸ್ ಆಗಿಹೋಯಿತು. ಇದು ಒಂದು ಆಯಿತು. ಆಮೇಲೆ ಬಿಲ್‌ಗಳ ಬಗ್ಗೆ ಕೂಡ ನಾವು ಅರ್ಥಪೂರ್ಣ ಚರ್ಚೆಯನ್ನು ಅನೇಕಬಾರಿ ಮಾಡಲಿಲ್ಲ. ಅಂತೂ ನಾವು ನಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಬೇಕಾಗಿದೆ. ಇನ್ನು ಇಲ್ಲಿ ಏನಾಯಿತು ಎಂದರೆ ಬಹುಶಃ ನಾವು ಕೂಡ ನಮ್ಮ ಕರ್ತವ್ಯ ಸರಿಯಾಗಿ ನಿರ್ವಹಣೆ ಮಾಡಿಲ್ಲ. ಕೆಲವು ಸಾರಿ ಏನಾಗುತ್ತೆ, ಚೀಫ್ ಮಿನಿಸ್ಟರ್ ನಮ್ಮ ವೈಯಕ್ತಿಕ ಸ್ನೇಹ ಅಥವಾ ಇನ್ನೊಬ್ಬ ಮಂತ್ರಿ ನಮ್ಮ ವೈಯುಕ್ತಿಕ ಸ್ನೇಹ. ಈ ವೈಯಕ್ತಿಕ ಬಾಂಧವ್ಯದಿಂದ ನಮಗೆ ಗೊತ್ತಾದ ಹಗರಣಗಳನ್ನು ಕೂಡ ಹೇಳದೆ ಇರತಕ್ಕಂಥ ಒಂದು ವಾತಾವರಣ. ಇದು ನಡೆದುಹೋಗಿದೆ. ಇಷ್ಟು ಹೇಳಿ ಯುವಕರು ಅನೇಕರು ಬಂದಿದ್ದಾರೆ. ಭಾರೀ ಪ್ರಾವೀಣ್ಯವನ್ನು ಪ್ರದರ್ಶನ ಮಾಡಿದ್ದಾರೆ. ಹೆಸರು ಹೇಳುವುದು ಬೇಕಿಲ್ಲ. ಭಾರೀ ಆಸಕ್ತಿ ವಹಿಸಿ ಈ ಸಭೆಯ ಕಾರ್ಯಕಲಾಪಗಳಲ್ಲಿ ಹೋಂವರ್ಕ್ ಕೂಡ ಮಾಡಿಕೊಂಡು ಬಂದು ಅನೇಕರು ಒಳ್ಳೆಯ ಕಾಂಟ್ರಿಬ್ಯೂಷನನ್ನು ಪಕ್ಷಾತೀತವಾಗಿ ಈ ಕಡೆಯಂತೂ ಹಿಂದಿನ ಬೆಂಚ್‌ನವರು ಮಾಡಿದ್ದಾರೆ ಬಹುಶಃ. ಹಿಂದೆ ಯಾವತ್ತು ಯಾವುದೇ ಸಭೆಗೆ ಹೋಲಿಸಿಕೊಂಡರೂ ಕೂಡ ಹಿಂದಿನ ಬೆಂಚ್‌ನ ಸದಸ್ಯರುಗಳಿಗೆ

ಈ ಅವಧಿಯಲ್ಲಿ ಸಿಕ್ಕಿರುವ ಈ ನಾಲ್ಕುಮುಕ್ಕಾಲು ವರ್ಷದ ಅವಧಿಯಲ್ಲಿ ಸಿಕ್ಕಿರುವ ಅವಕಾಶ ಹೊಸಬರಿಗೆ ಯಾವಾಗಲೂ, ಸಿಕ್ಕಿಲ್ಲ. ನಾನು ಹೆಚ್ಚಿಗೆ ಮಾತನಾಡಿಲ್ಲ. ಏಕೆ ಮಾತನಾಡಿಲ್ಲ ಎಂದರೆ ನನಗೆ ಎರಡು ಕಾರಣ. ಒಂದು ವ್ಯಾಲಿಡ್ ಆಗಿ ಏನಾದರೂ ಮಾಡಬೇಕಾದರೆ ನಾವು ಹೋಂವರ್ಕ್ ಮಾಡಿಕೊಂಡು ಬಂದು ಮಾಡಬೇಕು. ಎರಡನೆಯದು ಏನಪ್ಪ, ಮುಂದಿನ ಸಾಲಿನಲ್ಲಿರುವವರೇ ಮಾತನಾಡುತ್ತಾರೆ, ನಮಗೆ ಸಮಯಾವಕಾಶ ಸಿಗುವುದಿಲ್ಲ ಎಂದು ನಮಗೆ ಕೇಳುವ ಹಾಗೆ ಯುವಕರು ಪಿಸುಮಾತಿನಲ್ಲಿ ಹೇಳಿಕೊಳ್ಳುತ್ತಾರೆ. ನಾವೇ ಮಾತನಾಡಿದರೆ ಅವರು ಎಲ್ಲಿ ಬೇಜಾರುಗೊಂಡಾರು ಎಂದು. ಅದು ಒಂದು ಕಾರಣ. ಇನ್ನು ತಾವು ಅನೇಕ ಸಾರಿ ರೇಗಿಕೊಂಡಿದ್ದೀರಿ. ಅಂದರೆ ಸ್ಪೀಕರ್ ಕೆಲಸವನ್ನೂ ಮಾಡಿದ್ದೀರಿ. ಹೆಡ್ ಮಾಸ್ಟರ್ ಕೆಲಸವನ್ನೂ ಮಾಡಿದ್ದೀರಿ. ತಪ್ಪೇನಿಲ್ಲ. ಏಕೆಂದರೆ ನೀವು ರೇಗಿದಾಗ ಆ ರೇಗುವ ಅರ್ಥದಲ್ಲೇ ಬೇರೆ ಇರುತ್ತೆ. ಗುರು ಶಿಷ್ಯನ ಮೇಲೆ ರೇಗಿದರೆ ಶಿಷ್ಯ ತಪ್ಪು ತಿಳಿದುಕೊಳ್ಳುವುದಕ್ಕೆ ಆಗುವುದೇ ಇಲ್ಲ. ನೀವು ಆ ಭಾವನೆ ಇಟ್ಟುಕೊಂಡು ಎಲ್ಲರಿಗೂ ಮಾರ್ಗದರ್ಶನ ಮಾಡಬೇಕು ಎನ್ನುವ ದೃಷ್ಟಿಯಿಂದ ರೇಗಿದ್ದೀರಿ. ಸದನವನ್ನು ತುಂಬಾ ಚೆನ್ನಾಗಿ ನಡೆಸಿಕೊಂಡು ಬಂದಿದ್ದೀರಿ. ಅದೊಂದು ಮೆಚ್ಚತಕ್ಕ ಕಾರ್ಯ. ಒಳ್ಳೆಯ ಮುಖ್ಯಮಂತ್ರಿಗಳು ಸಿಗಬಹುದು, ಒಳ್ಳೆಯಮಂತ್ರಿಯೂ ಸಿಗಬಹುದು, ಒಳ್ಳೆಯ ಸ್ಪೀಕರ್‌ಗಳು ಸಿಗುವುದು ಕಷ್ಟ ನನ್ನ ಅನುಭವದಲ್ಲಿ ಆ ಸ್ಥಾನಕ್ಕೆ ಘನತೆ ಗೌರವ ಬರಬೇಕಾದರೆ ಅವರು ಚುರುಕಿರಬೇಕಾಗುತ್ತದೆ. ಆಲರ್ಟ್ ಇರಬೇಕಾಗುತ್ತದೆ. ಬುದ್ಧಿವಂತರು ಇರಬೇಕಾಗುತ್ತದೆ. ಆಕ್ಟೀವ್ ಆಗಿ ಇರಬೇಕಾಗುತ್ತದೆ. ವಿಚಾರ ತಿಳಿದುಕೊಂಡಿರಬೇಕಾಗುತ್ತದೆ. ಅಭ್ಯಾಸ ಮಾಡಬೇಕಾಗುತ್ತದೆ. ಪುರುಷಾರ್ಥ ಇಲ್ಲದೇನೆ ಕಷ್ಟಪಡತಕ್ಕ ಸ್ಥಾನ ಅದು. ವಾಸ್ತವವಾಗಿ ನಿಜ ಹೇಳಬೇಕೆಂದರೆ ಮುಖ್ಯಮಂತ್ರಿ ಫೈಲ್‌ಗಳನ್ನು ಓದಬಹುದು, ಮಂತ್ರಿಗಳು ಫೈಲನ್ನು ಓದಬಹುದು. ಸ್ಪೀಕರ್ ಆದವರು ಇಲ್ಲಿ ಎಲ್ಲವನ್ನೂ ಓದಿಕೊಂಡು ಬರಬೇಕು. ಭಾರೀ ಶ್ರಮಪಡಬೇಕು. ಪ್ರತಿಫಲ ಕಡಿಮೆ. ದುಡಿಮೆ ಜಾಸ್ತಿ. ಆ ಕೆಲಸವನ್ನು ತಾವು ಯಶಸ್ವಿಯಾಗಿ ನಡೆಸಿದ್ದೀರಿ. ನಮ್ಮ ಬಾಂಧವ್ಯ ಎಲ್ಲಾ ಪಕ್ಷದವರು ಒಬ್ಬರಿಗೊಬ್ಬರು ಸೋದರಭಾವದಿಂದಲೇ ನಡೆದುಕೊಂಡು ಬಂದಿದ್ದೇವೆ. ಈ ಅವಧಿಯಲ್ಲಿ, ನನ್ನನ್ನಂತೂ ಎಲ್ಲರೂ ಗೌರವವಾಗಿ ನೋಡಿ ಕೊಂಡಿದ್ದಾರೆ. ವಯಸ್ಸಾದವನು ಎಂತಲೋ, ಹಿರಿಯನಂತಲೋ ಏನು ಕಾರಣ ಗೊತ್ತಿಲ್ಲ. ಅನುಭವಿ ಎಂತಲೊ ಅದೇನೊ ಗೊತ್ತಲ್ಲ. ಎಲ್ಲರೂ ಪಾಪ ತುಂಬಾ ಗೌರವದಿಂದ ಕಂಡಿದ್ದಾರೆ. ಈ ನಾಲ್ಕೂಮುಕ್ಕಾಲು ವರ್ಷ ಭಾರೀ ಸಂತೋಷವಾಗೇ ನಾನು ಈ ಸದನದಲ್ಲಿ ಸದಸ್ಯನಾಗಿದ್ದೇನೆ. ನಾವು ಕೂಡ ಪತ್ರಿಕೆಯವರ ಬಗ್ಗೆ ಸಿಟ್ಟಿನಲ್ಲಿ ಅಳತೆಮೀರಿ ಮಾತನಾಡಿರುವುದುಂಟು. ಅಂತೂ ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೂ ಅವರು ವ್ಯೂಸ್ ವ್ಯಾಲ್ಯು ಬೇರೆ. ನ್ಯೂಸ್ ವ್ಯಾಲ್ಯು ಬೇರೆ. ಅವರು ವ್ಯೂಸ್ ವ್ಯಾಲ್ಯು ಬರೆದರೆ ನಮಗೆ ಮಾರ್ಗದರ್ಶನ ಮಾಡಿದಂತಾಗುತ್ತದೆ. ವ್ಯಾಲ್ಯು ಅವರು ಹಾಕಲೇಬೇಕಾಗುತ್ತದೆ. ಇದರಲ್ಲಿ ನಾನು ಯಾವಾಗಲೂ ಹೇಳುತ್ತಿರುತ್ತೇನೆ. ಆಗ ಲೋಕಸಭೆಯಲ್ಲಿದ್ದೆವು. ಅಲ್ಲಿ ನಾವು ನೋಟೀಸ್ ಕೊಡಬೇಕಾದರೆ ನಾವು ಆಧಾರವಾಗಿ ಪೇಪರ್ ಕಟಿಂಗನ್ನೇ ಕೊಡುತ್ತಿದ್ದೆವು. ``To call the attention of the Government to such and such item appeared in such and such a newspaper on such and such date". ಎಂತಲೇ ನಾವು ಕೊಡುತ್ತಿದ್ದೆವು. ಏಕೆಂದರೆ ನಾವು ಅನೇಕಸಾರಿ ನಮ್ಮ ಚರ್ಚೆಗೆ

ಆಧಾರವಾಗತಕ್ಕಂಥದ್ದು ಪತ್ರಿಕೆಯಲ್ಲಿ ಬರುವ investigative journalism ಮೇಲೆ ಅದನ್ನು ಕೂಡ ಸಾಕಷ್ಟು ಪತ್ರಿಕೆಗಳು ಮಾಡಿ ಅವರು ಮಾರ್ಗದರ್ಶನ ಮಾಡಿದ್ದಾರೆ. ಒಟ್ಟಿನಲ್ಲಿ ನಿರೀಕ್ಷಿತ ಮಟ್ಟದಲ್ಲಿ ಈ 10ನೇ ವಿಧಾನಸಭೆ ತನ್ನ ಕಾರ್ಯವನ್ನು ನಿರ್ವಹಿಸಿದೆ. ನನಗೆ ತುಂಬಾ ಸಂತೋಷವಾಗಿದೆ. ಎಲ್ಲರೂ ಅಭಿನಂದಿಸಿ ಎಲ್ಲರಿಗೂ ಮಂಗಳವಾಗಲಿ ಎಂದು ಹಾರೈಸಿ ಪಕ್ಷಾತೀತವಾಗಿ ಎಲ್ಲರಿಗೂ ಒಳ್ಳೆಯದಾಗಲಿ ಎಂದು ಹೇಳುತ್ತೇನೆ. ನಾನು ಆ ರೀತಿ ಹಾರೈಸಿ ನಿಮಗೂ ಕೂಡ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

5.30 ಪಿ.ಎಂ

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ನಾನು ಹೊಸದಾಗಿ ಈ ಸದನಕ್ಕೆ ಪ್ರವೇಶ ಮಾಡಿದೆ. ನನ್ನ ರಾಜಕೀಯ ಹಿನ್ನೆಲೆ ಬೇರೆ ಇದೆ. ವಿಭಿನ್ನವಾದಂತಹ ರಾಜಕೀಯ ಹಿನ್ನೆಲೆಯಿಂದ ಬಂದಿರತಕ್ಕವನು. ಹಲವಾರು ನಿರೀಕ್ಷೆಗಳನ್ನು ನಾನು ಇಟ್ಟುಕೊಂಡು ಬಂದಿರಲಿಲ್ಲ. ಏಕೆಂದರೆ ನನಗೆ ಅಂತಹ ಭ್ರಮೆಗಳೇನೂ ಇರಲಿಲ್ಲ. ಆದರೆ ನಮ್ಮ ಸದನದ ಕಲಾಪಗಳನ್ನು ಗಮನಿಸಿದಾಗ ಈ ದೇಶದ ಬೇರೆ ಬೇರೆ ಸದನಗಳಿಗೆ ಹೋಲಿಸಿದಾಗ ನಮ್ಮ ಸದನದ ಕಲಾಪಗಳು ಬಹಳ ಸೌಜನ್ಯಯುತವಾಗಿದೆ ಎಂದು ಹೇಳುವುದರಲ್ಲಿ ಎರಡನೇ ಮಾತಿಲ್ಲ. ಆದರೆ ಅದರ ಸಕಾರಾತ್ಮಕ ಅಂಶಗಳನ್ನು ಗಮನಿಸಿದರೆ ನಾವು ಇನ್ನೂ ಈ ಚರ್ಚೆಗಳನ್ನು ಉತ್ತಮ ಮಟ್ಟಕ್ಕೆ ತೆಗೆದುಕೊಂಡು ಹೋಗಲಿಕ್ಕೆ ಹಲವಾರು ವಿಷಯಗಳಲ್ಲಿ ಸಾಧ್ಯತೆ ಇತ್ತು. ಆದರೆ ಅದು ಸಾಧ್ಯ ಆಗಿಲ್ಲ ಎಂದು ಹೇಳತಕ್ಕದ್ದೇ ನನ್ನ ಭಾವನೆ. ಉನ್ನತವಾದಂತಹ ವಿಷಯಗಳು, ಉತ್ತಮವಾದಂತಹ ವಿಷಯಗಳು, ಜನಪರವಾದಂತಹ ವಿಷಯಗಳು, ಗಂಭೀರವಾದಂತಹ ವಿಷಯಗಳನ್ನು ಚರ್ಚೆ ಮಾಡಲಿಕ್ಕೆ ಇದೊಂದು ಬಹಳ ಪವಿತ್ರವಾದಂತಹ ವೇದಿಕೆ ಆಗಬಹುದಾಗತ್ತು. ಸ್ವಲ್ಪಮಟ್ಟಿಗೆ ಆಗಿದೆ. ಆಗಿಲ್ಲ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ ಆಗಿದೆ. ಇನ್ನೂ ಉತ್ತಮವಾದಂತಹ ವೇದಿಕೆಯಾಗಿ ನಾವೆಲ್ಲರೂ ಪ್ರಯತ್ನ ಮಾಡಬಹುದಿತ್ತು. ಆ ಕಡೆ, ಈ ಕಡೆ ಇರುವವರೆಲ್ಲರೂ ಪ್ರಯತ್ನ ಮಾಡಿದ್ದರೆ, ಇದು ಇನ್ನೂ ಉತ್ತಮವಾದಂತಹ ವೇದಿಕೆ ಆಗಲಿಕ್ಕೆ ಸಾಧ್ಯತೆ ಇತ್ತು. ಇನ್ನು ಮುಂದೆ ಬರತಕ್ಕ ಜನರಾದರೂ ಅದನ್ನು ಮಾಡಬೇಕೆಂದು ಹೇಳಿ ನನ್ನ ಕಳಕಳಿಯಾದಂತಹ ವಿನಂತಿ. ಏಕೆಂದು ಹೇಳಿದರೆ ಜನ ನಮ್ಮನ್ನು ಆಯ್ಕೆ ಮಾಡಿ ಈ ಸದನಕ್ಕೆ ಕಳುಹಿಸಿರತಕ್ಕದ್ದು ಈ ರಾಜ್ಯದ ಮತ್ತು ಜನತೆಯ ಹಿತದೃಷ್ಟಿಗಳನ್ನು ನಾವು ಗಮನದಲ್ಲಿಟ್ಟು ಇಲ್ಲಿ ಚರ್ಚೆ ಆಗಬೇಕು ಎಂದು ಹೇಳತಕ್ಕದ್ದು ಬಹಳ ಪ್ರಮುಖವಾಗಿರತಕ್ಕದ್ದು. ಮತ್ತು ಇಡೀ ರಾಜ್ಯಕ್ಕೆ ಮಾರ್ಗದರ್ಶನ ಆಗಬೇಕಾಗಿರತಕ್ಕದ್ದು. ರಾಜ್ಯಕ್ಕೆ ಮಾದರಿ ಆಗಬೇಕಾಗಿರತಕ್ಕದ್ದು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದರ ಗುಣಮಟ್ಟವನ್ನು ಹೆಚ್ಚಿಸಬೇಕಾದಂತಹ ಕರ್ತವ್ಯ, ನಮ್ಮೆಲ್ಲರ ಮೇಲೂ ಕೂಡ ಇದೆ. ಅದು ಯಾರೋ ಒಬ್ಬರ ಮೇಲೆ ಮಾತ್ರ ಇರತಕ್ಕದ್ದು ಅಲ್ಲ. ಆ ರೀತಿಯಲ್ಲಿ ಇದನ್ನು ವೇದಿಕೆಯಾಗಿ ಪರಿವರ್ತನೆ ಮಾಡಬೇಕಾಗಿತ್ತು. ಎರಡನೆಯದಾಗಿ, ನಾವು ಹೊಸದಾಗಿ ಬಂದವರನ್ನು ಇವತ್ತು ಚರ್ಚೆಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲಿಕ್ಕೆ ಸಾಧ್ಯವಾಗಿದ್ದರೆ ಅದು ನಿಮ್ಮಿಂದ ಮಾತ್ರ. ನಿಮ್ಮ ಪ್ರೋತ್ಸಾಹ ನಿಮ್ಮ ಬೆನ್ನು ತಟ್ಟುವಿಕೆ ಮತ್ತು ನೀವು ನಮಗೆ ಕೊಟ್ಟಂತಹ

ಮಾರ್ಗದರ್ಶನದಿಂದ ಮಾತ್ರ ಹೊಸದಾಗಿ ಬಂದಂತಹ ನನ್ನಂಥವರಿಗೆ ಇಲ್ಲಿ ಹೆಚ್ಚು ಪ್ರಮುಖವಾದಂತಹ ಪಾತ್ರವನ್ನು ವಹಿಸಲಿಕ್ಕೆ ಸಾಧ್ಯ ಆಗಿರತಕ್ಕಂಥದ್ದು. ಅದಕ್ಕೆ ನಾವು ಎಂದೆಂದಿಗೂ ಕೂಡ ನಿಮಗೆ ಕೃತಜ್ಞರಾಗಿ ಇರಬೇಕಾದ್ದು ನಮ್ಮ ಕರ್ತವ್ಯ ಆಗಿದೆ. ಹಾಗೆಯೇ ನಮ್ಮ ಎಲ್ಲಾ ಸದಸ್ಯರೂ ಕೂಡ ಆ ರೀತಿಯಾದಂತಹ ಸಹಕಾರವನ್ನು ನಮಗೆ ಕೊಟ್ಟಿದ್ದಾರೆ. ಹೊಸದಾಗಿ ಬಂದಿದ್ದರೂ ಕೂಡ ಹಲವಾರು ಹಿರಿಯ ಸದಸ್ಯರು ಎಲ್ಲರೂ ನಮ್ಮ ಮಾತುಗಳನ್ನು ಬಹಳ ಗಂಭೀರವಾಗಿ ಗಮನ ಕೊಟ್ಟು ಕೇಳಿದ್ದಾರೆ. ನಮ್ಮನ್ನು ಪ್ರೋತ್ಸಾಹ ಮಾಡಿದ್ದಾರೆ. ನಾವೆಲ್ಲಿ ಯಾದರೂ ತಪ್ಪಿದ್ದರೆ ಅದನ್ನು ತಿದ್ದಿದ್ದಾರೆ. ಅವರೆಲ್ಲರಿಗೂ ಕೂಡ ನಾವು ಚಿರಋಣಿಗಳಾಗಿ ಇರಬೇಕಾಗುತ್ತದೆ. ಇನ್ನು ಸನ್ಮಾನ್ಯ ಸಭಾ ನಾಯಕರು ಇದ್ದಾರೆ. ನಮ್ಮ ಹಿರಿಯ ಸದಸ್ಯ ಮುಖಂಡರೆಲ್ಲಾ ಅವರ ಬಗ್ಗೆ ಹೇಳಿದ್ದಾರೆ. ನನ್ನ ದೃಷ್ಟಿಯಲ್ಲಿ ಅವರು ನಮ್ಮ ಕರ್ನಾಟಕ ರಾಜ್ಯ ಕಂಡಂತಹ ಕೆಲವೇ ಮಂದಿ ಅಪರೂಪದ ರಾಜಕಾರಣಿಗಳಲ್ಲಿ ಒಬ್ಬರು. ಹೋರಾಟದ ಹಿನ್ನೆಲೆಯಿಂದ ಬಂದಿರತಕ್ಕವರು ಎನ್ನತಕ್ಕ ಕಾರಣಕ್ಕೆ ಅಷ್ಟೇ ಅಲ್ಲ. ಬಹಳ ಜಾಣ್ಮೆಯಿಂದ ಎಂತಹ ಕ್ಲಿಷ್ಟ ಪರಿಸ್ಥಿತಿಯನ್ನಾದರೂ ಧೈರ್ಯವಾಗಿ ಎದುರಿಸತಕ್ಕ ಶಕ್ತಿ ಏನು ಇದೆ, ಮತ್ತು ಆ ವಿಷನ್ ಏನು ಇದೆ, ಅಂದರೆ ದೃಷ್ಟಿ ಏನು ಇದೆ, ಅದು ಅವರಲ್ಲಿದೆ. ಅವರಲ್ಲಿರತತಕ್ಕಂಥ ಎಲ್ಲಾ ಸಕಾರಾತ್ಮಕ ಅಂಶಗಳನ್ನು ಬಹುಶಃ ಅವರು ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ಪರಿಣಾಮಕಾರಿಯಾಗಿ ಉಪಯೋಗಿಸಿದ್ದಿದ್ದರೆ ಬಹುಶಃ ಅವರು ಇಡೀ ದೇಶದಲ್ಲಿ ಬಹಳ ಅತ್ಯುತ್ತಮವಾದ ಮುಖ್ಯಮಂತ್ರಿಗಳಲ್ಲಿ ಒಬ್ಬರು ಆಗುತ್ತಿದ್ದರು ಎಂದು ಹೇಳುವುದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಅದನ್ನು ಅವರು ಉಪಯೋಗಿಸಬಹುದಾಗಿತ್ತು. ಅಂತಹ ಜಾಣ್ಮೆ ಅವರಲ್ಲಿದೆ. ಬುದ್ಧಿವಂತಿಕೆ ಇದೆ, ಬದ್ಧತೆ ಇದೆ. ಎಲ್ಲಕ್ಕಿಂತ ಮುಖ್ಯವಾಗಿ ಸುಮ್ಮನೇ ಉಡಾಫೆ ಹೊಡೆದುಕೊಂಡು ಹೋಗತಕ್ಕದ್ದು ಅಲ್ಲ. ರಾಜ್ಯದ ಬಗ್ಗೆ ಜನತೆಯ ಬಗ್ಗೆ ಒಂದು ಬದ್ಧತೆ ಇದೆ. ಮನುಷ್ಯನ ಬದುಕಿನ ಬಗ್ಗೆ ಅವರಿಗೆ ಒಂದು ಬದ್ಧತೆ ಇದೆ. ಬದ್ಧತೆಯ ಆಧಾರದ ಮೇಲೆ ಕೆಲಸ ಮಾಡಿಕೊಂಡು ಬರಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಹಾಗಾಗಿ ಮತ್ತೆ ಎಲ್ಲರೂ ಹೇಳಿರತಕ್ಕಂಥ ರೀತಿಯಲ್ಲಿ ನನ್ನ ಅನುಭವದ ಪ್ರಕಾರ ಕೂಡ ಅವರಿಗೆ ಹೃದಯವಂತಿಕೆಯಿದೆ. ಯಾವುದೇ ಸಣ್ಣತನವನ್ನು ತೋರದೇ ಆ ಹೃದಯವಂತಿಕೆಯನ್ನು ಪ್ರದರ್ಶನ ಮಾಡಿರತಕ್ಕದ್ದು ನಿಜವಾಗಿಯೂ ಮೆಚ್ಚತಕ್ಕ ವಿಷಯ. ನಾನು ಮಾನ್ಯ ಸುರೇಶ್ ಕುಮಾರ್ ಅವರ ಮಾತನ್ನೇ ಹೇಳಬೇಕಾಗುತ್ತದೆ. ಇಡೀ ಮಂತ್ರಿಮಂಡಲದ ಬಗ್ಗೆ ಹೇಳಬೇಕಾಗುತ್ತದೆ. ಬಹಳ ಪ್ರತಿಭಾವಂತರು ಇದ್ದಾರೆ. ಪ್ರಾಮಾಣಿಕರು ಇದ್ದಾರೆ, ಕೆಲಸ ಮಾಡಿದ್ದಾರೆ. ನಾಲ್ಕೂವರೆ ವರ್ಷಗಳಲ್ಲಿ ಹಿಂದೆ ಯಾರೂ ಮಾಡದೇ ಇರತಕ್ಕಂಥ ಕೆಲಸಗಳನ್ನು ಮಾಡಿದ್ದಾರೆ. ನಾನು ಹೆಸರುಗಳನ್ನೆಲ್ಲಾ ಪಟ್ಟಿ ಮಾಡಲಿಕ್ಕೆ ಹೋಗತಕ್ಕ ಅವಶ್ಯಕತೆ ಇಲ್ಲ. ಎಲ್ಲರಿಗೂ ಗೊತ್ತಿದೆ. ನೀರಾವರಿಯಲ್ಲಿ ಆಗಬಹುದು ಇನ್ನೊಂದರಲ್ಲಿ ಆಗಬಹುದು. ಶಿಕ್ಷಣ ರಂಗದಲ್ಲಿ ಆಗಬಹುದು. ಇನ್ನೊಂದು ರಂಗದಲ್ಲಿಯೇ ಆಗಬಹುದು. ಪ್ರತಿಭಾವಂತರಾದಂತಹ ಮಂತ್ರಿಗಳು ಇದ್ದಾರೆ. ಆದರೆ ಯಾಕೋ ಅವರು ಇವತ್ತು ನಾನು ಹೇಳತಕ್ಕ ಅಭಿಪ್ರಾಯ. Most unofrtunate thing, most eminent, most brilliant, committed, but most unfortunate. ಏಕೆಂದು ಹೇಳಿದರೆ ನಾನೊಬ್ಬ ಅವರ ಹಿತೈಷಿಯಾಗಿ ಹೇಳುತ್ತೇನೆ. ನಾಲ್ಕೂವರೆ ವರ್ಷಗಳಿಂದ ಅವರಿಗೆ ಕ್ಲಿಷ್ಟ ಸಂದರ್ಭಗಳಲ್ಲಿ ಬೆಂಬಲ ಕೊಡುತ್ತಾ ಬಂದಿದ್ದೇನೆ. ಅವರ ವೆಲ್ ವಿಷರ್ ಆಗಿ ಇಲ್ಲಿ ಕೆಲವು ಸಲ ಮಾತನಾಡಿದ್ದೇನೆ.

ಅವರಿನ್ನೂ ಹಲವಾರು ರೀತಿಯಲ್ಲಿ ಉತ್ತಮವಾದಂತಹ ಕೆಲಸ ಆಗಬಹುದಾಗಿದ್ದಂತಹ ಸಂದರ್ಭದಲ್ಲಿ ಏಕೋ ಅನ್‌ಫಾರ್ಚುನೇಟ್ ಎಂದು ಹೇಳಿ ದುರ್ದೈವಿ ಆಗತಕ್ಕ ಅಂಶಗಳನ್ನು ನಾವು ಇವತ್ತು ಕಾಣುತ್ತಿದ್ದೇವೆ. ಅದನ್ನು ಸರಿಪಡಿಸಲಿಕ್ಕೆ ಸಾಧ್ಯ ಇದ್ದರೆ ಇವತ್ತೂ ಕೂಡ ಸಾಧ್ಯ ಅವರಿಗೆ ಇದೆ. ಮತ್ತು ಅದೇ ರೀತಿಯಲ್ಲಿ ನಮ್ಮೆಲ್ಲ ಗೆಳೆಯರು, ಪತ್ರಕರ್ತರು ಬಹಳ ಮುಖ್ಯವಾಗಿ ಅಧಿಕಾರಿಗಳು. ಮುಖ್ಯಮಂತ್ರಿಗಳ ಕಛೇರಿಯಲ್ಲಿರತಕ್ಕಂಥ ಅಧಿಕಾರಿಗಳಿಂದ ಹಿಡಿದು ಯಾವುದೇ ಸಂದರ್ಭದಲ್ಲಿ ನಾವು ಹೋದಾಗ, ಬಿ.ಎಸ್. ಪಾಟೀಲ್ ಅವರಂತಹ ಹಿರಿಯ ಅಧಿಕಾರಿಗಳು ಕೂಡ ನನ್ನಂತಹ ಒಬ್ಬ ಕಿರಿಯ ಶಾಸಕ ಹೋದಾಗಲೂ ಕೂಡ ಅವರು ನಮ್ಮನ್ನು ಬೇರೆ ರೀತಿಯಲ್ಲಿ ಕಂಡಿಲ್ಲ. ಹಾಗೆಯೇ ನಮ್ಮ ಹಲವಾರು ಹಿರಿಯ ಐಎಎಸ್ ಅಧಿಕಾರಿಗಳು, ಐಪಿಎಸ್ ಅಧಿಕಾರಿಗಳು ನಮ್ಮ ಬಗ್ಗೆ ಭಾರೀ ಗೌರವವನ್ನು ತೋರಿದ್ದಾರೆ. ಅಲ್ಲಿ ಒಳ್ಳೆಯ ಟೀಮ್ ಇದೆ. ನನ್ನ ಅನುಭವದಲ್ಲಿ ಹೇಳುವುದಾದರೆ ಅಧಿಕಾರಿಗಳಲ್ಲೂ ಕೂಡ ಬಹಳ ಉತ್ತಮವಾದಂತಹ ಟೀಮ್ ಕರ್ನಾಟಕದಲ್ಲಿದೆ. ಅವರು ಮನಸ್ಸು ಮಾಡಿದರೆ ಕರ್ನಾಟಕದ ಚಿತ್ರಣವನ್ನು ಬದಲಿಸಬಹುದಾಂತಹ ಒಂದು ಟೀಮ್ ಇದೆ. ಅವರಲ್ಲಿ ಪ್ರತಿಭೆಗಳು ಇವೆ, ಶಕ್ತಿ ಇದೆ. ಅದನ್ನು ಉಪಯೋಗಿಸಿಕೊಳ್ಳತಕ್ಕಂತಹ ಶಕ್ತಿ ಬೇಕಾಗುತ್ತದೆ. ಆ ರೀತಿಯಲ್ಲಿ ಇಡೀ ಕರ್ನಾಟಕ ರಾಜ್ಯವನ್ನು ಇವತ್ತು ನಾವೆಲ್ಲರೂ ಸೇರಿ ಉತ್ತಮವಾದಂತಹ ರೀತಿಯಲ್ಲಿ ತೆಗೆದುಕೊಂಡು ಹೋಗಲಿಕ್ಕೆ ಸಾಧ್ಯತೆ ಇತ್ತು. ಆ ಗಂಭೀರವಾದಂತಹ ವಿಷಯಗಳನ್ನು ಚರ್ಚೆ ಮಾಡಲಿಕ್ಕೆ ಸಾಧ್ಯತೆ ಇತ್ತು. ಇನ್ನು ಉತ್ತಮವಾದ ಕೆಲಸ ಮಾಡಿದ್ದರೆ ನಮ್ಮ ಇಡೀ ಸದನಕ್ಕೆ ಇನ್ನೂ ಹೆಚ್ಚಿನ ಗೌರವ ಬರುತ್ತಿತ್ತು ಎಂದು ಹೇಳತಕ್ಕದ್ದು ನನ್ನ ಅಭಿಪ್ರಾಯ. ಮತ್ತ ನಮ್ಮ ವಿರೋಧ ಪಕ್ಷದಲ್ಲಿ ಕುಳಿತಂತಹ ಹಿರಿಯ ಮುಖಂಡರುಗಳು ಅವರೆಲ್ಲರೂ ಕೂಡ ನಮಗೆ ಸಹಕಾರ ಕೊಟ್ಟಿದ್ದಾರೆ. ಎಲ್ಲಾ ರೀತಿಯಲ್ಲೂ ಕೂಡ ಸಹಕಾರ ಕೊಟ್ಟಿದ್ದಾರೆ. ಮತ್ತು ಲೆಜಿಸ್ಲೇಚರ್ ಸಿಬ್ಬಂದಿ ಏನಿದ್ದಾರೆ ಅವರು ಕೂಡ ಸಹಕಾರವನ್ನು ಕೊಟ್ಟಿದ್ದಾರೆ. ನಾವು ಹೊಸದಾಗಿ ಬಂದಿದ್ದರೂ ಕೂಡ ಇಲ್ಲಿ ಒಂದು ಪ್ರಮುಖವಾದಂತಹ ಪಾತ್ರವನ್ನು ನಿರ್ವಹಿಸಿ ಜನತೆಯ ಮುಂದೆ ನಾವು ಯಾವುದೇ ರೀತಿಯಲ್ಲಿ ಕೂಡ ನಾವು ಶಾಸಕರಾಗಿ ಬಂದು ನಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಿದ್ದೇವೆ. ನಮ್ಮ ಇತಿಮಿತಿ ಒಳಗಡೆ ನಾವೇನು ಮಾಡಬೇಕೋ ಅಷ್ಟನ್ನು ಮಾಡಿದ್ದೇವೆ ಎಂದು ಹೇಳತಕ್ಕ ತೃಪ್ತಿ ನಮಗೆ ಇದೆ. ಆದರೆ ಇನ್ನೂ ಹೆಚ್ಚು ಮಾಡಲಿಕ್ಕೆ ಅವಕಾಶ ಇತ್ತು. ಆದರೆ ನಾವೇ ಅದರಲ್ಲಿ ವಿಫಲತೆಯನ್ನು ಸಾಧಿಸಿರಬಹುದೇನೋ ಎನ್ನತಕ್ಕ ಭಾವನೆ ನಮಗೆ ಇದೆ ಎಂದು ಹೇಳಿ ಮತ್ತೊಮ್ಮೆ ನಿಮಗೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಸನ್ಮಾನ್ಯ ಸಭಾಧ್ಯಕ್ಷರೆ, ಎಲ್ಲ ಹಿರಿಯ, ಕಿರಿಯ ಆತ್ಮೀಯ ಶಾಸಕರೇ, ಪತ್ರಿಕಾ ರಂಗದವರೇ ಮತ್ತು ಕಾರ್ಯಾಂಗದ ಎಲ್ಲ ಅಧಿಕಾರಿಗಳೇ. ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಒಂದು ಸೊಸೈಟಿಯ ಎಲೆಕ್ಷನ್ ನಿಂತುಕೊಂಡವನಲ್ಲ. 20 ವರ್ಷಗಳ ಕಾಲ ಬೇಸಾಯ ಕ್ಷೇತ್ರದಲ್ಲಿ ಬೆಳೆದವನು. ಆಕಸ್ಮಿಕವಾಗಿ ರೈತ ಸಂಘವನ್ನು ಸೇರಿದ ಮೇಲೆ ನನ್ನನ್ನು ಮತದಾರರು ಪ್ರೀತಿಯಿಂದ ಚುನಾವಣೆಯಲ್ಲಿ ಗೆಲ್ಲಿಸಿ ಕಳುಹಿಸಿದರು. ನಾನು ಒಳಗೆ ಬಂದಾಗ ಏನೇನು ಚರ್ಚೆ ಮಾಡಬೇಕು, ಇಲ್ಲಿ ಯಾವ ರೀತಿಯಾಗಿ ಮಾತನಾಡಬೇಕು ಎಂದು ಒಳಗೆ ಬರುವುದಕ್ಕಿಂತ

ಮುಂಚೆಯೇ ನನ್ನ ಆಲೋಚನೆ ಇತ್ತು. ಹಿರಿಯ ಶಾಸಕರು ಯಾರಿದ್ದೀರಿ, ಅವರು ಯಾವ ರೀತಿಯಾಗಿ ಮಾತನಾಡಬೇಕು, ವಿಚಾರ ಹೇಗೆ ತಿಳಿದುಕೊಳ್ಳಬೇಕೆಂದು ತರಬೇತಿ ಕೊಟ್ಟಿರಿ. ಆದರೆ ಮೊದಲನೇ ಸಾರಿ ಸತ್ಯದ ಮೇಲೆ, ದೇವರ ಮೇಲೆ ಪ್ರಮಾಣ ಮಾಡುತ್ತೇವೆ. ನಾನು ಬಂದಾದ ಮೇಲೆ ನಾನು ಸುತ್ತಲೂ ನೋಡಿದೆ. ಯಾರೂ ತಪ್ಪು ತಿಳಿದುಕೊಳ್ಳಬಾರದು. ಎಂಇಎಸ್‌ನ ನಮ್ಮ ಸ್ನೇಹಿತರು ಕುಳಿತಿದ್ದರು. ಅವರು 'ಎಂ.ಇ.ಎಸ್.' ನವರೆಂದು ನನಗೆ ಗೊತ್ತಿಲ್ಲ. ಹೊಸದರಲ್ಲಿ ನಾನು ಇಲ್ಲಿಗೆ ಬಂದಂಥ ಸಂದರ್ಭದಲ್ಲಿ 'ಇಲ್ಲಿ ಬನ್ನಿ' ಎಂದು ಕೂಗಿ ಕರೆದೆ. ಅವರು ಪೇಪರ್ ಕೊಡುವವರೆಂದು ನಾನು ತಿಳಿದುಕೊಂಡೆ. ಅವರು ಪೇಟ ಧರಿಸಿದ್ದರಲ್ಲ, ಆದುದರಿಂದ, ನಮಗೆ ಪೇಪರ್ ಕೊಡುವವರು ಇಲ್ಲವೇ ತೆಗೆದುಕೊಂಡು ಹೋಗುವವರೆಂದು ನಾನು ತಪ್ಪು ತಿಳಿದುಕೊಂಡು ಕೂಗಿದ ತಕ್ಷಣ ಅವರು ಬಂದರು. 'ಪೇಪರ್ ಅನ್ನು ಅಲ್ಲಿ ತೆಗೆದುಕೊಂಡು ಹೋಗಿ ಕೊಡಿ' ಎಂದು ಹೇಳಿ ಕೊಟ್ಟೆ. ಅವರಿಗೆ ನನ್ನ ಭಾಷೆ ಗೊತ್ತಾಗಲಿಲ್ಲ, ನನಗೆ ಅವರ ಭಾಷೆ ಅರ್ಥವಾಗಲಿಲ್ಲ. ಅವರು ವಾಪಸ್ಸು ಹೋದ ಬಳಿಕ ನನ್ನ ಪಕ್ಕದಲ್ಲಿದ್ದವರನ್ನು 'ಪೇಟ ಹಾಕಿರುವವರು ಯಾರು?' ಎಂದು ಕೇಳಿದಾಗ ಅವರು ಎಂ.ಎಲ್.ಎ ಎಂದರು. ನಾನು ಗಾಭರಿಗೊಂಡು ಎಂತಹ ತಪ್ಪು ಮಾಡಿದೆಯೆಂದು ಅನ್ನಿಸಿ ಅನಂತರ ಅವರು ಸಿಕ್ಕಿದಾಗ ಆ ಬಗ್ಗೆ ಕ್ಷಮೆ ಕೇಳಿದೆ. ಸನ್ಮಾನ್ಯ ಅಧ್ಯಕ್ಷರೆ, ನನಗೆ ಬಹಳ ಕುತೂಹಲಕರವಾದ ವಿಷಯವೇನೆಂದರೆ, ಅದನ್ನೆಲ್ಲಾ ಕೇಳಿ ತಿಳಿದುಕೊಂಡು ಜ್ಞಾನ ಪಡೆದುಕೊಳ್ಳಬೇಕೆಂಬುದೇ ನನ್ನ ಆಸೆಯಾಗಿದೆ. ತಾವು ನಮಗೆ ಜಿಮ್ನಾಶಿಯಂ ವ್ಯವಸ್ಥೆ ಮಾಡಿದ್ದಲ್ಲದೆ ಲೈಬ್ರರಿ ಬಗ್ಗೆ ಹೇಳಿ ಹೆಚ್ಚು ಓದಬೇಕೆಂಬ ತಿಳಿವಳಿಕೆ ಕೊಟ್ಟಿರಿ. ಅದರಿಂದ ನಾವೆಲ್ಲರೂ ಬಹಳ ಜವಾಬ್ದಾರಿಯುತವಾಗಿ ಕೆಲಸ ಮಾಡಿದ್ದೇವೆ ಎಂದು ಹೇಳಿಕೊಳ್ಳುವುದಲ್ಲ, ಇದರ ಬಗ್ಗೆ ನಮಗೆ ನಾವೇ ಸ್ಕ್ಯಾನಿಂಗ್ ಮಾಡಿಕೊಳ್ಳಬೇಕು. ಅದಾಲತ್ ಎಂದರೆ ಸುಪ್ರೀಂ ಕೋರ್ಟ್, ಹೈಕೋರ್ಟ್ ಅಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಅದಾಲತ್ ಆಗಿದ್ದಾನೆ. ಏಕ್ ಕಿ ಇನ್‌ಸಾನ್ ಏಕ ಕಿ ಅದಾಲತ್. ನಾನೂ ಒಬ್ಬ ನ್ಯಾಯಾಲಯ, ನನ್ನ ಹತ್ತಿರ ಇಬ್ಬರು ವಕೀಲರುಗಳಿರುತ್ತಾರೆ. ನಾನು ಏನೇನು ಮಾಡಿದ್ದೇವೆನ್ನುವ ವಿಷಯದ ಬಗ್ಗೆ ನನ್ನ ಹೃದಯದಲ್ಲಿ ಚರ್ಚೆ ನಡೆಯುತ್ತಿರುತ್ತದೆ. ನನ್ನ ಜಡ್ಜ್‌ಮೆಂಟ್ ತೆಗೆದುಕೊಂಡರೆ ಈ ಸಮಾಜದಲ್ಲಿರುವ ಐದು ಕೋಟಿ ಜನರ ಪರವಾಗಿ ನಾನು ಎಷ್ಟು ಗಂಭೀರವಾಗಿ ಚಿಂತನೆ ಮಾಡಿದ್ದೇನೆಂಬುದು ನನಗೆ ಗೊತ್ತಾಗುತ್ತದೆ. ಇಂಡಿವಿಜುಯಲ್ ಆಗಿ ಸ್ಕ್ಯಾನಿಂಗ್ ಮಾಡಿಕೊಳ್ಳಬೇಕಷ್ಟೆ. ನಾವು ಯಾರೋ ಬಹಳ ಜವಾಬ್ದಾರಿಯಿಂದ ಕೆಲಸ ಮಾಡಿದರೆ ಯಾರನ್ನು ಹೊಗಳುವುದಲ್ಲ, ಯಾರನ್ನು ತೆಗಳುವುದಲ್ಲ. ನನಗೆ ಮಾನ್ಯ ಮುಖ್ಯಮಂತ್ರಿಗಳ ಕುರಿತು 2-3 ವಿಷಯಗಳಿಗೆ ಸಂಬಂಧಿಸಿದಂತೆ ಬಹಳ ಸಿಟ್ಟು ಇತ್ತು. ನಮ್ಮ ಸ್ನೇಹಿತರು ಹೇಳಿದಂತೆ ಅವರಲ್ಲಿ ಹೃದಯವಂತಿಕೆ ಜೊತೆಗೆ ಎಲ್ಲವೂ ಇದೆ. ನಿಜವಾದ ಹಾಸ್ಯ ಎಲ್ಲಿರುತ್ತದೋ ಅಲ್ಲಿ ಹೃದಯವಂತಿಕೆ ಇರುತ್ತದೆ. ಆದರೆ, ಅಲ್ಲಿ ಮುಖ್ಯವಾಗಿ ಕಮಿಟ್‌ಮೆಂಟ್ ಸಹ ಇರಬೇಕಾಗುತ್ತದೆ. ಮುಖ್ಯಮಂತ್ರಿಗಳಾದವರು ಎಲ್ಲಾ ಮಂತ್ರಿಗಳನ್ನು ಕರೆದು ರಿವ್ಯೂ ಮಾಡತಕ್ಕಂಥ ಕೆಲಸ ಮಾಡಿದ್ದರೆ ಸರ್ಕಾರದಲ್ಲಿ ಇನ್ನೂ ಅತ್ಯುನ್ನತವಾದ ಸಾಧನೆಯಾಗುತ್ತಿತ್ತು. ಈ ಕೆಲಸವನ್ನು ಅವರು ಕೈಬಿಟ್ಟರು. ಪ್ರತಿಯೊಂದು ಇಲಾಖೆಯನ್ನೂ ರಿವ್ಯೂ ಮಾಡಿ ಜವಾಬ್ದಾರಿಯನ್ನು ನಿರ್ವಹಿಸಿದ್ದರೆ ಅವರಿಗೆ ಇನ್ನೂ ಹೆಚ್ಚು ಜ್ಞಾನ ಬೆಳೆಯುತ್ತಿತ್ತಲ್ಲದೆ ಆಡಳಿತ ಸುಧಾರಣೆಯಾಗುತ್ತಿತ್ತು. ಇದರಲ್ಲಿ ಅವರು ವಿಫಲರಾದರು.

ಕೆಲಸ ಮಾಡಿರುವ ಬೇರೆ ಮಂತ್ರಿಗಳ ಬಗ್ಗೆ ಹೊಗಳುವಂತಾದ್ದೇನೂ ಇಲ್ಲ. ತಮ್ಮ ಜವಾಬ್ದಾರಿಯನ್ನು ಅವರು ಅತ್ಯಂತ ಸಮರ್ಥ ರೀತಿಯಿಂದ ನಿರ್ವಹಿಸಿದ್ದಾರೆ. ಆದರೆ, ಅವರ್‍ಯಾರಿಗೂ ಕೂಡ ಸೆಲ್ಫ್ ಕಾನ್‌ಫಿಡೆನ್ಸ್ ಇಲ್ಲ. ಮಾಡಿರುವ ಸಾಧನೆ ಕುರಿತು ಹೇಳಲು ರಾಜ್ಯದ ಮತದಾರನ ಹತ್ತಿರ ಹೋಗುತ್ತೇವೆನ್ನುವ ಭಾವನೆಯೇ ಅವರಿಗಿಲ್ಲ. ಅದರಲ್ಲೂ ವಿಶೇಷವಾಗಿ ಹೊಸದಾಗಿ ನಾನು ಈ ಶಾಸನಸಭೆಗೆ ಆರಿಸಿ ಬಂದಾಗ ದೇವೇಗೌಡರನ್ನು ಕಂಡಾಗ ಬಹಳ ಭಯ ಬಂದಿತ್ತು. ಮಾತೆತ್ತಿದ್ದರೆ ಜುಬ್ಬಾವನ್ನು ಮೊಣಕೈ ಮೇಲೆಳೆಯುತ್ತಿದ್ದರು, ಜಗಳವಾಗುತ್ತದೆಯೋ ಏನೋ ಎಂದು ಕಾದುಕೊಂಡಿದ್ದೆ, ಏನೂ ಆಗಲಿಲ್ಲ. ಅವರು ದಿವಸಕ್ಕೆ 18-19 ಗಂಟೆಗಳ ಕಾಲ ದುಡಿಯುತ್ತಿದ್ದರು. ಸಿಟ್ಟು ಇತ್ತು. ನಗುವುದಂತೂ ಬಹಳ ಕಡಿಮೆಯಿತ್ತು. ಅವರಿಂದ ಬಹಳ ಅನುಭವ ಪಡೆದಿದ್ದೇವೆ. ಅದರಲ್ಲೂ ಸಭಾಧ್ಯಕ್ಷರಾದ ನಿಮ್ಮ ಮಾರ್ಗದರ್ಶನವಂತೂ ಬಹಳ ಅತ್ಯುತ್ತಮವಾಗಿತ್ತು. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿರುವ ವಿಷಯದ ಬಗ್ಗೆ ನನ್ನದೂ ಸಹಮತವಿದೆ. ಶ್ರೀರಾಮರೆಡ್ಡಿ ಮತ್ತು ನನ್ನನ್ನು ಬಿಟ್ಟು ನೀವು ಊಟ ಮಾಡಿರುವುದನ್ನು ನೋಡಿಲ್ಲ. ಶ್ರೀರಾಮರೆಡ್ಡಿಯವರನ್ನಂತೂ ಕರೆಯಲೇಬೇಕು. ಏಕೆಂದರೆ, ನಮ್ಮ ಪಕ್ಷದಲ್ಲಿ ಪ್ರೆಸಿಡೆಂಟ್, ಅಟೆಂಡರ್ ಎಲ್ಲವೂ ನಾವೇ ಆಗಿದ್ದೇವೆ. ಆದುದರಿಂದ, ನೀವು ಊಟ ಮಾಡುವಾಗಲೆಲ್ಲಾ ಮೊದಲು ಶ್ರೀರಾಮರೆಡ್ಡಿ ಹಾಗೂ ಪುಟ್ಟಣ್ಣಯ್ಯನವರನ್ನು ಹುಡುಕಿಕೊಂಡು ಬನ್ನಿ ಎಂದು ಹೇಳುತ್ತಿದ್ದಿರಿ. ನೀವು ಒಳ್ಳೆಯ ಊಟ ಕೊಟ್ಟಿದ್ದೀರಿ, ಇದರ ಜೊತೆಗೆ ಉತ್ತಮ ಜ್ಞಾನ ಬೆಳೆಸುವ ವಿಚಾರವನ್ನೂ ತಿಳಿಸಿದ್ದೀರಿ. ಆದರೆ, ನೀವು ಮೂರು ಬಾರಿ ಕೋಪಿಸಿಕೊಂಡಿದ್ದು ನೋಡಿ ಆಶ್ಚರ್ಯವಾಯಿತು. ಇಷ್ಟೆಲ್ಲಾ ತಿಳಿವಳಿಕೆಯುಳ್ಳವರಾದ ಇವರಿಗೇಕೆ ಇಷ್ಟು ಕೋಪ ಬಂತೆಂದು ತಿಳಿದುಕೊಂಡೆವು. ಸ್ಪೀಕರ್ ಆದವರು ಭೂಮಿ ಇದ್ದಂತೆ, ಭೂಮಿ ಮೇಲೆ ನಾವು ಏನೇ ಮಾಡಿದರೂ ಅದು ಸುಮ್ಮನಿರುವುದಿಲ್ಲವೇ. ಹಾಗೆಯೇ, ಸ್ಪೀಕರ್ ಮತದಾರ ಮತ್ತು ಭೂಮಿ, ಈ ಮೂರೂ ಒಂದು. ಮತದಾರನಿಗೆ ಏನು ಮಾಡಿದರೂ ಆತ ಸುಮ್ಮನಿಲ್ಲವೇ, ಹಾಗೆಯೇ ಭೂಮಿಯೂ ಸಹ. ಸ್ಪೀಕರ್ ಸಹ ಈ ರೀತಿ ಇರಬಹುದು. ಆದರೆ, ಸ್ಪೀಕರ್‌ಗೂ ಸಿಟ್ಟು ಬರುತ್ತದೆಯೇ ಎಂದು ಒಮ್ಮೊಮ್ಮೆ ಯೋಚನೆ ಬರುತ್ತದೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್: ಕೆಲವೊಮ್ಮೆ ಭೂಮಿಗೂ ಸಿಟ್ಟಾಗಿ ಭೂಕಂಪವಾಗುತ್ತದಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಭೂಕಂಪವಾಗುವ ವಿಷಯ ಬೇರೆ. ಅದಕ್ಕೆ ಜೀವವಿಲ್ಲ, ನಮಗೆ ಜೀವವಿದೆಯಲ್ಲ. ಭೂಮಿಯ ವಿಷಯವನ್ನು ನಾವು ತಿಳಿದುಕೊಂಡಿದ್ದೇವೆ. ಏಕೆಂದರೆ, ಮನುಷ್ಯನಿಗೆ ಎಲ್ಲಾ ಪ್ರಾಣಿಗಳಿಗಿಂತಲೂ ವಿಶೇಷವಾದ ಬ್ರೈನ್ ಎಂಬುದೊಂದಿದೆ. ಅದು ಬೇರೆ ಪ್ರಾಣಿಗಳಿಗೆ ಇಲ್ಲದಿರುವುದರಿಂದ, ನಮಗೆ ವಿಶೇಷವಾದ ಜ್ಞಾನವಿದ್ದು ಅದರಿಂದ ಇಡೀ ಪ್ರಾಕೃತಿಕ ಸಂಪತ್ತೆಲ್ಲವನ್ನೂ ನಮ್ಮ ಬದುಕಿಗೆ ಉಪಯೋಗಿಸಿಕೊಳ್ಳತಕ್ಕಂಥ ಶಕ್ತಿ ನಮ್ಮ ಮಿದುಳಿಗಿದೆ. ಒಲಿಂಪಿಕ್ಸ್ ಸಂದರ್ಭದಲ್ಲಿ ಜೆಸ್ಸಿ ಓವನ್ಸ್‌ನನ್ನು ಉದ್ದೇಶಿಸಿ, ಬರ್ಲಿನ್ ಒಲಂಪಿಕ್ಸ್ ಬಗ್ಗೆ ನಿನ್ನ ಅಭಿಪ್ರಾಯವೇನೆಂದು ಕೇಳಿದಾಗ. 'ಒಲಿಂಪಿಕ್ಸ್‌ನಲ್ಲಿ ಯಾರ್‍ಯಾರು ಭಾಗವಹಿಸಿದ್ದಾರೋ ಅವರೆಲ್ಲರೂ ಗೋಲ್ಡ್ ಮೆಡಲಿಸ್ಟ್' ಎಂದು ಹೇಳುತ್ತಾನೆ. ಆದುದರಿಂದ, ಇಲ್ಲಿ ಭಾಗವಹಿಸಿರುವವರೆಲ್ಲರೂ ಗೋಲ್ಡ್ ಮೆಡಲಿಸ್ಟ್ ಆಗಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಎಲ್ಲರೂ ಗೆದ್ದು ವಾಪಸ್ಸು ಬರಲೆಂದು ಶುಭ ಕೋರುತ್ತಾ ರಾಜ್ಯದ,

ಸಮಾಜದ ಹೊಣೆಗಾರಿಕೆ, ಉಳ್ಳವರು ಹಾಗೂ ಇಲ್ಲದವರ ಬಗ್ಗೆ ಯಾವ ರೀತಿಯ ಕಾರ್ಯಕ್ರಮಗಳು ಮುಂದುವರೆಯಬೇಕು, ಇಲ್ಲಿ ನಮ್ಮ ಲೋಪ-ದೋಷಗಳು ಯಾವುವು ಇವೆಯೋ ಅದನ್ನು ತಿದ್ದಿಕೊಂಡು ಈ ಸಮಾಜದ ಪರವಾಗಿ ಒಬ್ಬ ಶಾಸಕ ಹೋರಾಟಗಾರನಾಗತಕ್ಕಂಥ ವಿಚಾರದ ಮೇಲೆ ಬೆಳೆಯಬೇಕು, ಆ ರೀತಿ ಬರಬೇಕು. ನಮ್ಮಲ್ಲಿರುವ ಲೋಪ-ದೋಷಗಳನ್ನು ಸರಿಪಡಿಸಿಕೊಂಡು ಎಲ್ಲರೂ ಈ ಶಾಸನಸಭೆಗೆ ಬರಲೆಂದು ಹಾರೈಸುತ್ತಿದ್ದೇನೆ. ವಿಶೇಷವಾಗಿ ಶ್ರೀರಾಮರೆಡ್ಡಿಯವರ ಬಗ್ಗೆ ಹೇಳುವುದಾದರೆ, ಯಾರನ್ನು ಮರೆತರೂ ನಾವು ಅವರನ್ನು ಮರೆಯುವಂತಿಲ್ಲ. ಅವರಿಗೆ ಯಾವಾಗಲೂ ಸಿಟ್ಟು, ಆದರೆ, ನಾವು ಮಾತ್ರ ಸಮಾಧಾನ ಮಾಡಿಕೊಳ್ಳುತ್ತಿದ್ದೆವು. ಅವರಲ್ಲಿ ಯಾವುದೋ ಕೊರತೆಯಿರುವುದರಿಂದ ಸಿಟ್ಟು ಮಾಡಿಕೊಳ್ಳುತ್ತಾರೆ. ಆದುದರಿಂದ, ನಾವು ಯಾರೂ ಕೂಡ ಸಿಟ್ಟು ಮಾಡಿಕೊಳ್ಳಬಾರದು. ಅವರು ಏಟು ಹೊಡೆದರೂ ಹೊಡೆಸಿಕೊಂಡು ಸುಮ್ಮನೆ ಕುಳಿತುಕೊಳ್ಳಬೇಕು, ಯಾವುದೇ ಕಾರಣಕ್ಕೂ ಸಿಟ್ಟಾಗಬಾರದೆಂದು ಹೇಳುತ್ತಾ ಹಾಗೂ ಎಲ್ಲರಿಗೂ ಒಳ್ಳೆಯದಾಗಲೆಂದು ಶುಭ ಕೋರುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು ; ನಾನು ಎಲ್ಲರನ್ನೂ ವಿನಂತಿಸಿಕೊಳ್ಳುವುದೇನೆಂದರೆ, ಇವೊತ್ತು ಅಧಿವೇಶನದ ಕೊನೆಯ ದಿವಸವಾದ್ದರಿಂದ ಕೆಲವರು ಹತ್ತು ನಿಮಿಷಗಳ ಕಾಲ ಮಾತನಾಡಲು ಅಪೇಕ್ಷಿಸಿರುವುದರಿಂದ ಆತುರಪಡದೆ ಸಹನೆಯಿಂದಿರಬೇಕು.

+ಶ್ರೀ ಎಸ್. ರಾಜೇಂದ್ರನ್ (ಕೆಜಿಎಫ್) : ಸನ್ಮಾನ್ಯ ಅಧ್ಯಕ್ಷರೆ, ತಾವು ನಮಗೆಲ್ಲರಿಗೂ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ನಾವು ರಾಜಕೀಯದಲ್ಲಿ ನರ್ಸರಿಯಲ್ಲಿದ್ದರೆ, ವಾಟಾಳ್ ನಾಗರಾಜ್‌ರವರು ಪಿ.ಹೆಚ್.ಡಿ. ಮಾಡಿದ್ದು, ಇನ್ನಿತರ ಸದಸ್ಯರುಗಳು ಪ್ರೊಫೆಸರ್‌ಗಳಾಗಿದ್ದು ಒಳ್ಳೆಯ ಸ್ಟೇಟಸ್‌ನಲ್ಲಿರುವವರಾಗಿದ್ದು, ಇವರಿಗೆಲ್ಲರಿಗಿಂತ ಮೇಲಾಗಿ ಇವರಿಗೆಲ್ಲರೂ ತಾವು ಪ್ರಿನ್ಸಿಪಾಲ್ ತರಹ ಇದ್ದೀರಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ರಾಜೇಂದ್ರನ್‌ರವರು ಒಂದು ವಿಷಯದಲ್ಲಿ ಅಂದರೆ ಚಿನ್ನದಲ್ಲಿ ಇಲ್ಲಿರುವವರಿಗಿಂತಲೂ ಬಹಳಷ್ಟು ದೊಡ್ಡವರಾಗಿದ್ದಾರೆ.

ಶ್ರೀ ಎಸ್. ರಾಜೇಂದ್ರನ್ : ನನ್ನ ಭೂಮಿಯೇ ಚಿನ್ನದ ಗಣಿ, ನಮ್ಮ ಊರೇ ಚಿನ್ನ, ಜೊತೆಗೆ ನಮ್ಮ ಹೃದಯವೂ ಚಿನ್ನವಾಗಿದ್ದು, ಆ ಚಿನ್ನದ ಹೃದಯವನ್ನೇ ನಾವು ಜೆ.ಹೆಚ್.ಪಟೇಲರ ಸರ್ಕಾರಕ್ಕೆ ಬೆಂಬಲವಾಗಿ ಕೊಟ್ಟಿದ್ದೇವೆ. ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಶಿಸ್ತು ಹೇಗಿದೆಯೆಂದರೆ, well-disciplined. My speaker is not a hypocrat. My speaker is not prejudiced. My speaker, we can say is a knowledgeable personality. ಬೇರೆ ರಾಜ್ಯಗಳ ಸದನದಲ್ಲಿ ಕುರ್ಚಿ ಹಾಗೂ ಚಪ್ಪಲಿಯನ್ನು ಎಸೆಯುವುದಿದ್ದರೆ we can make out easily what is the discipline in that House. But, here, we have not faced anything. We have ssen only the discipline. ಹೊಸದಾಗಿ ಈ ಶಾಸನಸಭೆಗೆ ನಾವು ಆರಿಸಿ ಬಂದಾಗ ತಾವು ಪೀಠವನ್ನಲಂಕರಿಸಿದ್ದಾಗ ಸದನದಲ್ಲಿ ನಾವು ಹೇಗೆ ಮಾತನಾಡಬಹುದು, ಮಾತನಾಡುವುದಕ್ಕೆ ಸಾಧ್ಯವಿಲ್ಲವೇ? ಅಧ್ಯಕ್ಷರು ಬಹಳ

ಬುದ್ಧಿವಂತರಿರುವುದರಿಂದ ನಾವೇನು ಮಾಡಬಹುದೆಂಬ ಭಯ ನಮ್ಮಲ್ಲಿ ಇರುತ್ತಿತ್ತು. ಅದೇ ರೀತಿ ತಾವು ಪೀಠದಲ್ಲಿಲ್ಲದಿದ್ದಾಗ ನಮ್ಮ ರಕ್ಷಣೆಗೆ ಯಾರೂ ಬರುವುದಿಲ್ಲ, ಮತ್ತು ಸಚಿವರು ಸಹ ಸುಮ್ಮನೆ ಫಾಲ್ಸ್ ಪ್ರಾಮಿಸ್ ಕೊಡುತ್ತಾರೆ, ಅಧ್ಯಕ್ಷರು ಇದ್ದರೆ ಏನಾದರೂ ಹೇಳಬಹುದು ಎನ್ನುವ ಆತುರವಿತ್ತು. What we feel is that you are like a sun. ಮಳೆ ಬರುವ ಸಮಯದಲ್ಲಿ 'ಅಯ್ಯೋ, ಸೂರ್ಯ ಬಂದಿಲ್ಲವೇ' ಎಂದು ತುಂಬಾ ಬಿಸಿಲಿರುವಾಗ ಮಳೆ ಬಂದಿಲ್ಲವೇ ಎನ್ನುವಂತೆ ನಮ್ಮ ಪರಿಸ್ಥಿತಿ. We really like your eloquent knowledge. You have safeguared both the side, not only the ruling side, but also the opposition side; we can say like the Krishna paramathma ಒಮ್ಮೆ ಕೃಷ್ಣ ಪರಮಾತ್ಮ ಏನು ಮಾಡಿದನೆಂದರೆ, ಮಹಾಭಾರತದಲ್ಲಿ ಕುರುಕ್ಷೇತ್ರ ಯುದ್ಧವನ್ನು ಮುಗಿಸಿಕೊಂಡು ಪಾಂಡವರು ಗೆದ್ದು ಸಂತೋಷದಲ್ಲಿರುವಾಗ ಅರ್ಜುನನಿಗೆ ಸಾರಥಿಯಾಗಿದ್ದ ಕೃಷ್ಣ ರಥದಿಂದಿಳಿಯುವ ಸಮಯದಲ್ಲಿ ಕೃಷ್ಣನನ್ನು ಉದ್ದೇಶಿಸಿ ಅರ್ಜುನ "ಕೃಷ್ಣ ನೀನು ರಥದಿಂದ ಇಳಿದ ಬಳಿಕ ನಾನು ಬರುತ್ತೇನೆ" ಎಂದಾಗ ಕೃಷ್ಣ ಪರಮಾತ್ಮ ಅರ್ಜುನನಿಗೆ 'ಮೊದಲು ನೀನು ಕೆಳಗಿಳಿದು ಹೋಗು, ನಂತರ ನಾನು ಬರುತ್ತೇನೆ' ಎಂದಾಗ ಅರ್ಜುನ 'ನಾನು ನಾಯಕನಲ್ಲವೇ, ಯುದ್ಧದಲ್ಲಿ ವೀರೋಚಿತವಾಗಿ ಕಾದಾಡಲಿಲ್ಲವೇ, ನೀನೇ ಮೊದಲು ರಥದಿಂದ ಕೆಳಗಿಳಿಯಬೇಕು' ಎಂದಾಗ ಕೃಷ್ಣನೇ ಅರ್ಜುನನ ಮನವೊಲಿಸಿ ಆತನನ್ನು ಮೊದಲು ರಥದಿಂದಿಳಿಯುವಂತೆ ಮಾಡುತ್ತಾನೆ. ಅರ್ಜುನ ರಥದಿಂದಿಳಿದ ಬಳಿಕ ಕೃಷ್ಣ ಇಳಿಯುತ್ತಾನೆ.Immediately the entire Ratha was under fire. ಆಗ ಅರ್ಜುನ ಕೃಷ್ಣ ಪರಮಾತ್ಮನನ್ನು ಉದ್ದೇಶಿಸಿ 'ಏನು ಕೃಷ್ಣ ಹೀಗಾಗಿದೆ?' ಎಂದಾಗ ಕೃಷ್ಣ ಅರ್ಜುನ ನೀನಿನ್ನೂ ಚಿಕ್ಕ ಹುಡುಗ. ಅದರ ಮೇಲೆ ಹಾಕಿರುವ ಶಸ್ತ್ರಾಸ್ತ್ರಗಳೆಲ್ಲ , ಭೀಷ್ಮ, ದ್ರೋಣಾಚಾರ್ಯ ಇಷ್ಟೊಂದು ದೊಡ್ಡ ದೊಡ್ಡ ಮಹಾನುಭಾವರಿಗೆಲ್ಲ ಅದನ್ನು ಹಾಕಿರುವುದು, ನಾನು ಕುಳಿತುಕೊಂಡಿರುವುದಕ್ಕೋಸ್ಕರವೇ ಅದು ಫೈಯರ್ ಆಗಿಲ್ಲ. ನಾನು ಮೊದಲೇ ಇಳಿದು ಹೋಗಿದ್ದರೆ you have been burnt to ashes. ಎಂದು ಹೇಳುತ್ತಾರೆ. ಹಾಗೆ ತಾವು ಯಾವಾಗ ಸದನದಲ್ಲಿ ಇರುವುದಿಲ್ಲವೋ ಅವತ್ತು ತಮ್ಮ ಸ್ಥಾನದಲ್ಲಿರುವ ಉಪಾಧ್ಯಕ್ಷರು ನಮ್ಮನ್ನು ಕುಳಿತುಕೊಳ್ಳಿ, ಕುಳಿತುಕೊಳ್ಳಿ ಎಂದು ಹೇಳಿದರೂ ಒಬ್ಬರೂ ಕುಳಿತುಕೊಳ್ಳುವುದಿಲ್ಲ. ಆದರೆ ತಾವು ಬಂದರೆ ಎಲ್ಲರೂ ಸುಮ್ಮನೆ ಕುಳಿತುಬಿಡುತ್ತೇವೆ. That shows your inttelligence. ಈ ಸದನದಲ್ಲಿ ನಾವು ಯಾರನ್ನು ಗೌರವಪೂರ್ವಕವಾಗಿ ಕಂಡಿದ್ದೇವೆಂದರೆ you are the first person to command the respect of the entire House. ಅಷ್ಟು ಗೌರವ ತಮ್ಮ ಮೇಲೆ ನಮಗೆಲ್ಲ ಇದೆ. ತಮ್ಮ ಹೃದಯದಲ್ಲಿ ಈ ಸದನದ ಬಗ್ಗೆ ಸ್ವಲ್ಪವೂ ನೋವು ಬರಬಾರದು. ಅಷ್ಟೊಂದು ಗೌರವವನ್ನು ತಮಗೆ ಇಡೀ ಸದನ ಕೊಟ್ಟಿದೆ. ಅನಂತರ ನಮ್ಮ ಸಚಿವರುಗಳೆಲ್ಲರೂ ಒಳ್ಳೆಯವರೆ. ಜೇನು ತುಪ್ಪವನ್ನು ಎಲ್ಲಿ ಮುಟ್ಟಿದರೆ ಸಿಹಿ ಎಂದು ಹೇಳಲು ಆಗುತ್ತದೆಯೇ? ಸ್ವಲ್ಪ ತೆಗೆದುಕೊಂಡರೂ ಸಿಹಿಯೆ, ಒಂದು ಬಾಟಲ್ ತೆಗೆದುಕೊಂಡರೂ ಸಿಹಿಯೇ, ಅವರುಗಳು ಯಾವಾಗಲೂ ಸಿಹಿಯಾದ ಮಾತುಗಳನ್ನು ಹೇಳಿದ್ದಾರೆ. ನಾವು ಏನಾದರೂ ಕೇಳಿದರೆ ಯಾವಾಗಲೂ ಮಾಡುತ್ತೇವೆ ಎಂದು ಹೇಳಿದ್ದಾರೆ, ಎಂದೂ ಇಲ್ಲ ಎಂದು ಹೇಳಿಲ್ಲ. ಇಷ್ಟೆಲ್ಲಾ ಇರುವ ಸದನದಲ್ಲಿ ನನಗೆ ಯಾವಾಗಲೂ ಮುಖ್ಯಮಂತ್ರಿಯವರನ್ನು ನೋಡಿದ

ತಕ್ಷಣ "ಹಲೋ ಹೀರೋ" ಎಂದು ಕೊಳ್ಳುತ್ತೇನೆ. ನನಗೆ ಹೀರೋವಿನ ಮಾತು ಕೇಳಬೇಕೆಂದರೆ ಮಾನ್ಯ ಜೆ.ಹೆಚ್. ಪಟೇಲರು ಯಾವಾಗಲೂ ಮುಖ್ಯಮಂತ್ರಿಗಳಾಗಿಯೇ ಇರಬೇಕು. ಅಷ್ಟೊಂದು ಪ್ರೀತಿ ಅವರ ಮೇಲೆ ಇದೆ. ಅವರಿಗೆ ಏನಾಗಿದೆ ಎಂದರೆ He should not mistake ಕೆಲವು ಸಂದರ್ಭದಲ್ಲಿ ಭಿನ್ನಮತೀಯರು ಸೇರಿ ಏನೇನೋ ತೊಂದರೆಗಳನ್ನು ಉಂಟು ಮಾಡಿದ್ದಾರೆ. ಆವತ್ತೂ ಅವರು ನಗುತ್ತಿದ್ದರು. ಆ ವಿಷಯವನ್ನು ಅವರು ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ಒಂದು ಚಿಕ್ಕ ಉದಾಹರಣೆಯನ್ನು ಹೇಳುತ್ತೇನೆ. ಒಬ್ಬ ಮಹಾರಾಜ ಯಾವಾಗ ಹೋಗಬೇಕಾದರು ಆ ಸಮಯದಲ್ಲಿ ಒಂದು ಕೋತಿ ಆ ರಾಜ ಏನೇನು ಮಾಡುತ್ತಾನೆ ಅದೇ ರೀತಿ ಮಾಡುತ್ತಿತ್ತು. ಮಹಾರಾಜನಿಗೆ ಕೋಪ ಬಂದು ಏನು ಈ ಕೋತಿ ಯಾವಾಗಲೂ ನಾನು ಮಾಡಿದ ರೀತಿ ಮಾಡುತ್ತದೆ. ಹೇಗಾದರೂ ಮಾಡಿ ಅದನ್ನು ಓಡಿಸಬೇಕೆಂದು ಸೂಚನೆ ಕೊಡುತ್ತಾನೆ. ಏನೇನೋ ಮಾಡಿದರು ಆ ಕೋತಿಯನ್ನು ಓಡ್ಡಿಸಲು ಸಾಧ್ಯವಾಗುವುದಿಲ್ಲ. ಕೊನೆಗೆ ಈ ಕೋತಿಯನ್ನು ಓಡಿಸುವವರಿಗೆ ಸಾವಿರ ಚಿನ್ನದ ನಾಣ್ಯಗಳನ್ನು ಕೊಡುತ್ತೇವೆ ಎಂದು ಡಂಗೂರು ಸಾರುತ್ತಾರೆ. ಯಾರ್ಯಾರೋ ಬಂದು ಪ್ರಯತ್ನ ಮಾಡಿದರು ಆ ಕೋತಿ ಆ ಮಹಾರಾಜ ಹೋಗುವಾಗ ಏನೇನು ಮಾಡುತ್ತಾನೆ ಅದೇ ರೀತಿ ಮಾಡುತ್ತಿತ್ತು. ಕೊನೆಗೆ ಒಬ್ಬ ಬಾರ್ಬರ್ ಮುಂದೆ ಬಂದು ನಾನು ಹೇಗಾದರೂ ಮಾಡಿ ಆ ಕೋತಿಯನ್ನು ಸಾಯಿಸುತ್ತೇನೆ ಎಂದು ಹೇಳುತ್ತಾನೆ. ಅವನು ಎರಡು ಶೇವಿಂಗ್ ಮಾಡುವ ಚಾಕುಗಳನ್ನು ತರುತ್ತಾನೆ, ಒಂದರ ಮೇಲೆ ಒಂದನ್ನು ಇಟ್ಟು ಕೈಯಲ್ಲಿ ಇಟ್ಟುಕೊಂಡು ಆ ಚಾಕುವನ್ನು ತೆಗೆದುಕೊಂಡು ನಟನೆ ಮಾಡುತ್ತಾನೆ, ಆ ಕೋತಿ ಸಹ ಅದೇ ರೀತಿ ಮಾಡುತ್ತದೆ, ಈ ಕೈಯಲ್ಲಿ ಹೀಗೆ ಮಾಡಿದರೆ ಕೋತಿ ಸಹ ಅದೇ ರೀತಿ ಮಾಡಿತು, ಆ ಕೈಯಲ್ಲಿ ಹೀಗೆ ಮಾಡಿದರೆ ಕೋತಿ ಸಹ ಅದೇ ರೀತಿ ಮಾಡಿತು, ಅನಂತರ ಇವರು ಹುಷಾರ್ ಆಗಿ ಕೋತಿ ನಾವು ಏನೇನು ಮಾಡುತ್ತೇವೆ ಅದನ್ನೆಲ್ಲ ಮಾಡುತ್ತದೆ ಎಂದು ಕೋತಿಯನ್ನು ಹಾಗೆಯೇ ಸಾಯಿಸಬೇಕೆಂದು ಚಾಕುವನ್ನು ಟರ್ನ್ ಮಾಡಿ ಜೋರಾಗಿ ಮಾಡಿದರು ಕೋತಿ ಅದೇ ರೀತಿ ಮಾಡಿದ್ದರೆ ಸತ್ತುಹೋಗುತ್ತಿತ್ತು, ಆದರೆ ಕೋತಿ ಇವನನ್ನು ನೋಡಿ ನಗುತ್ತ ತಾವು ಚಾಕುವನ್ನು ಟರ್ನ್ ಮಾಡಿ ಚುಚ್ಚಿಕೊಂಡಂತೆ ಮಾಡಿ ನನ್ನನ್ನು ಸಾಯಿಸಲು ನೋಡುತ್ತೀರಾ ಎಂದು ಹೇಳಿತು. ಆ ರೀತಿ ಮಾನ್ಯ ಪಟೇಲರು ಬುದ್ಧಿವಂತರು. ಅವರ ಬುದ್ಧಿಶಕ್ತಿ ಕಡಿಮೆ ಇದ್ದಿದ್ದರೆ Before six months, We would not have been MLSs in this House ಅಷ್ಟೊಂದು ಬುದ್ಧಿವಂತಿಕೆಯನ್ನು ಉಪಯೋಗ ಮಾಡಿ ನಮಗೆಲ್ಲ ಶಾಸಕರಾಗಿ ಮುಂದುವರೆಸಲು ಅವಕಾಶ ಕೊಟ್ಟಿರುವ ಮಾನ್ಯ ಜೆ.ಹೆಚ್.ಪಟೇಲರಿಗೆ I should be greateful and the entire House should be grateful ಅಷ್ಟೊಂದು ರಕ್ಷಣೆಯನ್ನು ಮಾಡಿ ನಮಗೆ ಶಾಸಕರಾಗಿ ಮುಂದುವರೆಯಲು ಅವಕಾಶ ಕೊಟ್ಟಿದ್ದಾರೆ ಆ ಕ್ರೆಡಿಟ್ ಮಾನ್ಯ ಜೆ.ಹೆಚ್. ಪಟೇಲರಿಗೆ ಹೋಗುತ್ತದೆ. ಅಂಥ ಮಹಾನ್‌ವ್ಯಕ್ತಿಯ ಮೇಲೆ ನಾನು ಯಾವಾಗಲೂ ವಿಶ್ವಾಸವನ್ನು ಇಟ್ಟುಕೊಂಡಿದ್ದೇನೆ. He should always have a good health and he should always be a socialist man. ಅವರು ಸೋಷಿಯಲಿಸ್ಟ್ ಮ್ಯಾನ್, ಎಲ್ಲರೂ ನಾವು ಸೋಷಿಯಲಿಸ್ಟಿಕ್ ಮ್ಯಾನ್ ಎಂದು ಹೇಳುತ್ತಾರೆ. ಮಂತ್ರಿಗಳು ಅವರ ಮೇಲೆ ಸೋಷಿಯಲಿಸ್ಟಿಕ್ ಮ್ಯಾನ್ ಎಂಬ ಬಗ್ಗೆ ಯಾವುದೇ ಉದಾಹರಣೆಯನ್ನು ಕೊಟ್ಟಿಲ್ಲ. Finally I can give one

example. In the Scheduled Caste/Scheduled Tribe Corporation alone, they have irrigated 93,000 Acres of land belonging to Scheduled Caste. I am giving an authentic evidence. Around 50,600 borewells were dug. Nowhere in India there is one Department which has given so much of benefits to the scheduled caste people. ಲಿಫ್ಟ್ ಇರಿಗೇಷನ್ ಇರಬಹುದು, ಇಂಡುವಿಜ್ಯುಯಲ್ ಬೋರ್‌ವೆಲ್‌ಗಳು ಇರಬಹುದು, ಗಂಗಾಕಲ್ಯಾಣ ಇರಬಹುದು, This is the biggest achievement not only in our State, but throughout India. Nobody has made this achievement. That credit goes to him. He is called socialist man. This is called socialist revolution and Sri J.H. Patel is the first man in this State who has brought this and that credit must go to Sri J.H. Patel. ನಾನು ಯಾವಾಗಲೂ ಪರಿಶಿಷ್ಟ ಜಾತಿಯವರಿಗೆ ಏನು ಮಾಡಿದ್ದೀರಿ ಎಂದು ಇಲ್ಲಿ ಕೇಳುತ್ತಿದ್ದೆ. ಅವತ್ತೇ ನಾನು ತಾವು ಇವರ ಅಭಿವೃದ್ಧಿಗಾಗಿ ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಹೇಳಿದ್ದರೆ ತಾವು ಇನ್ನು ಹೆಚ್ಚು ಕೆಲಸ ಮಾಡುತ್ತಿರಲಿಲ್ಲವೆಂದು ಹೇಳಲಿಲ್ಲ. ಆದರೆ ಈವತ್ತು ಹೇಳುತ್ತಿದ್ದೇನೆ. That credit goes to Social Welfare Department also Mr. Krishna Reddy is not a Scheduled Caste man. Eventhen. he has achieved so much for the Sehcduled Caste and we should be greateful to Mr. J.H. Patel. My respectful press people are always smart. ಯಾರು ಮಾತನಾಡಿದರು ನಗುವುದು, They are not partial. They should always be smart. Even some of the senior IAS/IPS Officers ಕೆಲವು ಸಮಯದಲ್ಲಿ ಆ ಅಧಿಕಾರಿಗಳ ಮನಸ್ಸು ನೋವು ಆಗುವ ರೀತಿಯಲ್ಲಿ ಮಾತನಾಡಿರಬಹುದು There are some good officers and some may not be also. If they feel that they are hurt, we feel sorry. Be joyful and I pray that every member should come back again. We should see the face of every one again either this side or that side. I Pray that again my Speaker should be the Speaker. My Speaker always speaks lot, teaches us and guides us. You are not only a Speaker, you are to Teacher also to us. We will always prove loyal to our Master. Given this opportunity, I thank you everybody. Thank you all, thank you very much.

+ ಶ್ರೀ ಸೈಯದ್ ಜುಲ್ಫೀಕರ್ ಹಷ್ಮಿ (ಬೀದರ್) : ಮಾನ್ಯ ಅಧ್ಯಕ್ಷರೆ, ಸಭಾನಾಯಕರೆ ಮತ್ತು ಎಲ್ಲಾ ಸದಸ್ಯರೆ, ನಾನು ಮೊಟ್ಟಮೊದಲ ಬಾರಿಗೆ ಈ ಸದನಕ್ಕೆ ಬಂದಾಗ ತಾವು ಮಾತನಾಡಲು ಅವಕಾಶ ಮಾಡಿ ಕೊಟ್ಟಿದ್ದೀರಿ. ನನಗೆ ಭಾಷೆಯ ತೊಂದರೆ ಇತ್ತು. ಆದರೂ ಈ ಸದನದಲ್ಲಿ ನನಗೆ ಸಾಕಷ್ಟು ಸಲ ಮಾತನಾಡಲು ಅವಕಾಶ ಕೊಟ್ಟಿರುವ ತಮಗೆ ಧನ್ಯವಾದಗಳು. ತಾವು ಬೀದರ್‌ಗೆ ಬರುತ್ತೀರಿ ಎಂದು ನನ್ನಲ್ಲಿ ಆಸೆ ಇತ್ತು. ಹಲವಾರು ಸಲ ನಾನು ತಮ್ಮಿಂದ ಸಮಯವನ್ನು ತೆಗೆದುಕೊಂಡಿದ್ದೆ. ಆದರೆ ತಾವು ಒಂದು ಸಲವು ಬೀದರ್‌ಗೆ ಬರಲಿಲ್ಲ. ಆ ಧಮುಕ ಬಿರಿಯಾನಿ,

ಧಮುಕ ಮುರ್ಗ ಹಾಗೇ ಇದೆ. ತಮಗೆ ಮತ್ತೆ ಯಾವಾಗಲಾದರು ಸಮಯ ಸಿಕ್ಕಿದರೆ ಬೀದರ್‌ಗೆ ಬಂದು ಹೋಗುತ್ತೀರಿ ಎಂಬ ಆಸೆ ಇದೆ. ನಮ್ಮ ರಾಷ್ಟ್ರೀಯ ಅಧ್ಯಕ್ಷರಾದ ಕಾನಿರಾಮ್‌ರವರು ತಮಗೆ ವಿಧಾನಸಭೆಯಲ್ಲಿ ಮಾತನಾಡಲು ಇಷ್ಟು ಅವಕಾಶ ಸಿಗುತ್ತಿದೆಯಲ್ಲ ಎಂದು ಕೇಳಿದ್ದರು. ನಾನು ನಮ್ಮ ಪಕ್ಷದ ಒಂದು ಸಭೆಗೆ ಹೋಗಿರಲಿಲ್ಲ, ನಮ್ಮ ಅಧ್ಯಕ್ಷರು ಏಕೆ ಬರಲಿಲ್ಲವೆಂದು ಕೇಳಿದರು, ಆಗ ನಾನು ನಮ್ಮ ವಿಧಾನ ಸಭೆಯಲ್ಲಿ ಮಾತನಾಡಲು ಅವಕಾಶ ಸಿಕ್ಕಿದೆ ಆದ್ದರಿಂದ ಬರಲಿಲ್ಲ ಎಂದು ಹೇಳಿದೆ. ತಮಗೆ ಮೊದಲಬಾರಿಗೆ ಇಷ್ಟೊಂದು ಮಾತನಾಡಲು ಅವಕಾಶ ಸಿಗುತ್ತಿದೆ ಅದನ್ನು ಸದುಪಯೋಗ ಮಾಡಿಕೊಂಡು ತಾವು ಅಲ್ಲಿ ಮಾತನಾಡಿ ಎಂದು ನಮ್ಮ ರಾಷ್ಟ್ರೀಯ ಅಧ್ಯಕ್ಷರು ಹೇಳಿದರು. ತಮ್ಮ ಸಹಕಾರದಿಂದ ನಾನು ಇಲ್ಲಿ ಸಾಕಷ್ಟು ಸುಲಲಿತವಾಗಿ ಮಾತನಾಡಲು ಅನುಕೂಲವಾಯಿತು. ನಾನು ನನ್ನ ಸ್ವಂತ ಹೋರಾಟದ ಹಿನ್ನೆಲೆಯಿಂದ ಬಹುಜನ ಸಮಾಜ ಪಕ್ಷದ ಪರವಾಗಿ ಆರಿಸಿ ಬಂದಿದ್ದೇನೆ. ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಸಭಾನಾಯಕರಾದ ಮಾನ್ಯ ಜೆ.ಹೆಚ್. ಪಟೇಲ್‌ರವರಿಗೂ ಧನ್ಯವಾದವನ್ನು ಹೇಳುತ್ತೇನೆ. ಏಕೆಂದರೆ, ವಿರೋಧ ಪಕ್ಷದ ಒಬ್ಬ ಶಾಸಕನಾಗಿ ಇದ್ದರೂ ನಾನು ಅಭಿವೃದ್ಧಿ ಕೆಲಸಗಳ ಬಗ್ಗೆ ಕೇಳಿದಾಗ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪಕ್ಷದ ಶಾಸಕರಿಗೆ ಯಾವ ರೀತಿಯಲ್ಲಿ ಸಹಾಯ ಮಾಡಿದ್ದಾರೋ ಅದೇ ರೀತಿಯಲ್ಲಿ ನಮಗೂ ಸಹಾಯ ಮಾಡಿದ್ದಾರೆ. ಅವರನ್ನು ನಾನು ಮೂರು ಸಲ ಭೇಟಿ ಮಾಡಿದ್ದೇನೆ. ಅವರ ಆ ಗುಣಕ್ಕೆ ನನ್ನ ಧನ್ಯವಾದವನ್ನು ಹೇಳುತ್ತೇನೆ. ಜೊತೆಗೆ ಮುಖ್ಯಮಂತ್ರಿಗಳ ಕಾರ್ಯಾಲಯದಲ್ಲಿ ನಮಗೆ ಒಳ್ಳೆಯ ಸಹಕಾರ ಸಿಕ್ಕಿದೆ. ಜನರು ಏನು ಬೇಕಾದರೂ ಹೇಳಬಹುದು.

6.00 ಪಿ.ಎಂ.

ನಾನು ಮಾನ್ಯ ಮುಖ್ಯಮಂತ್ರಿಗಳ ಬಳಿ ಯಾವಾಗಲಾದರೂ ಒಂದು ಸಲ ಹೋಗುತ್ತಿದ್ದೆ. ನಾನು ಜಿಲ್ಲೆಯ ಅಥವಾ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳ ವಿಷಯವಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಸಮಸ್ಯೆಯನ್ನು ನಿವೇದಿಸಿಕೊಂಡಾಗಲೆಲ್ಲಾ ಅವರು ಸಾಕಷ್ಟು ಸಮಯ ತಾವೇ ಖುದ್ದಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಫೋನ್ ಮೂಲಕ ಮಾತನಾಡಿ ನನ್ನ ಕೆಲಸಗಳನ್ನು ಮಾಡಿಸಿಕೊಟ್ಟಿರುತ್ತಾರೆ. ಇದೆಲ್ಲಕ್ಕಿಂತ ನನಗೆ ಬಹಳ ಹೆಮ್ಮೆಯ ವಿಷಯ ಏನೆಂದರೆ, ನಾನು ಓರ್ವ ಸಮಾಜವಾದಿಯ ಊರಿನಲ್ಲಿ ಹುಟ್ಟಿದ್ದೇನೆ. ಇದು ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಗೊತ್ತಿದೆ. ಈಗ ಸಮಾಜವಾದಿಯ ಹೆಸರಿನಲ್ಲಿ ಕೂಡ ಓಟ್ ಬ್ಯಾಂಕ್ ಇದೆ, ಅದು ಹಾಗೆಯೇ ಇರುತ್ತದೆ. ಜನ ಸಮಾಜವಾದಿ ಹೆಸರಿನಲ್ಲಿ ಓಟು ಕೊಡುತ್ತಾರೆ. ನನ್ನ ಹಿರಿಯರು ಮಾನ್ಯ ಮುಖ್ಯಮಂತ್ರಿಗಳ ಜೊತೆ ಗೋವಾ ಹೋರಾಟದಲ್ಲಿ ಭಾಗವಹಿಸಿದ್ದವರು. ಅದೂ ಕೂಡ ನನಗೆ ಬಹಳ ಹೆಮ್ಮೆಯ ವಿಷಯ. ಮಾನ್ಯ ಮುಖ್ಯ ಮಂತ್ರಿಗಳ ಕಾಲದಲ್ಲಿ ಅಲ್ಪಸಂಖ್ಯಾತರಿಗೆ ಏನು ಕೊಡಲಿಲ್ಲವೆಂದರೂ, ತಮ್ಮ ಸಚಿವ ಸಂಪುಟದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಖಾತೆಗೆ ಮೊದಲ ಬಾರಿಗೆ ಕ್ಯಾಬಿನೆಟ್ ದರ್ಜೆ ಸಚಿವರನ್ನು ನೇಮಕ ಮಾಡಿದರು. ಅದಕ್ಕಾಗಿ ಅವರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಈ ದಿಸೆಯಲ್ಲಿ ಸಾಕಷ್ಟು ಕೆಲಸವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಅಲ್ಪಸಂಖ್ಯಾತರಿಗೆ ಹೆಚ್ಚಿನ ರಕ್ಷಣೆ ತಾವು ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಸಿಕ್ಕಿದೆ.

ಎಲ್ಲಕ್ಕಿಂತ ಹೆಚ್ಚಿನ ಈ ಮಹತ್ವದ ಕೆಲಸ ನಿಮ್ಮಿಂದಾಗಿದೆ. ಮತ್ತೆ ಯಾರೇ ಮುಖ್ಯಮಂತ್ರಿಗಳಾಗಿ ಬರಲಿ, ಆ ಬಗ್ಗೆ ಜನ ತೀರ್ಮಾನ ಮಾಡುತ್ತಾರೆ, ತಮ್ಮ ಅಧಿಕಾರದ ಅವಧಿಯಲ್ಲಿ ಯಾವ ರೀತಿಯಲ್ಲಿ ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡಿದ್ದೀರೋ ಅದನ್ನೇ ಅವರೂ ಸಹಾ ಮುಂದುವರೆಸಿಕೊಂಡು ಹೋಗುತ್ತಾರೆ ಎಂಬ ಆಶಯ ನಮ್ಮದಾಗಿದೆ. ಸರ್ಕಾರದ ಪೋಲೀಸ್ ಇಲಾಖೆ ಅಲ್ಪಸಂಖ್ಯಾತರ ರಕ್ಷಣೆಗೆ ವಿಶೇಷವಾಗಿ ಶ್ರಮಿಸಿದೆ. ಅದಕ್ಕಾಗಿ ಆ ಇಲಾಖೆಗೆ ನಾನು ಧನ್ಯವಾದಗಳನ್ನು ಅರ್ಪಿಸಲಿಚ್ಚಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಹೊಸದಾಗಿ ವಕ್ಫ್ ಆಕ್ಟ್ ಅನ್ನು ಜಾರಿಗೆ ತಂದರು. ಆ ಕಾಯ್ದೆ ತರುವ ಬಗ್ಗೆ ಮಾನ್ಯ ಅಜೀಜ್‌ಸೇಟ್‌ರವರ ಕಾಲದಿಂದಲೂ ಚಿಂತನೆ ಇತ್ತು. ತಮ್ಮ ಸಚಿವ ಸಂಪುಟದಲ್ಲಿ ಕಂದಾಯ ಸಚಿವರಾಗಿರುವ ಬಿ. ಸೋಮಶೇಖರ್‌ರವರು ಆ ಒಂದು ಕಾಯ್ದೆಯನ್ನು ಇಲ್ಲಿ ಮಂಡಿಸಿ ಅಂಗೀಕರಿಸುವಂತೆ ಮಾಡಿದ್ದಾರೆ. ಅದಕ್ಕಾಗಿ ನಾನು ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ನನಗೂ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಿಗೂ ಆಗಾಗ್ಗೆ ಜಗಳ ನಡೆಯುತ್ತಿತ್ತು. ನಾನು ಅವರೊಡನೆ ಸುಮ್ಮ ಸುಮ್ಮನೆ ಜಗಳವಾಡುತ್ತಿರಲಿಲ್ಲ. ಮಾನ್ಯ ಬಸವರಾಜ್ ಪಾಟೀಲ್ ಅಟ್ಟೂರ್ ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ನನಗೂ ಅವರಿಗೂ ಒಮ್ಮೆ ಜಗಳವಾಗಿದೆ. ಇದು ಆಗಾಗ್ಗೆ ನಡೆಯುತ್ತಲೇ ಇತ್ತು. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅವರ ವಿರುದ್ಧ ಬಂದು ಹೇಳುತ್ತಿದ್ದೆ. ಅಂತಹ ಸಂದರ್ಭದಲ್ಲೆಲ್ಲಾ ಮಾನ್ಯ ಮುಖ್ಯಮಂತ್ರಿಗಳು ನನಗೆ ಬೇಕಾದಷ್ಟು ಸಲ ಸಹಾಯ ಮಾಡಿದ್ದಾರೆ. ಅದರಿಂದಾಗಿ ನಮ್ಮ ಜಿಲ್ಲೆಯಲ್ಲಿ ಒಂದು ಒಳ್ಳೆಯ ವಾತಾವರಣ ಇರಲು ಸಹಾಯಕವಾಗಿತ್ತು. ನಾನು ಶಾಸಕನಾದ ಮೇಲೆ ನಮ್ಮ ಜಿಲ್ಲೆಯಲ್ಲಿ ಏನೇನು ಆಗುತ್ತದೆಯೋ, ಇವನು ಏನೇನು ಮಾಡುತ್ತಾನೋ ಎಂದು ಜನ ಸುಮ್ಮ ಸುಮ್ಮನೆ ಅನುಮಾನ ವ್ಯಕ್ತಪಡಿಸುತ್ತಿದ್ದರು. ಆದರೆ ಈಗ ನಾನು ಶಾಸಕನಾಗಿ ನಾಲ್ಕೂವರೆ ವರ್ಷವಾಗಿದೆ. ಬೀದರ್ ಜಿಲ್ಲೆಯಲ್ಲಿ ಯಾವ ಕಾಲದಲ್ಲಿಯೂ ಕೋಮು ಗಲಭೆಗಳು ನಡೆಯುತ್ತಿದ್ದವು. ಆದರೆ ನಾನು ಶಾಸಕನಾಗಿದ್ದ ಅವಧಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸಹಕಾರದಿಂದಾಗಿ ನಮ್ಮ ಜಿಲ್ಲೆಯಲ್ಲಿ ಒಂದೂ ಕೂಡ ಕೋಮು ಗಲಭೆ ನಡೆಯಲಿಲ್ಲ, ಅಷ್ಟೇ ಏಕೆ ಇಡೀ ರಾಜ್ಯದಲ್ಲಿಯೂ ಸಹಾ ಅಂತಹ ಯಾವುದೇ ಘಟನೆಗಳು ನಡೆಯಲಿಲ್ಲ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ, ಅವರ ಸಚಿವ ಸಂಪುಟಕ್ಕೆ ವಿಶೇಷವಾಗಿ ಮಾನ್ಯ ನಾಗೇಗೌಡರಿಗೆ ನಾನು ಧನ್ಯವಾದಗಳನ್ನು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿನ ಕಾರಂಜ ಯೋಜನೆಯನ್ನು 2000 ಇಸವಿಯೊಳಗಾಗಿ ಮುಗಿಸುತ್ತೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಅಲ್ಲಿ ಕೆಲಸ ನಡೆಯುತ್ತಿದೆ. ಕೆಲಸ ನಿಗದಿತ ಅವಧಿಯಲ್ಲಿ ಮುಗಿಯುವ ನಿರೀಕ್ಷೆಯೂ ಕೂಡ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಹಿರಿಯ ಸದಸ್ಯರಾದ ಸನ್ಮಾನ್ಯ ವೀರಪ್ಪ ಮೊಯ್ಲಿಯವರಿಗೂ ನಾನು ಧನ್ಯವಾದಗಳನ್ನು ಹೇಳಬಯಸುತ್ತೇನೆ. ಯಾವಾಗಲಾದರೂ ನಾನು ಸದನದಲ್ಲಿ ತಪ್ಪಾಗಿ ಮಾತನಾಡಲು ಹೊರಟಿದ್ದಾಗ ಅವರು ನಮಗೆ ಮಾರ್ಗದರ್ಶನ ನೀಡಿ ಸಹಾಯ ಮಾಡಿದ್ದಾರೆ. ಬಹಳಷ್ಟು ಸಲ ನಾನು ಅವರಿಗೆ ನನ್ನ ಸಮಸ್ಯೆಯನ್ನು ಹೇಳಿ ಅದನ್ನು ಬಗೆಹರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದೇನೆ. ಬಿಜೆಪಿ ಸದಸ್ಯರುಗಳಿಗೆ, ವಿಶೇಷವಾಗಿ ಮಾನ್ಯ ವಾಟಾಳ್‌ನಾಗರಾಜ್‌ರವರಿಗೂ ಕೂಡ ನಾನು ಧನ್ಯವಾದಗಳನ್ನರ್ಪಿಸುತ್ತೇನೆ. ನಾನು ಮೊದಲಿಗೆ ಇಲ್ಲಿಗೆ ಶಾಸಕನಾಗಿ ಬಂದಿದ್ದಾಗ, ನನಗೆ

ಕನ್ನಡ ಮಾತನಾಡಲು ಬರುತ್ತಿರಲಿಲ್ಲ, ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಉರ್ದು ಬರುತ್ತಿರಲಿಲ್ಲ. ಅವರೂ ಕೂಡ ನನಗೆ ಸಾಕಷ್ಟು ಸಮಯ ಸಹಕಾರ ನೀಡಿದ್ದಾರೆ. ಮಾನ್ಯ ಪುಟ್ಟಣ್ಣಯ್ಯನವರಿಗೆ, ಮಾನ್ಯ ಶ್ರೀರಾಮರೆಡ್ಡಿಯವರಿಗೆ, ಎಲ್ಲಾ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರುಗಳಿಗೆ ಹಾಗೂ ವಿಧಾನ ಮಂಡಲದ ಕಾರ್ಯಾಲಯದ ಎಲ್ಲಾ ಅಧಿಕಾರಿ ಮಿತ್ರರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಪತ್ರಕರ್ತರೂ ಕೂಡ ನಮ್ಮ ಪಾರ್ಟಿ ಬಗ್ಗೆ ಬರೆದು ನಮಗೆ ಸಹಾಯ ಮಾಡಿದ್ದಾರೆ. ಅವರಿಗೂ ಕೂಡ ವಂದಿಸುತ್ತೇನೆ. ಕೊನೆಯದಾಗಿ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಸಭಾಧ್ಯಕ್ಷರೇ ಮಾನ್ಯ ಸಭಾ ನಾಯಕರೇ, ಮಾನ್ಯ ವಿರೋಧ ಪಕ್ಷದ ನಾಯಕರೇ, ನಾವು ಕೆಲವು ಶಾಸಕರು ಈ ವಿಧಾನಸಭೆ ಅವಧಿಯಲ್ಲಿ ಮಧ್ಯೆ ಬಂದವರಿದ್ದೇವೆ. ವಿಧಾನ ಸಭೆಯ ಪೂರ್ಣ ಅವಧಿಯನ್ನು ಕಾಣಲು ನನಗೆ ಸಾಧ್ಯವಾಗಲಿಲ್ಲ. ಆದರೆ ತಮ್ಮ ಕಾಲದಲ್ಲಿ ಒಳ್ಳೆಯ ಅಧ್ಯಕ್ಷರನ್ನು ನಾವು ನೋಡಿದ್ದೇವೆ. ಬಹುಶಃ ಹಿಂದಿನ ಬೆಂಚ್‌ನಲ್ಲಿ ಕುಳಿತುಕೊಂಡವರಿಗೆ ಮಾತನಾಡಲಿಕ್ಕೆ ಶಾಸನ ಸಭೆಯಲ್ಲಿ ಅವಕಾಶ ಇದೆ, ಅವರೂ ಕೂಡ ಮಾತನಾಡಬಹುದು ಎಂದೇಳಿ ತಾವು ನಿರೂಪಿಸಿದ್ದೀರಿ. ಬೇರೆ ಶಾಸನ ಸಭೆ ಆಗಿದ್ದರೆ, ಪಕ್ಷಗಳ ಆಧಾರದ ಮೇಲೆ ಏನಾದರೂ ಸಮಯ ನಿಗದಿಯಾಗಿದ್ದರೆ ಬಹುಶಃ ನಾವು ಅನೇಕ ಜನ ಈ ಶಾಸನ ಸಭೆಯಲ್ಲಿ ಮಾತನಾಡಲಿಕ್ಕೆ ಆಗುತ್ತಲೇ ಇರಲಿಲ್ಲ. ಅದು ತಮ್ಮ ದೊಡ್ಡತನ ಎಂದು ನಾನು ಭಾವಿಸಿದ್ದೇನೆ. ಇದರ ಜೊತೆಗೆ ತಾವು ನನ್ನ ಮೇಲೆ ಬಹಳ ಅಕ್ಕರೆ ಇಟ್ಟು ನನ್ನ ಕ್ಷೇತ್ರಕ್ಕೆ ಬಂದು ಒಂದೆರಡು ಒಳ್ಳೆಯ ಮಾತುಗಳನ್ನು ಆಡಿದ್ದೀರಿ. ಅದಕ್ಕಾಗಿ ಕೂಡ ನಾನು ತಮಗೆ ಅಭಾರಿಯಾಗಿದ್ದೇನೆ. ಇನ್ನು ನಾನು ಈ ಸರ್ಕಾರದ ಬಗ್ಗೆ ಒಂದೆರಡು ಮಾತುಗಳನ್ನು ಆಡಬಯಸುತ್ತೇನೆ. ಈ ಸರ್ಕಾರದಲ್ಲಿ ಬಹಳ ಒಳ್ಳೆಯ ಜನ ಮಂತ್ರಿಗಳಾಗಿದ್ದರು. ನಾವೆಲ್ಲರೂ ಈ ರಾಜ್ಯಕ್ಕೆ ಜನತಾದಳ ಸರ್ಕಾರ ಬರಲಿ ಎಂದು ಆಸೆ ಇಟ್ಟುಕೊಂಡಿದ್ದೆವು. ಆದರೆ, ದುರ್ದೈವ, ಈ ಒಳ್ಳೆಯತನವನ್ನು ಅವರು ಸದುಪಯೋಗ ಮಾಡಿಕೊಳ್ಳಲಿಲ್ಲವೆಂದು ನನಗನಿಸಿದೆ. ನಾನು ಇಲ್ಲಿ ನಿಷ್ಪಕ್ಷಪಾತವಾಗಿ ಮಾತನಾಡುತ್ತಿದ್ದೇನೆ. ಈ ಸರ್ಕಾರ ಏನಾದರೂ ತಾನು ಮಾಡಿದ್ದ ಕೆಲಸಗಳನ್ನೇ ಕ್ರಮಬದ್ಧವಾಗಿ ಮಾಡಿದ್ದರೆ, ಮಾಡಿದ್ದ ಕೆಲಸಗಳನ್ನು ಜನಗಳಿಗೆ ತಲುಪಿಸಿದ್ದರೆ, ಜಗಳ ಬಿಟ್ಟು ಅಲ್ಲಲ್ಲೇ ಒಳ್ಳೆಯ ಮಾತುಗಳನ್ನು ಆಡಿದ್ದರೆ, ಬಹುಶಃ ಇನ್ನು ಹತ್ತು ವರ್ಷ ಈ ಪಕ್ಷವನ್ನು ಅಧಿಕಾರದಿಂದ ತೆಗೆಯಲಿಕ್ಕೆ ಯಾರಿಗೂ ಕೂಡ ಆಗುತ್ತಿರಲಿಲ್ಲ ಎಂಬುದು ನನ್ನ ಭಾವನೆಯಾಗಿದೆ. ದುರ್ದೈವವಶಾತ್ ಆ ಕೆಲಸ ಅಷ್ಟೊಂದು ಸಮರ್ಪಕವಾಗಿ ಆಗಲಿಲ್ಲ. ನಮ್ಮ ನಾಯಕರಾದಂತಹ ಮಾನ್ಯ ಜೆ.ಹೆಚ್. ಪಟೇಲರು ತಮ್ಮ ಸಚಿವ ಸಂಪುಟದ ಮಂತ್ರಿಗಳಿಗೆ ಕೊಟ್ಟಷ್ಟು ಸ್ವಾತಂತ್ರ್ಯವನ್ನು ಬೇರೆ ಯಾವುದೇ ಮುಖ್ಯಮಂತ್ರಿ ತಮ್ಮ ಮಂತ್ರಿಗಳಿಗೆ ಕೊಟ್ಟಿದ್ದರು ಎಂಬ ಮಾತನ್ನು ನಾನು ಚರಿತ್ರೆಯಲ್ಲೂ ಕೂಡ ಕೇಳಲಿಲ್ಲ. ಅದನ್ನು ಸದುಪಯೋಗ ಮಾಡಿಕೊಂಡಿದ್ದರೆ ಈ ರಾಜ್ಯಕ್ಕೆ ತುಂಬಾ ಒಳ್ಳೆಯದಾಗುತ್ತಿತ್ತು. ಆದರೂ ಸುಮಾರು ಕೆಲಸಗಳು ಇವರ ಕಾಲದಲ್ಲಿ ಆಗಿದೆ. ಯಾವ ಕೆಲಸಗಳೂ ಕೂಡ ಆಗಿಲ್ಲವೆಂದು ನಾನು ಇಲ್ಲಿ ಭಾಷಣ ಮಾಡುವುದು ತಪ್ಪಾಗುತ್ತದೆ. ಏಕೆಂದರೆ, ನಾನು ಕಂಡ ಮಟ್ಟಿಗೆ ನಬಾರ್ಡ್ ಯೋಜನೆ ಏನಾದರೂ

ಇವತ್ತು ಈ ರಾಜ್ಯಕ್ಕೆ ಬಾರದೇ ಹೋಗಿದ್ದರೆ ರಸ್ತೆಗಳ ಗತಿ ಏನಾಗುತ್ತಿತ್ತು ಎಂದು ನಾವು ಯೋಚನೆ ಮಾಡಬೇಕಾಗುತ್ತದೆ, ಕುಡಿಯುವ ನೀರಿಗಂತೂ ಈ ಸರ್ಕಾರದವರು ಹೇರಳವಾಗಿ ದುಡ್ಡು ಕೊಟ್ಟಿದ್ದಾರೆ. ಸುಮಾರು ಕೆಲಸಗಳನ್ನು ಈ ಸರ್ಕಾರ ಯಥೇಚ್ಛವಾಗಿ ಮಾಡಿದೆ. ಆದರೆ ಇವರಿಗೆ ಏನಾಯಿತೋ ಏನೋ, ಇವರಿಗೆ ಇವರಿವರ ವ್ಯಾಜ್ಯವನ್ನು ಪೇಪರ್‌ನಲ್ಲಿ ಹಾಕಿಸಿಕೊಳ್ಳುವುದನ್ನು ಬಿಟ್ಟರೆ ಮಾಡಿದ್ದ ಕೆಲಸಗಳನ್ನು ಹೇಳಿಕೊಂಡು ಬರಬೇಕು, ಮತ್ತೆ ಎಲೆಕ್ಷನ್‌ನಲ್ಲಿ ಗೆಲ್ಲಬೇಕು, ಮತ್ತೆ ನಾವು ಇಲ್ಲಿಗೆ ವಾಪಸ್ ಬರಬೇಕು ಎಂಬ ಜಿದ್ದು ಇವರಿಗೆ ಬರಲಿಲ್ಲ. ಆ ರೋಷ ಇವರಿಗೆ ಬರಲಿಲ್ಲ. ನಾಳೆ ಇಲ್ಲಿ ಇನ್ಯಾರು ಬರುತ್ತಾರೋ, ನಾವು ಇನ್ಯಾವ ಕಾಲ ಕಾಣುತ್ತೇವೆಯೋ ಎಂದು ನನಗೆ ನೋವಾಗುತ್ತಿದೆ. ಇವರಾಗಿ ಇವರೇ ಸುಮ್ಮ ಸುಮ್ಮನೆ ಹೋಗುತ್ತಿದ್ದಾರೆ ಎಂದು ನನಗೆ ಒಂದು ರೀತಿಯಲ್ಲಿ ಮರುಕವಾಗುತ್ತಿದೆ. ಹಾಗೆಂದು ನಾನೇನು ಈಗ ಆ ಪಕ್ಷಕ್ಕೆ ಸೇರಲಿಕ್ಕೆ ಹೊರಟಿಲ್ಲ. ಆದರೆ ವಾಸ್ತವವಾಗಿ ಚೆನ್ನಾಗಿ ಆಗಬಹುದಾಗಿದ್ದನ್ನು ಏಕೋ ಅವರಾಗಿ ಅವರೇ ಸ್ವಲ್ಪ ಕಡಿಮೆ ಮಾಡಿಕೊಂಡಿದ್ದಾರೆ. ಅವರ ಒಳಗಡೆ ವ್ಯವಹಾರ ಏನು ಇದೆಯೋ ಏನೋ, ಅದು ನನಗೆ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನಮ್ಮನ್ನೆಲ್ಲಾ ಬಹುಶಃ ಬಹಳ ಚೆನ್ನಾಗಿ ಕಂಡಿದ್ದಾರೆ. ಅವರು, ಅವರ ಕಛೇರಿ, ತಾವು, ತಮ್ಮ ಕಛೇರಿ ಮತ್ತು ಎಲ್ಲಾ ಸದಸ್ಯರು ನಮಗೆ ಸಹಕರಿಸಿದ್ದಾರೆ. ನಾನು ವಿಧಾನಸಭಾ ಅವಧಿಯ ಮಧ್ಯದಲ್ಲಿ ಚುನಾಯಿತನಾಗಿ ಇಲ್ಲಿಗೆ ಬಂದಾಗ, ನಾನು ಹೇಗೆ ಇಲ್ಲಿ ಮಾತನಾಡುವುದು? ನನಗೆ ಇಲ್ಲಿ ಏನು ಹಿಂದೆ ನಡೆದಿದೆ ಎಂಬುದೇನೂ ನನಗೆ ಗೊತ್ತಿಲ್ಲವಲ್ಲ ಎಂದು ಅನಿಸಿತ್ತು. ಆದರೆ, ನಾನು ಇಲ್ಲಿ ಮಾಹಿತಿ ಇಲ್ಲದೇ ಎದ್ದು ನಿಂತುಕೊಂಡು ಮಾತನಾಡುವಂತಹ ಕಾಲದಲ್ಲಿ ಅನೇಕ ಜನ ನನಗೆ ನೀವು ಚೆನ್ನಾಗಿ ಮಾತನಾಡುತ್ತೀರಿ, ಮಾತನಾಡುವುದು ಮುಂದುವರೆಸಿ ಎಂದೇಳಿ ನನಗೆ ಹುರಿದುಂಬಿಸಿದ್ದಾರೆ. ತಾವೂ ಕೂಡ ಹೇಳಿದ್ದೀರಿ, ಕಾಗದದಲ್ಲಿ ಬರೆದು ಕಳುಹಿಸಿದ್ದೀರಿ. ನಿಮಗೆಲ್ಲರಿಗೂ ನಾನು ಅಭಾರಿಯಾಗಿದ್ದೇನೆ, ಎಂದು ಹೇಳಬಯಸುತ್ತೇನೆ. ಇದೊಂದು ಸ್ನೇಹಪರವಾದ ಶಾಸನ ಸಭೆ ಆಗಿತ್ತು. ನಾನೂ ಕೂಡ ಮಾನ್ಯ ಹಶ್ಮಿಯವರು ಹೇಳಿದಂತೆ, ಇಲ್ಲಿರುವ ಎಲ್ಲರೂ ಕೂಡ ಮತ್ತೆ ಪುನಃ ಚುನಾಯಿತರಾಗಿ ವಾಪಸ್ ಬರಬೇಕು, ಎಲ್ಲಾ ಗೆಳೆಯರಂತೆಯೇ ಇರಬೇಕು ಎಂದು ಭಗವಂತನಲ್ಲಿ ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀಮತಿ ಬಿ.ಟಿ. ಲಲಿತಾ ನಾಯಕ್ (ದೇವದುರ್ಗ) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾ ನಾಯಕರೇ, ಹಾಗೂ ಎಲ್ಲಾ ಮಾನ್ಯ ಸದಸ್ಯರೇ, ನನಗೆ ಇದೊಂದು ವಿಶ್ವವಿದ್ಯಾನಿಲಯದ ತರಹ ಆಯಿತು ಎಂದು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇಲ್ಲಿ ನಮ್ಮಂತಹ ಮಹಿಳೆಯರು, ಅದರಲ್ಲೂ ಅತ್ಯಂತ ಹಿಂದುಳಿದ ಗ್ರಾಮಾಂತರ ಪ್ರದೇಶದಿಂದ ಬಂದಂತಹ ಮಹಿಳೆಯರು ಯಾವ ರೀತಿಯಾಗಿ ನಾವು ಇಲ್ಲಿ ನಿಭಾಯಿಸುತ್ತೇವೆ ಎನ್ನುವಂಥ ಒಂದು ಆತಂಕ ನಮಗೆ ಇತ್ತು. ಆದರೆ ಇಲ್ಲಿ ಒಳ್ಳೆಯ ವಾತಾವರಣ ಮತ್ತು ಬಹಳಷ್ಟು ತಿಳುವಳಿಕೆ ಇರುವಂತಹ, ನನಗಿಂತ ಚಿಕ್ಕವರು ಮತ್ತು ಹಿರಿಯರು, ಎಲ್ಲರೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ಅವರು ತಮ್ಮ ಪರಿಣಿತಿಯನ್ನು ತೋರಿಸಿದಾಗ, ನನಗಂತೂ ಬಹಳ ಆಶ್ಚರ್ಯವಾಯಿತು. ನಾವು ಏನೇನೂ ಇಲ್ಲ, ಮಹಿಳೆಯರಿಗೆ ಆ ಸ್ಥಾನ ಬೇಕು, ಈ ಸ್ಥಾನ ಬೇಕು ಎಂದು ನಾವು ಹೇಳುತ್ತೇವೆ ಆದರೆ ನಾವು ಏನು ಕಲಿತಿದ್ದೇವೆ, ನಾವು ಏನು

ಸಾಧಿಸಿದ್ದೇವೆ? ಎಂದು ನಮ್ಮ ಆತ್ಮ ವಿಮರ್ಶೆ ಮಾಡಿಕೊಳ್ಳುವಂತಹ ಸಂದರ್ಭಗಳೇ ನನಗೆ ಬಹಳಷ್ಟು ಬಂದಿತು. ಇಲ್ಲಿ ಬಹಳಷ್ಟು ವಿಚಾರಗಳಲ್ಲಿ ತಿಳಿದವರಿದ್ದಾರೆ. ಮೊದಲಿಗೆ ಈ ಮಾತನ್ನು ಮಾನ್ಯ ಅಧ್ಯಕ್ಷರಿಗೆ ಅನ್ವಯಿಸಿ ಹೇಳಬಹುದು. ಈಗ ಮಾತನಾಡಿದ ಎಲ್ಲ ಮಾನ್ಯ ಸದಸ್ಯರೂ ಮಾನ್ಯ ಅಧ್ಯಕ್ಷರನ್ನು ಮುಕ್ತ ಕಂಠದಿಂದ ಹೊಗಳಿದರು, ಅವರ ಪೈಕಿ ನಾನೂ ಕೂಡ ಒಬ್ಬಳು ಎಂದು ಹೇಳಬಯಸುತ್ತೇನೆ. ಯಾವ ಮಾತನ್ನು ಸಾವಿರ ಮಾತುಗಳಲ್ಲಿ ಹೇಳಬಹುದೋ ಅದನ್ನು ತಾವು ಒಂದೇ ಒಂದು ಶಬ್ಧದಲ್ಲಿ, ಅಥವಾ ಒಂದೇ ಒಂದು ಸಾಂಕೇತಿಕ ಚಿಹ್ನೆಯಿಂದ, ಕೈಯಿಂದಲೋ ಬಾಯಿಯಿಂದಲೋ, ಕಣ್ಣಿನಿಂದಲೋ ಮಾನ್ಯ ಸದಸ್ಯರುಗಳಿಗೆ ತಾವು ಹೇಳುವ ಧಾಟಿ ಇದೆಯಲ್ಲಾ, ಅದರಿಂದ ನಿಜವಾಗಿ ನಾನು ಪ್ರಭಾವಿತಳಾಗಿದ್ದೇನೆ. ಮನುಷ್ಯನಿಗೆ ಮಾತೇ ಮುಖ್ಯವಲ್ಲ. ತಲೆಯಲ್ಲಿ ಮಿದುಳು ಒಂದು ಇದ್ದರೆ, ಬುದ್ಧಿ ಒಂದು ಇದ್ದರೆ, ಒಳ್ಳೆಯ ರೀತಿಯಲ್ಲಿ ಬಹಳ ಕಡಿಮೆ ಮಾತಿನಲ್ಲಿ ಇನ್ನೊಬ್ಬರಿಗೆ ಹೇಳಿ ಕೊಡುವುದಕ್ಕೆ, ತಿಳಿಸುವುದಕ್ಕೆ ಸಮರ್ಥರಾಗುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಮುಖ್ಯಮಂತ್ರಿಗಳು ಗಣೇಶನ ತರಹ, ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿದ್ದರು ಶಣ್ಮುಖನ ತರಹ. ಏಕೆಂದರೆ ಅವರು ಬಹಳ ಕಷ್ಟ ಪಡುತ್ತಿದ್ದರು. ಒಂದು ಸಾರಿ ಈಶ್ವರ ಪಾರ್ವತಿ ಒಂದು ಮಾವಿನ ಹಣ್ಣು ತೆಗೆದುಕೊಂಡು ಇದು ನಿಮಗೆ ಬೇಕಾ ಎಂದು ಕೇಳಿದಾಗ ಇಬ್ಬರೂ ಬೇಕೆಂದು ಹೇಳಿದಾಗ ಯಾರು ಭೂಮಿ ಸುತ್ತಿ ಬೇಗ ಬರುತ್ತೀರಿ ಅವರಿಗೆ ಈ ಮಾವಿನ ಹಣ್ಣು ಕೊಡುತ್ತೇವೆ ಎಂದು ಹೇಳಿದ್ದರಿಂದ, ಆಗ ಶಣ್ಮುಖ ಇಡೀ ಭೂ ಮಂಡಲವನ್ನೂ ಸುತ್ತಿಕೊಂಡು ಬಂದು ಮಾವಿನ ಹಣ್ಣು ಕೇಳಿದ, ಆದರೆ ಈ ಗಣೇಶ ಅಷ್ಟರಲ್ಲೇ ತಂದೆ ತಾಯಿ ಇಬ್ಬರಿಗೂ ಮೂರು ಸುತ್ತು ಹಾಕಿ ಈ ಭೂಮಿ ಎಂದರೆ ತಂದೆ ತಾಯಿ ಆದ್ದರಿಂದ ನನಗೆ ಮಾವಿನ ಹಣ್ಣು ಬೇಕೆಂದು ಹೇಳಿದ. ಆದ್ದರಿಂದ ಎಲ್ಲರೂ ಗಣೇಶನನ್ನು ಇಷ್ಟಪಡುತ್ತಾರೆ. ಚಾಣಾಕ್ಷತನಕ್ಕೆ ಹೆಚ್ಚು ಬೆಲೆ, ಶ್ರಮಕ್ಕೆ ಕಡಿಮೆ ಬೆಲೆ ಇದೆ ಎನ್ನುವ ಮಾತಿಗೆ ನಾನು ಇದನ್ನು ಹೇಳುತ್ತಿದ್ದೇನೆ. ಮುಖ್ಯಮಂತ್ರಿಯವರು ಇವತ್ತಿನವರೆಗೆ ಏನೇನು ಮಾತನಾಡಿದ್ದಾರೆ, ಅಂತಹ ಒಂದು ರಸವತ್ತಾದ ಘಟನೆಗಳ ಒಂದು ಪುಸ್ತಕ ಬರೆಯಬೇಕೆಂದು ಎಲ್ಲ ನೋಟ್ ಮಾಡಿಕೊಂಡಿದ್ದೇನೆ. 1986ನೇ ಇಸವಿಯಲ್ಲಿ ನಾನು ಎಂಎಲ್‌ಸಿ ಇದ್ದಾಗ ಶ್ರೀ ರಾಮಕೃಷ್ಣ ಹೆಗಡೆಯವರು ಆಗಿನ ಮುಖ್ಯಮಂತ್ರಿಗಳಾಗಿದ್ದರು. ಮಾನ್ಯ ದೇವೇಗೌಡರು, ನಜೀರ್ ಸಾಬ್‌ರವರು ಎಲ್ಲರೂ ಸೇರಿ ನನ್ನನ್ನು ವಿಧಾನ ಪರಿಷತ್ತಿನ ಸದಸ್ಯೆಯಾಗಿ ಮಾಡಿದರು. ಅವರಿಗೆ ನಾನು ನಿಜವಾಗಿ ಋಣಿಯಾಗುತ್ತಾ, ಈಗಿನವರು ಎಲ್ಲರಿಗೂ ನಾನು ಋಣಿಯಾಗಿದ್ದೇನೆ. ಮಾನ್ಯ ಜೆ.ಹೆಚ್.ಪಟೇಲರು ಕಂದಾಯ ಮಂತ್ರಿಗಳಿದ್ದರು, ಮಾನ್ಯ ನರಸಿಂಹಮೂರ್ತಿಯವರು ವಿರೋಧ ಪಕ್ಷದ ನಾಯಕರಾಗಿದ್ದರು, ನಾವೇನು ಇಲ್ಲಿ ದನ ಕಾಯುವುದಕ್ಕೆ ಬಂದಿದ್ದೇವಾ ಎಂದು ಅವರು ಹೇಳಿದಾಗ ಮಾನ್ಯ ಪಟೇಲರು ತಕ್ಷಣ ಎದ್ದು ನಿಂತು ನಮಗೂ ಆ ಅನುಮಾನ ಎಂದು ಹೇಳಿದರು. ಈ ರೀತಿ ಅವರು ಹೇಳಿದಂತಹ ಮಾತು, ಇಬ್ಬರು ರೋಗಿಷ್ಟರನ್ನು ತಂದು ಒಬ್ಬ ಜಟ್ಟಿ ಮಾಡುವುದಕ್ಕಾಗುವುದಿಲ್ಲ ಎನ್ನುವ ಮಾತು, ಅಖಾಡದಲ್ಲಿ ಕುಸ್ತಿ ಆಡಬೇಕು ಬಚ್ಚಲ ಮನೆಯಲ್ಲಿ ಅಲ್ಲ, ಇಂತಹ ಮಾತುಗಳು ಸಹಜವಾಗಿ ಅವರ ಬಾಯಿಯಲ್ಲಿ ಬಂದರೂ ಕೂಡ ಎಷ್ಟೊಂದು ಅರ್ಥಪೂರ್ಣ, ಎಷ್ಟೊಂದು ಮನಸ್ಸಿಗೆ ಮುದಕೊಡುವಂಥದ್ದು ಮತ್ತು ಆಲೋಚನೆಗೆ ಹಚ್ಚುವಂಥದ್ದು ಎನ್ನತಕ್ಕಂಥದ್ದು ಕೂಡ ನಾನು ಗಮನಿಸಿದ್ದೇನೆ. ಮಂತ್ರಿಗಳಿಗೆ ಸ್ವಾತಂತ್ರ್ಯ

ಕೊಟ್ಟಿರು ಎನ್ನುವುದು ನಿಜ. ಎಷ್ಟೊಂದು ಕೆಲಸ ಮಾಡಿದಿವಿ ಎಂದು ನಾವು ಅಂದುಕೊಳ್ಳುತ್ತೇವೆ, ಅದು ಮುಟ್ಟಿಲ್ಲವೆಂದು ನನಗೆ ಅನ್ನಿಸುವುದಿಲ್ಲ, ಜನರ ಮನಸ್ಸಿನಲ್ಲಿದೆ. ಆದರೆ ಏನೋ ಪತ್ರಿಕೆಗಳಲ್ಲಿ ಬರುವುದರಿಂದ ಆ ತರಹ ಅನ್ನಿಸಿದೆ ಹೊರತು ಈ ಜನತಾದಳದಲ್ಲಿ ಆದಷ್ಟು ಮನೆಗಳಾಗಲಿ, ರಸ್ತೆಗಳಾಗಲಿ, ಕುಡಿಯುವ ನೀರಿನ ವ್ಯವಸ್ಥೆಯಾಗಲಿ, ಕೃಷ್ಣ ಮೇಲ್ದಂಡೆ ಇವೆಲ್ಲಕ್ಕೆ ಆ ಕಡೆ ಜನ ತುಂಬ ಅಭಿಮಾನ ಪಡುತ್ತಾರೆ. ಹೀಗೆ ಈ ಸರ್ಕಾರದಲ್ಲಿ ಕೆಲಸವಾಗಿದೆ. ಮಾನ್ಯ ಖರ್ಗೆಯವರಿಂದ ನಾನು ಸಾಕಷ್ಟು ಕಲಿತಿದ್ದೇನೆ. ಒಬ್ಬ ವಿರೋಧ ಪಕ್ಷದ ನಾಯಕರಾಗಿ ಸಂಯಮದಿಂದ ವರ್ತಿಸಬೇಕು, ಯಾವ ಯಾವ ವಿಷಯವನ್ನು ಚರ್ಚೆ ಮಾಡಬೇಕು. ಮೊಯಿಲಿಯವರೂ ಹಾಗೆ, ಯಾವ ವಿಷಯವನ್ನು ಹೇಗೆ ತೆಗೆದುಕೊಳ್ಳುತ್ತಾರೆ, ಯಾವ ರೀತಿಯಾಗಿ ಪ್ರತಿಪಾದಿಸುತ್ತಾರೆ, ಆ ಮಾತಿನಲ್ಲಿ ಎಷ್ಟು ಹಿಡಿತ ಇರುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ವಾಟಾಳ್ ನಾಗರಾಜ್‌ರವರು ಕನ್ನಡದ ಬಗ್ಗೆ ಹೋರಾಟ ಮಾಡುವುದು ನಮಗೆ ಸ್ಫೂರ್ತಿ ದೊರೆತ ಹಾಗೆ. ಅವರಿಗೆ ಎಷ್ಟೊಂದು ಉತ್ಸಾಹ, ಎಷ್ಟೊಂದು ತಿಳುವಳಿಕೆ, ಅವರಿಗೆ ಮರೆವು ಎನ್ನುವುದೇ ಇಲ್ಲ. ನಿಜವಾಗಿ ಅದ್ಭುತವಾದ ವ್ಯಕ್ತಿ ವಾಟಾಳ್ ನಾಗರಾಜ್‌ರವರು ಅವರ ಜೊತೆ ಹೋಲಿಸಿದರೆ ಹಶ್ಮಿಯವರು ಮತ್ತು ರಾಜೇಂದ್ರನ್‌ರವರ ಕನ್ನಡ ಕೂಡ ಸರಿದೂಗುತ್ತದೆ. ಕನ್ನಡ ಕಲಿತು ಕನ್ನಡದಲ್ಲಿ ಮಾತನಾಡುವುದನ್ನು ನಾನು ಗಮನಿಸುತ್ತೇನೆ. ಅವರು ಏನು ಹೇಳಬೇಕೆಂದರು, ಕನ್ನಡದಲ್ಲಿ ಹೇಳುವುದಕ್ಕೆ ತೋರಿಸುವಂಥ ಹುರುಪು ಉತ್ಸಾಹದಿಂದ ಆಡಳಿತದಲ್ಲಿ ಕನ್ನಡ ಬರುತ್ತಿದೆ, ಕನ್ನಡದ ಬಗ್ಗೆ ಎಲ್ಲರಿಗೂ ಅಭಿಮಾನ ಇದೆ ಎಂದು ಅದು ತೋರಿಸುತ್ತದೆ. ವಿರೋಧ ಪಕ್ಷದಲ್ಲಿರುವಂತಹ ಕೆಲವರು, ಮಾಧುಸ್ವಾಮಿಯವರು, ಬಸವರಾಜ್‌ರವರು ಬಹಳಷ್ಟು ಜನ ಎಷ್ಟು ಉತ್ತಮ ರೀತಿಯಲ್ಲಿ ತಮ್ಮ ವಿಷಯವನ್ನು ಪ್ರತಿಪಾದಿಸುತ್ತಾರೆ ಎನ್ನುವುದು ಕೂಡ ಈ ಸಭೆ ಗಮನಿಸುವಂತಹ ವಿಚಾರ. ನನ್ನ ಈ ಐದು ವರ್ಷಗಳಲ್ಲಿ ನಾನು ಶಾಸಕಿಯಾಗಿ ಮಂತ್ರಿಯಾಗಿ, ಮಂತ್ರಿಯಿಂದ ಇಳಿದು ಮತ್ತೆ ಶಾಸಕಿಯಾದೆ ಅನೇಕ ಸಮಿತಿಯ ಸದಸ್ಯೆಯಾದೆ, ಅಧ್ಯಕ್ಷೆಯಾದೆ, ಎಲ್ಲ ರೀತಿಯ ಅನುಭವವೂ ದಕ್ಕಿದೆ ಎನ್ನುವ ಸಂತೋಷ ನನಗೆ ದೊರಕಿದೆ. ಒಂದೇ ಸಾರಿ ನಾನು ಮಂತ್ರಿಯಾದಾಗ ಶಾಸಕಿಯಾಗಿ ಏನು ಮಾಡಬೇಕೆಂದು ಗೊತ್ತಿರಲಿಲ್ಲ. ಒಂದು ವರ್ಷ ಮೊದಲು ಮಂತ್ರಿಯಾಗಿ ನಂತರ ಶಾಸಕಿಯಾಗಿ ನಾನು ಕೆಲಸ ಮಾಡಿದೆ. ಇದು ನನ್ನ ಕ್ಷೇತ್ರದಲ್ಲಿ ಏನು ಮಾಡಬೇಕೆನ್ನುವುದನ್ನು ಇವತ್ತಿನವರೆಗೂ ನಾನು ಅರ್ಥ ಮಾಡಿಕೊಳ್ಳುತ್ತಿದ್ದೇನೆ. ಬರೀ ನೀರು ದೀಪ ಕೊಡುವುದು ಅಷ್ಟೇ ಅಲ್ಲ, ಶಾಸಕರ ಕೆಲಸ ಬಹಳಷ್ಟು ಇರುತ್ತದೆ. ಅಲ್ಲಿಯ ತುಳಿತಕ್ಕೆ ಒಳಗಾದ ಜನಾಂಗದಲ್ಲಿ ಹುಮ್ಮಸ್ಸು ತುಂಬುವಂತಹ ಆತ್ಮಸ್ಥೈರ್ಯ ತುಂಬುವಂತಹ ಕೆಲಸ ಮಹಿಳೆಯರು ಕೀಳಲ್ಲ, ನಿಮಗೂ ಕೂಡ ಸ್ವಾಭಿಮಾನ ಗೌರವ ಇದೆ ಎಂದು ಹೇಳುವಂತಹ ಕೆಲಸವನ್ನು ಶಾಸಕರು ಮಾಡಬೇಕೆಂದು ನನಗನ್ನಿಸುತ್ತದೆ. ನನ್ನ ಕೈಯಲ್ಲಿ ಆದಷ್ಟು ನಾನು ಮಾಡುತ್ತಿದ್ದೇನೆ. ಅದನ್ನು ಜನಗಳು ಗುರುತಿಸಬಹುದು, ಗುರುತಿಸದೆ ಇರಬಹುದು, ಮುಂದೆ ನಾವು ಬರಬಹುದು, ಬಿಡಬಹುದು, ಆದರೆ ನಮಗೆ ಒಂದು ಆತ್ಮ ಸಂತೋಷ ಇರಬೇಕು. ನಾನು ಒಬ್ಬ ಶಾಸಕಿಯಾಗಿ ನನ್ನ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನಾ ಎಂದು ಗುರುತಿಸಬೇಕು ಅಂಥಹ ಸಂದರ್ಭ ಬಂದಾಗಲೆಲ್ಲಾ ಪರವಾಗಿಲ್ಲ ನಾನು ಸ್ವಲ್ಪಮಟ್ಟಿಗೆ ಕೆಲಸ ಮಾಡಿದ್ದೇನೆ ಎಂದು ನನಗನ್ನಿಸುತ್ತದೆ. ಮುಂದೆ ಅವಕಾಶ ಇದ್ದರೆ

ನಾನು ಏನೇನು ಕನಸು ಕಂಡಿದ್ದೇನೆ. ಅಂತಹ ಕನಸನ್ನು ನನ್ನ ಕ್ಷೇತ್ರದಲ್ಲಿ ನನಸು ಮಾಡುವುದಕ್ಕೆ ಸಾಧ್ಯ ಇದೆ ಎಂದು ಭಾವಿಸಿದ್ದೇನೆ. ಮಾನ್ಯ ಶ್ರೀರಾಮರೆಡ್ಡಿಯವರಿಗೆ ಮತ್ತು ಪುಟ್ಟಣ್ಣಯ್ಯನವರಿಗೆ ಮರೆಯುವುದಕ್ಕಾಗುವುದಿಲ್ಲ. ಬಹುಶಃ ನಾನು ಮುಂದೆ ಏನಾದರೂ ಬರೆದರೆ ಆ ವಿಷಯ ಏನಾದರೂ ಬರೆದರೆ ಹಲವಾರು ರೀತಿಯ ವ್ಯಕ್ತಿಗಳನ್ನು ನಾನು ಅದರಲ್ಲಿ ಸೇರಿಸಬೇಕೆಂದು ಇದ್ದೇನೆ. ಶ್ರೀ ವಸಂತ ಬಂಗೇರರವರಿಂದ ಕಲಿಯುವುದು ಬಹಳ ಇದೆ. ಯಾವ ಹೊತ್ತಿನಲ್ಲಿ ದರ್ಪ ತೋರಿಸಬೇಕು, ಯಾವ ಹೊತ್ತಿನಲ್ಲಿ ಹೇಗಿರಬೇಕು, ಇಲ್ಲಿ ಬಂದು ಎಲ್ಲರಿಗೂ ಹೇಳಿ ಸಮಾಧಾನ ಪಡಿಸುವುದು, ರಾಜಣ್ಣನವರ ಭಾಷಣ ಯಾವ ರೀತಿಯೆಂದು ಹೇಳುವುದಕ್ಕಾಗುವುದಿಲ್ಲ. ಹೀಗೆ ಒಬ್ಬರಿಗೆ ಒಬ್ಬರು ಸರಿಸಮಾನವಾಗಿ ತಮ್ಮದೇ ಆದ ವೈಶಿಷ್ಟ್ಯವನ್ನು ಮೆರೆಸಿದ ಹಲವಾರು ವೈಶಿಷ್ಟ್ಯಪೂರ್ಣ ವ್ಯಕ್ತಿಗಳು ಇಲ್ಲಿದ್ದಾರೆ. ನಮ್ಮ ಮಹಿಳಾ ಸೋದರಿಯರು ಸಾಕಷ್ಟು ಸಹಕಾರ ಕೊಟ್ಟಿದ್ದಾರೆ. ಶ್ರೀಮತಿ ಪ್ರಮೀಳಾ ನೇಸರ್ಗಿಯವರು ವಿಶಿಷ್ಟವಾದ ವ್ಯಕ್ತಿತ್ವದಲ್ಲಿರುವಂತಹವರಾಗಿದ್ದಾರೆ. ಯಾರೇ ಕಾನೂನು ಬಲ್ಲಂತಹ ಪುರುಷರಿಗೆ ಸರಿಸಮಾನವಾದ ಸ್ಥಾನವನ್ನು ಪಡೆದು ಮಹಿಳೆಯರಿಗೆ ಗೌರವ ತಂದುಕೊಟ್ಟ ಮಹಿಳೆ ಎಂದು ನಾನು ಭಾವಿಸಿದ್ದೇನೆ. ಹೀಗೆ ಹಲವಾರು ನನ್ನ ಸೋದರಿಯರು ಹಲವು ವಿಧದಲ್ಲಿ ತಮ್ಮ ವೈಶಿಷ್ಟ್ಯವನ್ನು ಮೆರೆದಿದ್ದಾರೆ. ಹಿಂದೆ ಮುಂದೆ ಏನೂ ಇಲ್ಲದೆ ಮುಕ್ತವಾಗಿ ಯಾವುದೇ ವಿರೋಧ ಇಲ್ಲದೆ, ಎಲ್ಲರೂ ಮೆಚ್ಚುವಂತಹ ಕೆಲಸವನ್ನು ನಾವು ಮಾಡುತ್ತೇವೆ. ನಿಮ್ಮಿಂದ ನಾವು ಬಹಳಷ್ಟು ತಿಳಿದುಕೊಳ್ಳಬೇಕಾಗಿದೆ. ಅರ್ಥ ಮಾಡಿಕೊಳ್ಳಬೇಕಾಗಿದೆ ಎನ್ನುವ ಮಾತನ್ನು ಹೇಳಿ ನನಗೆ ಈ ಸಂದರ್ಭದಲ್ಲಿ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ಈ ಕರ್ನಾಟಕದ ಐದು ಕೋಟಿ ಜನತೆಗೂ ನನ್ನ ಕ್ಷೇತ್ರದ ಜನತೆಗೂ ಈ ಸಂದರ್ಭದಲ್ಲಿ ಹಾರ್ದಿಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

+ಕೆ.ಎನ್. ನಾಗೇಗೌಡ (ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ತಾವು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತಾ, ಮಾನ್ಯ ವಿರೋಧ ಪಕ್ಷದ ನಾಯಕರು, ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಹಾಗೂ ಹಿರಿಯ ಸದಸ್ಯರು ಅತ್ಯಂತ ಮಹತ್ವದ ಮಾತುಗಳನ್ನಾಡಿದ್ದಾರೆ. ಕರ್ನಾಟಕ ರಾಜ್ಯದ ವಿಧಾನ ಮಂಡಲಕ್ಕೆ ಎಂಭತ್ತೈದು ವರ್ಷಗಳಿಗಿಂತ ಹೆಚ್ಚು ಪರಂಪರೆ ಇದೆ. ಪಾರ್ಲಿಮೆಂಟ್ ಪ್ರಜಾಸತ್ತೆ ಒಳಗಡೆ ಹೈಯೆಸ್ಟ್ ಬಾಡಿ, ಆದರೆ ರಾಜ್ಯ ಸರ್ಕಾರಗಳ ಪೈಕಿ ಕರ್ನಾಟಕ ರಾಜ್ಯದ ಅಸೆಂಬ್ಲಿ, ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರತಿಬಿಂಬಿಸಿದಂತೆ ಒಂದು ಇತಿಹಾಸವನ್ನು, ದಾಖಲೆಯನ್ನು ವಿಧಾನಸೌಧ ಹೇಗೆ ಪಡೆದಿದೆ ಹಾಗೆ ಪ್ರೋಸೀಡಿಂಗ್ಸ್ ಕೂಡ ಪಡೆದಿದೆ. ನಾನು ಅನೇಕ ಸಮಿತಿಗಳಲ್ಲಿ ಕೆಲಸ ಮಾಡಿದ್ದೇನೆ, ಬೇರೆ ರಾಜ್ಯಗಳಿಗೆ ಹೋದರೆ ನಮ್ಮ ವಿಧಾನ ಮಂಡಲದ ಸದನದ ಕಲಾಪಗಳನ್ನು, ನಿಯಮಾವಳಿಗಳನ್ನು ಅತ್ಯಂತ ಪ್ರಶಂಸಿಸಿದ ರಾಜ್ಯಗಳನ್ನು ನಾವು ಕಂಡಿದ್ದೇವೆ. ಅಂತಹ ಒಂದು ಪರಂಪರೆ ಇರತಕ್ಕಂತಹ ಈ ಸದನದಲ್ಲಿ ನಾಲ್ಕು ವರ್ಷ ಎಂಟು ತಿಂಗಳ ಕಾಲ ವಿಶೇಷವಾಗಿ ವಿರೋಧ ಪಕ್ಷದ ಸದಸ್ಯರು ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಬರೀ ಪ್ರತಿಭಟನೆಗಿಂತ ನಮ್ಮ ಸರ್ಕಾರವನ್ನು ಎಷ್ಟರಮಟ್ಟಿಗೆ ತಿದ್ದಬಹುದು ಅಷ್ಟರಮಟ್ಟಿಗೆ ತಿದ್ದಿದ್ದಾರೆ. ನಮಗೆ ಅವರು ಕಲಿಸಿರತಕ್ಕಂಥದ್ದು ಏನೆಂದರೆ, ಪೊಲಿಟಿಕಲ್ ಕಲ್ಚರ್ ಕಲಿಸಲಿಲ್ಲ, ವರ್ಕ್ ಕಲ್ಚರ್ ಕಲಿಸಿದ್ದಾರೆ.

ರಾಜಕಾರಣದ ಪರಂಪರೆಯನ್ನು ಆಡಳಿತದಲ್ಲಿ ಬರುವಂತಹ ರಾಜಕೀಯ ಹೊರತು, ಕೆಲಸ ಮಾಡತಕ್ಕಂತಹ ಸಂಸ್ಕೃತಿಯನ್ನು ನಮ್ಮ ವಿರೋಧ ಪಕ್ಷದ ಸದಸ್ಯರೆಲ್ಲರೂ ಕಲಿಸಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಸರ್ಕಾರ ಕೆಲಸ ಮಾಡಿದೆ ಎಂದು ಅವರು ಆಡಿದ್ದಾರೆ. ಅದಕ್ಕೆ ಎಲ್ಲ ಕಾರಣ ವಿಶೇಷವಾಗಿ ತಾವೂ ಕೂಡ ಕಾರಣರಾಗುತ್ತೀರಿ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ರೀತಿಯಲ್ಲಿ ನಾಗರತ್ನಮ್ಮನವರು ಈ ಸದನದ ಅಧ್ಯಕ್ಷರಾಗಿದ್ದಾಗ ಎಲ್ಲ ರಾಜಕೀಯ ಪಕ್ಷಗಳು ಅವರನ್ನು ಪಕ್ಷದ ಅಭ್ಯರ್ಥಿಯಾಗಿ ಮಾಡಬಾರದು ಎಂದು ಹೇಳುವ ಸಂದರ್ಭವೂ ಕೂಡ ನನಗೆ ಗೊತ್ತಿದೆ. ನಾನು ಮಲ್ಲಿಕಾರ್ಜುನ ಸ್ವಾಮಿ, ದೇವರಾಜಅರಸ್‌ರವರ ಅಧ್ಯಕ್ಷತೆಗಿಂತ ಮುಂಚಿತವಾಗಿ 1969-70 ರಿಂದ ನಾನು ನಿಮ್ಮನ್ನು ಬಲ್ಲೆ. ನೀವು ಅತ್ಯಂತ ಸೂಕ್ಷ್ಮ ವ್ಯಕ್ತಿ, ವಿಶೇಷವಾಗಿ ತಮಗೆ ಇರತಕ್ಕಂತಹ ಗುಣ, ನೇರವಾಗಿ ಹೇಳತಕ್ಕಂತಹ ಗುಣವನ್ನು ಬೆಳೆಸಿಕೊಂಡು ಬಂದಿದ್ದೀರಿ. ನಾನು ವೈಕುಂಠ ಬಾಳಿಗ ರವರಿಗೆ ನೋಡದೆ ಇರಬಹುದು, ಕೆಳಮನೆಯಲ್ಲಿ ಹಾಗೂ ಮೇಲ್ಮನೆಯಲ್ಲಿ ಎಲ್ಲ ರೀತಿಯ ಅಧ್ಯಕ್ಷರನ್ನು ನೋಡಿಕೊಂಡು ಬಂದಿದ್ದೇನೆ. ಇವತ್ತಿನ ರಾಜಕೀಯ ವಾತಾವರಣದಲ್ಲಿ ಈ ಸದನದಲ್ಲಿ ಎಷ್ಟರಮಟ್ಟಿಗೆ ಕರೆದುಕೊಂಡು ಹೋಗಬಹುದು, ಇವತ್ತು ವಿಧಾನಸಭೆಯಲ್ಲಿ ನಡೆಯುವಂತಹ ನಡವಳಿಕೆಗಳು ಪಾರ್ಲಿಮೆಂಟ್‌ನಲ್ಲಿ ನಡೆಯುವಂತಹ ನಡವಳಿಕೆಗಳಂತೆ ಅತ್ಯುತ್ತಮ ಸ್ಥಾನ ಹೊಂದಿವೆ. ಶ್ರೀಮತಿ ನಾಗರತ್ನಮ್ಮನವರು ವಿಧಾನ ಸಭಾಧ್ಯಕ್ಷೆಯಾಗಿ ಸದನವನ್ನು ನಡೆಸಿರುವುದನ್ನು ಮತ್ತು ಅಲ್ಲಿಂದ ಮುಂದೆ ಕೆಳಮನೆಯಲ್ಲಿ ಹಾಗೂ ಮೇಲ್ಮನೆಯಲ್ಲಿ ಅಧ್ಯಕ್ಷರುಗಳು ಮತ್ತು ಸಭಾಪತಿಯಾದವರು ಹೇಗೆ ಸದನವನ್ನು ನಡೆಸಿಕೊಂಡು ಬಂದಿದ್ದಾರೆ ಎಂಬುದನ್ನು ನಾನು ನೋಡಿದ್ದೇನೆ. ಪಾರ್ಲಿಮೆಂಟಿನಲ್ಲಿ ನಡೆಯುವ ಚರ್ಚಾ ನಡವಳಿಕೆಗಳನ್ನು ಗಮನಿಸಿದರೆ ಅಲ್ಲಿಗಿಂತಲೂ ಹೆಚ್ಚು ಅಚ್ಚುಕಟ್ಟಾಗಿ ಸದನವನ್ನು ನೀವು ನಡೆಸಿಕೊಂಡು ಬಂದಿದ್ದೀರಿ. ಇದಕ್ಕೆ ದಾಖಲೆಗಳೇ ಇವೆ, ಈ ದಾಖಲೆಗಳೇ ನೀವು ಸದನವನ್ನು ಚೆನ್ನಾಗಿ ನಡೆಸಿಕೊಂಡು ಬಂದಿದ್ದೀರಿ ಎಂಬುದಕ್ಕೆ ಸಾಕ್ಷಿಯಾಗಿವೆ. ಈ ದಾಖಲೆಗಳೇ ಮುಂದೆ ಬರುವ ಸದಸ್ಯರಿಗೂ ಮಾರ್ಗದರ್ಶನವಾಗುತ್ತದೆ ಮತ್ತು ಈ ನಿಟ್ಟಿನಲ್ಲಿ ತಾವೂ ಕೂಡ ಚರಿತ್ರೆಯಲ್ಲಿ ಉಳಿಯುತ್ತೀರಿ ಮತ್ತು ಹಾಗೆ ಉಳಿಯಬೇಕು ಎಂಬುದು ನಿಮ್ಮ ಹಳೆಯ ಸ್ನೇಹಿತರುಗಳ ವಿಶ್ವಾಸವೂ ಕೂಡ ಆಗಿರುತ್ತದೆ. ಈ ಸದನಕ್ಕೆ ಹೆಚ್ಚಿನ ಮಹತ್ವವನ್ನು ತಂದುಕೊಟ್ಟಿದ್ದೀರಿ. ಜನರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡ ನೀವು ಹಲವಾರು ಸಂದರ್ಭಗಳಲ್ಲಿ ವಿರೋಧ ಪಕ್ಷಕ್ಕೇ ಆಗಲೀ ಅಥವಾ ಸರ್ಕಾರಕ್ಕೇ ಆಗಲಿ ಮುಖಮೂತಿ ನೋಡದೆಯೇ ಆಡಿರುವ ಭಾಷಾ ನುಡಿಗಳು ಕಡತದಲ್ಲಿ ಒಪ್ಪಿಕೊಳ್ಳಬೇಕು. ಮಾನ್ಯ ನಂಜೇಗೌಡರು ಕೂಡ ಜ್ಯುಡಿಶಿಯರಿ ಬಗ್ಗೆ ಇಲ್ಲಿ ಮಾತನಾಡಿದ್ದಾರೆ. ಒಟ್ಟಾರೆ ಜ್ಯುಡಿಶಿಯರಿ ಬಗ್ಗೆ ಅತ್ಯಂತ ಗಾಂಭೀರ್ಯವಾದ ಚರ್ಚೆ ಈ ಸದನದಲ್ಲಿ ನಡೆದಿದೆ. ಈ ಸದನದ ಇತಿಹಾಸದಲ್ಲಿ ಪಾರ್ಲಿಮೆಂಟರಿ ಸಿಸ್ಟಂನೊಳಗೆ ಮತ್ತು ಡೆಮಾಕ್ರಸಿ ಸಿಸ್ಟಂನೊಳಗೆ ಈ ಸದನಕ್ಕೆ ಇರತಕ್ಕಂಥ ಮಹತ್ವದ ಬಗ್ಗೆ ಎಷ್ಟು ಜನ ಟೀಕೆ ಮಾಡಿದರೂ ಕೂಡ, ಪತ್ರಿಕೆಗಳು ವಿರುದ್ಧವಾಗಿ ಬರೆದರೂ, ನ್ಯಾಯಾಲಯದವರು ಏನೇ ಮಾತನಾಡಿದರೂ ಕೂಡ ಜ್ಯುಡಿಶಿಯರಿ ವಿಷಯ ಚರ್ಚಾ ವಸ್ತುವೇ ಆಗಿದೆ ಎಂದು ತಾವು ಹೇಳಿ ಅದನ್ನು ಚರ್ಚೆಯಾಗಿ ಸದನದಲ್ಲಿ ರೂಢಿಸಿದ್ದೀರಿ. ಇದು ಬೇರೆ ಪಾರ್ಲಿಮೆಂಟರಿಗಳಿಗೆ ಮತ್ತು ಬೇರೆ ವಿಧಾನ ಸಭೆಗಳಿಗೆ ಮಾರ್ಗದರ್ಶನವೂ ಆಗುತ್ತದೆ. ಹತ್ತನೇ

ವಿಧಾನಸಭೆಯ ಕಡತಗಳು 11ನೇ ವಿಧಾನ ಸಭೆಗೆ ಆಯ್ಕೆಯಾಗಿ ಬರುವ ಎಲ್ಲಾ ಸದಸ್ಯರುಗಳಿಗೂ ಮಹತ್ವವಾದ ಮಾರ್ಗದರ್ಶನವಾಗುತ್ತದೆ. ಇದಕ್ಕೆ ಏನು ಕಾರಣವೆಂದರೆ ಇವೊತ್ತು ನಡೆಯತಕ್ಕಂಥ ಜ್ಯುಡಿಶಿಯರಿ, ಇವೊತ್ತು ಇರತಕ್ಕಂಥ ಪಾರ್ಲಿಮೆಂಟರಿ ಸಿಸ್ಟಂ, ಇವೆರಡರ ಘರ್ಷಣೆಗೆ ಸಂಬಂಧಪಟ್ಟಂತೆ ನಡೆದಿರುವ ಚರ್ಚೆಗೆ ಈ ದಾಖಲೆ ಒಳ್ಳೆಯ ದಾಖಲೆಯೇ ಆಗುತ್ತದೆ. ಆದುದರಿಂದ ಈ ಕಡತ ಮುಂದಿನವರೆಗೆ ಬಹಳ ಮಹತ್ವದ್ದೇ ಆಗುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ನಮ್ಮ ಮುಖ್ಯಮಂತ್ರಿಗಳೂ ಕೂಡ ನಾವು ಮುಕ್ತವಾಗಿ ಕೆಲಸವನ್ನು ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಯಾವ ಯಾವ ಮಂತ್ರಿಗಳು ಹೇಗೆ ಕೆಲಸ ಮಾಡಿದ್ದಾರೆ ಎಂಬುದನ್ನು ನಾವು ಹೇಳುವುದಕ್ಕಾಗುವುದಿಲ್ಲ. ಅದನ್ನು ಮಾನ್ಯ ಸದಸ್ಯರುಗಳೇ ಹೇಳಬೇಕಾಗುತ್ತದೆ. ಅಥವಾ ನಮ್ಮ ಮುಖ್ಯಮಂತ್ರಿಗಳೇ ಹೇಳಬೇಕಾಗುತ್ತದೆ. ಅಥವಾ ರಾಜ್ಯದ ಜನರು ಹೇಳಬೇಕಾಗುತ್ತದೆ. ಆದರೆ ಎಲ್ಲಾ ಮಂತ್ರಿಗಳಿಗೂ ಮುಕ್ತವಾಗಿ ಕಾರ್ಯನಿರ್ವಹಿಸಲು ನಮ್ಮ ಮುಖ್ಯಮಂತ್ರಿಗಳು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಆದರೆ ಅವರು ಎಂದೂ ಕೂಡ ಅನವಶ್ಯಕವಾಗಿ ಮಂತ್ರಿಗಳ ಕಾರ್ಯದಲ್ಲಿ ತಲೆ ಹಾಕುತ್ತಿರಲಿಲ್ಲ. ಎಲ್ಲಾದರೂ ತಪ್ಪಾಗಿದ್ದರೆ, ಗೊಂದಲವಾಗಿದ್ದರೆ ಅಥವಾ ಟೀಕೆಗೆ ಒಳಗಾಗುವ ಹಾಗೆ ಇದ್ದರೆ ಸಂಬಂಧಪಟ್ಟ ಕಡತವನ್ನು ತರಿಸಿ ಪರಿಶೀಲನೆ ಮಾಡಿ ನೋಡಿ ಏನು ಈ ರೀತಿಯಾಗಿ ಮಾಡಿಬಿಟ್ಟಿದ್ದೀರಿ ಎಂದು ಬಾಯಿ ಮಾತಿನಲ್ಲಿ ಅದರ ಸೂಕ್ಷ್ಮತೆಯನ್ನು ಹೇಳಿದ್ದಾರೆಯೇ ವಿನಃ ಒಬ್ಬ ಮಂತ್ರಿಗೆ ಬಿಸಿನೆಸ್ ಆಫ್ ರೂಲ್ಸ್‌ನ್ನು ಅವರು ಬಹಳ ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ ಮತ್ತು ಆ ಪ್ರಕಾರ ನಡವಳಿಕೆಯನ್ನು ಕೊಟ್ಟಿದ್ದಾರೆ. ಅವರನ್ನು ನಾನು ಹೆಚ್ಚು ಹೊಗಳುವುದು ಅಷ್ಟು ಚೆನ್ನಾಗಿರುವುದಿಲ್ಲ. ನಾನು ವೈಯಕ್ತಿಕವಾಗಿ ಅವರನ್ನು ಬಲ್ಲೆ. ಅವರು ಕೈಗಾರಿಕಾ ಮಂತ್ರಿಗಳಾಗಿದ್ದಾಗ ನಾನು ವಿರೋಧ ಪಕ್ಷದಲ್ಲಿ ಕುಳಿತು ಅವರನ್ನು ಬಹಳ ಕಟುವಾಗಿ ಟೀಕೆ ಮಾಡಿದ್ದ. ತದನಂತರ ನನಗೆ ಅವರಿಗೂ ಭಿನ್ನಾಭಿಪ್ರಾಯ ಬಂತು, ಮರುದಿನವೇ ನಾನು ಅವರಿಗೆ ವಿಧಾನ ಪರಿಷತ್ತಿನಲ್ಲಿ ಕ್ಷಮಾಪಣೆಯನ್ನು ಕೇಳಿಕೊಂಡೆ. ಏಕೆಂದರೆ ಅವರು ಅಂಥ ವ್ಯಕ್ತಿತ್ವವನ್ನು ಹೊಂದಿದ ವ್ಯಕ್ತಿಯಾಗಿದ್ದಾರೆ. ಅವರೇ ಮಾತನಾಡುವಾಗ ಎಲ್ಲರೂ ಕೂಡ ಗೆದ್ದು ಮತ್ತೆ ಬನ್ನಿ ಎಂದಿದ್ದಾರೆ. ಇಲ್ಲಿ ಕುಳಿತಿರುವವರೆಲ್ಲರೂ ಗೆದ್ದು ಬಂದರೆ ಪಟೇಲ್‌ರವರೇ ಮತ್ತೆ ಮುಖ್ಯಮಂತ್ರಿ, ಆಗ ನಮ್ಮ ಪಾರ್ಟಿಯೇ ಅಧಿಕಾರಕ್ಕೆ ಬರುತ್ತದೆ. ಇನ್ನು ಖರ್ಗೆಯವರಿಗೂ ಮತ್ತು ನನಗೂ ಬಹಳ ವರ್ಷಗಳ ವಿಶ್ವಾಸವಿದೆ. ಅದೇ ರೀತಿಯಲ್ಲಿ ಸನ್ಮಾನ್ಯ ವೀರಪ್ಪ ಮೊಯ್ಲಿಯವರ ಜೊತೆಯಲ್ಲೂ ಕೂಡ ನಾನು ಅಷ್ಟೇ ವಿಶ್ವಾಸವನ್ನಿಟ್ಟುಕೊಂಡಿರುವವನು ಆಗಿದ್ದೇನೆ. ಮಾನ್ಯ ವೀರಪ್ಪ ಮೊಯ್ಲಿಯವರು ಹಿಂದೆ ರಾಜ್ಯದ ಮುಖ್ಯಮಂತ್ರಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ, ಅವರೂ ಕೂಡ ಈ ಸದನದಲ್ಲಿ ಇದ್ದಾರೆ. ಅವರು ಅವರ ಹಿರಿಮೆಗೆ, ಅನುಭವಕ್ಕೆ ತಕ್ಕಂತೆ ಮತ್ತು ಅವರು ಹೊಂದಿದ್ದ ಸ್ಥಾನಕ್ಕೆ ತಕ್ಕಂತೆ ನಡೆದುಕೊಂಡಿದ್ದಾರೆ. ಅದು ಕೂಡ ಈ ಸದನದ ಘನತೆಯನ್ನು ಹೆಚ್ಚಿಸಿದೆ. ನಾನು ಮುಖ್ಯಮಂತ್ರಿಯಾಗಿದ್ದವನು ಆದ್ದರಿಂದ ಸದನಕ್ಕೆ ಎಷ್ಟು ಬಾರಿ ಬರಬೇಕು ಎಂಬುದಕ್ಕೆ ಸಂಬಂಧಪಟ್ಟಂತೆ ಮಡಿವಂತಿಕೆಯನ್ನು ತೋರದೆ ಸದನದ ಸದಸ್ಯರಾಗಿ ಮೊಯ್ಲಿಯವರು ಮಾದರಿಯಾಗಿ ನಡೆದುಕೊಂಡಿದ್ದಾರೆ. ಏಕೆಂದರೆ ಪಾರ್ಲಿಮೆಂಟಿನಲ್ಲಿ ಮಾಜಿ ಪ್ರಧಾನಮಂತ್ರಿಗಳಾದವರಲ್ಲನೇಕರು ಸದನದಲ್ಲಿ 20 ದಿನಗಳಲ್ಲಿ ಕೇವಲ ಅರ್ಧ ಗಂಟೆ ಮಾತ್ರ ಬಂದು ಕುಳಿತುಕೊಂಡು ಹೋಗಿರುವುದನ್ನು

ನಾನು ನೋಡಿದ್ದೇನೆ. ಆದುದರಿಂದ ಈ ವಿಚಾರದಲ್ಲಿ ಹೊಯ್ಲಿಯವರು ಸದನಕ್ಕೆ ಸದಸ್ಯರಾಗಿ ಮಾದರಿಯಾಗಿ ನಡೆದುಕೊಂಡು ಸದನದ ಘನತೆಯನ್ನು ಹೆಚ್ಚಿಸಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ. ಅದೇ ರೀತಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಸದಸ್ಯರಾದ ನಂಜೇಗೌಡರು, ಮಾನ್ಯ ಸುರೇಶ್‌ಕುಮಾರ್‌ರವರು ಸದನದಲ್ಲಿ ಉತ್ತಮವಾಗಿ ತಮ್ಮ ಕಾರ್ಯವನ್ನು ಮಾಡಿದ್ದಾರೆ. ಅದೇ ರೀತಿಯಲ್ಲಿ ಎಲ್ಲಾ ಸದಸ್ಯರುಗಳೂ ಕೂಡ ಉತ್ತಮವಾಗಿ ಸದನದ ಕಲಾಪದಲ್ಲಿ ಭಾಗವಹಿಸಿದ್ದಾರೆ. ಅದರಲ್ಲೂ ಮಾನ್ಯ ವಾಟಾಳ್‌ನಾಗರಾಜ್‌ರವರು ಉತ್ತಮವಾಗಿ ಸದನದ ಕಲಾಪಗಳಲ್ಲಿ ಭಾಗವಹಿಸಿದ್ದಾರೆ. ಹತ್ತು ವರ್ಷಗಳ ಹಿಂದೆಯೇ ನಾನು ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ ವಾಟಾಳ್‌ರವರು ಎಲ್ಲೇ ನಿಂತರೂ ಕೂಡ ಅವರು ಗೆದ್ದು ಬರಬೇಕೆಂದು ಹೇಳಿದ್ದೇನೆ. ಇವೊತ್ತಿಗೂ ಕೂಡ ಅದೇ ಮಾತನ್ನು ಹೇಳುತ್ತೇನೆ. ಏಕೆಂದರೆ ವಾಟಾಳ್‌ರವರು ಕನ್ನಡದ ಶಕ್ತಿ, ಹೋರಾಟದ ಶಕ್ತಿಯಾಗಿ ಸದನದ ಗೌರವವನ್ನು ಹೆಚ್ಚಿಸತಕ್ಕಂಥವರಾಗಬೇಕು. ಅದೇ ರೀತಿಯಲ್ಲಿ ಹೊಸಬರಾದ ಶ್ರೀ ರಾಮರೆಡ್ಡಿಯವರೂ ಕೂಡ ಚರ್ಚಾ ವಿಷಯಗಳಲ್ಲಿ ಪ್ರಿಪೇರ್ ಮಾಡಿಕೊಂಡು ಬಂದು ಇಲ್ಲಿ ಉತ್ತಮವಾಗಿ ಭಾಷಣವನ್ನು ಮಾಡುತ್ತಿದ್ದರು. ಬೇಡಿಕೆಗಳ ಭಾಷಣವನ್ನು ಸದಸ್ಯರುಗಳು ಮಾಡಿದರೆ ಮಂತ್ರಿಗಳು ಹೆದರಬೇಕು ಎನ್ನುವ ಮಾತನ್ನು ಅವರು ಹೇಳಿದ್ದರು. ಅದೇ ರೀತಿಯಲ್ಲಿ ಅವರ ಭಾಷಣಕ್ಕೆ ನಾವು ಹೆದರಿದ್ದೆವು. ಯಾವುದೇ ಸ್ಕ್ಯಾಂಡಲ್‌ಗಳನ್ನು ಅವರು ಹೇಳುವುದಕ್ಕೆ ಇಲ್ಲದಿದ್ದರೂ ಕೂಡ ಅವರು ಮಂಡಿಸಿದಂಥ ಹಲವಾರು ವಿಚಾರಗಳಿಗೆ ನಾವು ಹೆದರಿದ್ದೇವೆ. ಅದೇ ರೀತಿಯಲ್ಲಿ ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರೂ ಕೂಡ ಸದನದ ಕಾರ್ಯಕಲಾಪಗಳಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆಂದು ತಿಳಿಸಿ ಇಲ್ಲಿರತಕ್ಕಂಥ ಎಲ್ಲಾ ಸ್ನೇಹಿತರುಗಳಿಗೆ ತಮ್ಮ ಮೂಲಕ ಅಭಿನಂದನೆಯನ್ನು ಸಲ್ಲಿಸಿ ದೇವರು ಅವರುಗಳಿಗೆಲ್ಲಾ ಒಳ್ಳೆಯದನ್ನು ಮಾಡಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

+ ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಾವಿಂದು ಈ ವಿಧಾನ ಸಭೆಯ ಅವಧಿಯ ಕೊನೆಯ ಹಂತದಲ್ಲಿ ಇದ್ದೇವೆ. ನೆನಪುಗಳು ಯಾವಾಗಲೂ ಸಿಹಿಯಾಗಿಯೇ ಇರುತ್ತದೆ ಎಂದು ನಮ್ಮಲ್ಲಿ ಗಾದೆಮಾತಿನಲ್ಲಿ ಹೇಳುವುದುಂಟು. ಆ ರೀತಿಯಲ್ಲಿ ಸದನದ ಸದಸ್ಯರುಗಳು ನೆನಪುಗಳನ್ನು ಮೆಲುಕು ಹಾಕುವುದಕ್ಕೆ ತಾವು ಈ ಒಂದು ಸದವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಕೆಲವು ಮಾನ್ಯ ಸದಸ್ಯುರುಗಳು ಈ ಸದನದಲ್ಲಿ ನಡೆದಿರುವ ಕಾರ್ಯಕಲಾಪಗಳ ಗುಣಮಟ್ಟ ಇನ್ನೂ ಎತ್ತರಕ್ಕೆ ಬೆಳೆಯಬೇಕಾಗಿತ್ತು ಎನ್ನುವ ಸದಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಅದರಲ್ಲಿ ಪೂರ್ತಿಯಾಗಿ ಸತ್ಯವಿದೆ. ಇನ್ನು ಮೇಲ್ಮಟ್ಟಕ್ಕೆ ಹೋಗಬೇಕಾಗಿತ್ತು. ಏಕೆಂದರೆ ವಿಧಾನಸಭೆಗೆ ಯಾವುದೇ ವ್ಯಕ್ತಿ ಸುಮ್ಮನೇ ಬಂದು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಚುನಾವಣೆಗಳಲ್ಲಿ ಗೆಲುವು, ಸೋಲುಗಳ ಅನುಭವಗಳನ್ನು ಹೊಂದಿದ ವ್ಯಕ್ತಿಗಳು ಇಲ್ಲಿ ಬಂದು ಕುಳಿತಿರತಕ್ಕಂಥವರುಗಳಾಗಿರುತ್ತಾರೆ. ಜನತೆಯ ಸಮಸ್ಯೆಗಳು, ರಾಜ್ಯದ ಮುಂದೆ ಇರತಕ್ಕಂಥ ಸಮಸ್ಯೆಗಳು, ದೇಶದ ಮುಂದೆ ಇರತಕ್ಕಂಥ ಸಮಸ್ಯೆಗಳು ಹಲವಾರಿವೆ. ಈ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಯೇ ನಾವೆಲ್ಲರೂ ಇಲ್ಲಿಗೆ ಬಂದಿದ್ದೇವೆ. ಆ ಅನುಭವಗಳ ಆಧಾರದ ಮೇಲೆ ನಾವುಗಳು ಸದನದ ಕಲಾಪಗಳಲ್ಲಿ ಭಾಗವಹಿಸತಕ್ಕಂಥ ಸಂದರ್ಭದಲ್ಲಿ ಸದನದ ಕಲಾಪಗಳನ್ನು

ಅತ್ಯಂತ ಮೇಲ್ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕೆನ್ನುವ ಉದ್ದೇಶದಿಂದಲೇ ನಾವು ಇಲ್ಲಿಗೆ ಬಂದಿರತಕ್ಕಂಥವರಾಗಿರುತ್ತೇವೆ. ಆದರೆ ಕೆಲವು ಸಂದರ್ಭಗಳಲ್ಲಿ ಅದಕ್ಕೆ ಅಪವಾದ ಬರುವಂತೆ ನಡೆದುಕೊಂಡಿರತಕ್ಕಂಥವುಗಳು ಉಂಟು. ನಮ್ಮ ಸ್ನೇಹಿತರೊಬ್ಬರು ಮಾತನಾಡುತ್ತಾ ಜಿರೋ ಹವರ್ ಎಂಬುದು ಜಿರೋ ಹವರ್ಸ್ ಆಯಿತು ಎಂದು ಹೇಳಿದರು. ಕಡೆಗೆ ಇದು ಜಿರೋ ಡೇ ಕೂಡ ಆಯಿತು. ಇಂಥ ಪದ್ಧತಿಯನ್ನು ಮುಂದೆ ಬರತಕ್ಕಂಥ ಸದಸ್ಯರುಗಳು ಅನುಕರಣೆ ಮಾಡುವುದು ಸಾಧುವಲ್ಲ. ಇದೆಲ್ಲಾ ಕೆಟ್ಟ ಉದಾಹರಣೆಗಳೇ ಆಗಿವೆ ಎಂದು ನಾನಂತೂ ಕೂಡ ಭಾವಿಸುತ್ತೇನೆ. ಈ ರೀತಿಯಾಗದಂತೆ ಅತ್ಯಂತ ಎಚ್ಚರಿಕೆಯನ್ನು ಈ ನಿಟ್ಟಿನಲ್ಲಿ ಮುಂದಿನ ಸದಸ್ಯರುಗಳು ತೆಗೆದುಕೊಳ್ಳಬೇಕು ಎಂದು ಹೇಳಬಯಸುತ್ತೇನೆ. ನಾನು ಐದನೇ ಬಾರಿ ಈ ಸದನಕ್ಕೆ ಬಂದವನಾಗಿದ್ದೇನೆ. ನನ್ನ ಅನುಭವದಲ್ಲಿ ಹೇಳುವುದಾದರೆ ಈ ಸದನಕ್ಕೆ ನಾವು ಶಾಸನಸಭೆ ಎಂದು ಕರೆಯುತ್ತೇವೆ, ಹೆಸರು ಇರತಕ್ಕಂಥದ್ದೇ ಶಾಸನ ಸಭೆ ಎಂದು. ಆದರೆ ಇಲ್ಲಿಗೆ ಶಾಸನಗಳು ಬಂದಂಥ ಸಂದರ್ಭದಲ್ಲಿ ಅದಕ್ಕೆ ಯಾವ ಮಟ್ಟದಲ್ಲಿ ಚರ್ಚೆಯಾಗಬೇಕು, ಅದರ ಸಾಧಕ-ಭಾದಕಗಳೇನು, ಅದರ ಪರಿಣಾಮವೇನು ಎನ್ನತಕ್ಕಂಥದ್ದರ ಬಗ್ಗೆ ನಾವು ಹೆಚ್ಚು ಹೆಚ್ಚು ಬೆಳಕನ್ನು ಚೆಲ್ಲಬೇಕಾಗಿರತಕ್ಕಂಥದ್ದು ಅವಶ್ಯಕತೆಯಾಗಿದೆ. ಆದರೆ ಈಗಲೂ ಕೂಡ ಅದರ ಕೊರತೆ ಇನ್ನೂ ಇದೆ ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಇನ್ನುಳಿದಂತೆ ನಮ್ಮ ಇಲ್ಲಿಯ ಅನೇಕ ಸ್ನೇಹಿತರುಗಳು ನನ್ನ ಬಗ್ಗೆ, ಮುಖ್ಯಮಂತ್ರಿಗಳ ಬಗ್ಗೆ, ಹಾಗೂ ಇತರ ಸ್ನೇಹಿತರುಗಳ ಬಗ್ಗೆ ಸದಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಾನು ಅವರುಗಳಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಇನ್ನು ಅಧ್ಯಕ್ಷರಾದ ತಮ್ಮನ್ನು ಆ ಸ್ಥಾನದಲ್ಲಿಯೇ ಉಳಿಸಿಕೊಂಡದ್ದು ಯಾವ ಸಂದರ್ಭದಲ್ಲಿ ಎಂಬುದನ್ನು ನಾನು ಈ ಸಂದರ್ಭದಲ್ಲಿ ತಮಗೆ ಜ್ಞಾಪಿಸಬೇಕಾದುದು ಅವಶ್ಯಕತೆ ಇದೆಯೆಂದು ಭಾವಿಸುತ್ತೇನೆ. ಇವೊತ್ತು ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ಸದಸ್ಯರ ಸಂಖ್ಯೆ ಹೆಚ್ಚು ಕಡಿಮೆ ಸಮ ಸಮವಾಗಿಯೇ ಇದೆ. ಇಂಥ ಸಂದರ್ಭದಲ್ಲಿ ನಾವು ಹಳೆ ಅನುಭವಗಳನ್ನು ಜ್ಞಾಪಕದಲ್ಲಿಟ್ಟುಕೊಂಡು ಸದನವನ್ನು ನಡೆಸಬೇಕಾದರೆ ಬಹಳ ಸಾಮರ್ಥ್ಯ ಇರತಕ್ಕಂಥವರ ಅವಶ್ಯಕತೆ ಇದೆಯಾದ ಕಾರಣ ಅಂಥ ಸಾಮರ್ಥ್ಯ ಹೊಂದಿದ ಸದಸ್ಯರನ್ನೇ ಅಧ್ಯಕ್ಷರನ್ನಾಗಿ ಆರಿಸಬೇಕಾದುದು ಸೂಕ್ತವೆಂದು ಹೇಳಿ ಅದರ ಬಗ್ಗೆ ಚರ್ಚೆ ಮಾಡಿದೆವು. ನಾನು ಮಂತ್ರಿಯಾದ ಮತ್ತು ಇನ್ನೂ ಕೆಲವರು ಮಂತ್ರಿಗಳಾದರು. ಆದರೆ ತಮ್ಮನ್ನು ಅದಕ್ಕಿಂತ ಎತ್ತರದ ಸ್ಥಾನದಲ್ಲಿ ಕೂರಿಸಬೇಕು ಎಂತಲೂ ಯೋಚಿಸಿದುದರ ಜೊತೆಗೆ ಈ ಸದನವನ್ನು ಉತ್ತಮ ರೀತಿಯಲ್ಲಿ ನಡೆಸಬೇಕಾದುದು ಮುಖ್ಯವಾಗಿತ್ತು. ಏಕೆಂದರೆ ಇದೊಂದು ರೀತಿ ಟರ್ಬುಲೆಂಟ್ ಅಸೆಂಬ್ಲಿಯೇ ಆಗಿತ್ತು ಎಂದು ಹೇಳುವುದಕ್ಕೆ ನಾನಾದರೂ ಇಚ್ಛೆಪಡುತ್ತೇನೆ. ಏಕೆಂದರೆ ಯಾವಾಗಲೂ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷ ಸಂಖ್ಯಾಬಲದಲ್ಲಿ ಸಮ ಸಮನಾಗಿ ಇದ್ದಂಥ ಸಂದರ್ಭದಲ್ಲಿ ಸದನವನ್ನು ನಡೆಸತಕ್ಕಂಥದ್ದು ಬಹಳ ಕಷ್ಟವೇ ಆಗಿರುತ್ತದೆ. ಆ ಸಾಮರ್ಥ್ಯ ಇರತಕ್ಕಂಥವರನ್ನೇ ಅಧ್ಯಕ್ಷ ಸ್ಥಾನದಲ್ಲಿ ಕೂರಿಸಬೇಕು ಎನ್ನುವ ಉದ್ದೇಶದಿಂದ ನಾವು ಕೆಲವರ ಹತ್ತಿರ ಮಾತನಾಡಿ ಚರ್ಚೆ ಮಾಡಿದ್ದಲ್ಲದೇ ಅಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ದೇವೇಗೌಡರ ಬಳಿಯೂ ಇದರ ಬಗ್ಗೆ ಚರ್ಚೆ ಮಾಡಿದಾಗ ದೇವೇಗೌಡರು ಸಲಹೆ ಕೊಟ್ಟು ತಮ್ಮ ಬಳಿಯೇ ಬಂದು ಮಾತನಾಡುವುದಕ್ಕೆ ಬಂದಾಗ ನೀವೂ ಕೂಡ ನಿಮ್ಮ ಅಭಿಪ್ರಾಯ ತಿಳಿಸುತ್ತಾ ನಿಮ್ಮೆಲ್ಲರ ಇಚ್ಛೆ ಅದೇ ಆಗಿದ್ದರೆ ನಾನು ಅದಕ್ಕೆ ವಿರೋಧವನ್ನು ವ್ಯಕ್ತಪಡಿಸುವುದಿಲ್ಲವೆಂದಿರಿ.

6.30 ಪಿ.ಎಂ

ನಾನು ಮಂತ್ರಿಯಾದರೆ, ಇನ್ನು ಉಳಿದಿರತಕ್ಕಂಥವರು ತಮ್ಮನ್ನು ಎಲ್ಲಾದರೂ ಒಂದು ಸ್ಥಾನವಲ್ಲಿ ಎಂದರೆ ಎತ್ತರ ಸ್ಥಾನದಲ್ಲಿ ಕೂರಿಸಬೇಕು ಮತ್ತು ಅದರ ಜೊತೆಯಲ್ಲಿ ಈ ಸದನವನ್ನು ಉತ್ತಮ ರೀತಿಯಲ್ಲಿ ನಡೆಸತಕ್ಕಂಥವರು ಇರಬೇಕು. ಇದನ್ನು ನಾನು ಟರ್ಬುಲೆಂಟ್ ಅಸೆಂಬ್ಲಿ ಎಂದು ಕರೆಯುವುದಕ್ಕೆ ಇಷ್ಟಪಡುತ್ತೇನೆ. ಯಾವತ್ತಿಗೂ ವಿರೋಧ ಪಕ್ಷ, ಆಡಳಿತ ಪಕ್ಷದ ಸಂಖ್ಯಾಬಲದಲ್ಲಿ ಸಮವಾಗಿ ಇದ್ದಂತಹ ಸಂದರ್ಭದಲ್ಲಿ ಸದನವನ್ನು ನಡೆಸುವುದು ಕಷ್ಟವಾಗುತ್ತದೆ. ಆ ಸಾಮರ್ಥ್ಯ ಇರತಕ್ಕಂಥವರನ್ನು ಅಧ್ಯಕ್ಷಸ್ಥಾನದಲ್ಲಿ ಕೂರಿಸಬೇಕೆನ್ನುವ ಉದ್ದೇಶದಿಂದ ನಮ್ಮ ಸ್ನೇಹಿತರು ಮಾತನಾಡಿ ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದಂತಹ ದೇವೇಗೌಡರ ಹತ್ತಿರ ಈ ವಿಚಾರವನ್ನು ಪ್ರಸ್ತಾಪ ಮಾಡಿದೆವು. ಅವರು ನಮಗೆ ನೀವು ಅವರ ಹತ್ತಿರ ಮಾತನಾಡಿ ಎಂದು ಹೇಳಿದರು. ನಾವು ಸ್ನೇಹಿತರು ತಮ್ಮ ಹತ್ತಿರ ಬಂದಂತಹ ಕಾಲದಲ್ಲಿ, ತಾವು ನಿಮ್ಮೆಲ್ಲರ ಇಚ್ಛೆ ಈ ರೀತಿ ಇದ್ದರೆ ಅದಕ್ಕೆ ನಾನು ವಿರೋಧ ವ್ಯಕ್ತಪಡಿಸುವುದಿಲ್ಲವೆಂದು ಹೇಳಿ ನೀವು ಮೊದಲು ಏನು ಮಾತನ್ನು ಆಡಿದ್ದೀರೋ ಈ ನಿಮಿಷದವರೆಗೂ ಕೂಡ ಅದೇರೀತಿಯ ಬಾಂಧವ್ಯವನ್ನು ವೈಯಕ್ತಿಕವಾಗಿ ಕೂಡ ನಡೆದುಕೊಂಡು ಬಂದಿರಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದರ ಜೊತೆಯಲ್ಲಿ ಇಲ್ಲಿ ಆಡಳಿತ ಹಾಗೂ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ತಾವು ನೀಡಿದಂತಹ ಕೆಲವು ತೀರ್ಪುಗಳಲ್ಲಿ, ಹಾಗೂ ನಡೆದುಕೊಳ್ಳತಕ್ಕಂಥ ಸಂದರ್ಭಗಳಲ್ಲಿ ತಮ್ಮ ವಿಚಾರಗಳನ್ನು ತಮಗೆ ನೇರವಾಗಿ ಹೇಳದೆ ನಮ್ಮ ಹತ್ತಿರ ಬಂದು, ನೋಡಿ ನಿಮ್ಮ ಸ್ಪೀಕರ್ ಈ ರೀತಿ ಮಾಡಬಾರದಿತ್ತು. ಹೇಳಬಾರದಿತ್ತು ಎಂದು ನಿಮ್ಮನ್ನು ಕುರಿತು ಹೇಳುತ್ತಿದ್ದರು. ಅದನ್ನು ನಾನು ಬಹಳ ಹೆಮ್ಮೆಯಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಆ ಸ್ಥಾನದಲ್ಲಿ ಕುಳಿತು ಈ ಸದನದ ಘನತೆ ಗಾಂಭೀರ್ಯವನ್ನು ಬಹಳ ಎತ್ತರಕ್ಕೆ ತೆಗೆದುಕೊಂಡು ಹೋಗುವುದರಲ್ಲಿ ಹಾಗೂ ವೈವಿಧ್ಯಮಯ ಮತ್ತು ಟರ್ಬುಲೆಂಟ್ ಆಗಿರತಕ್ಕಂಥ ಸದನವನ್ನು ಸುಲಲಿತವಾಗಿ ಈ ಅವಧಿಯನ್ನು ಮುಗಿಸುತ್ತಿದ್ದು, ನಮ್ಮ ಕೃಷ್ಣಾರೆಡ್ಡಿಯವರು ಒಂದು ಮಾತನ್ನು ಕಾಲಾಂತಕುಡು ಎಂದು ಹೇಳುತ್ತಿರುತ್ತಾರೆ. ಅವೆಲ್ಲವನ್ನು ಬಳಸಿ ಈ ಸದನವನ್ನು ಬಹಳ ಎತ್ತರಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಸಹಕರಿಸಿದ್ದೀರಿ. ಮತ್ತು ನಮ್ಮ ಮಂತ್ರಿಮಂಡಲದ ಎಲ್ಲಾ ಮಾನ್ಯ ಸದಸ್ಯರುಗಳು ಮುಖ್ಯಮಂತ್ರಿಗಳು ಹಾಗೂ ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ನಮಗೆ ಸರ್ವಸ್ವಾತಂತ್ರ್ಯವನ್ನು ಕೊಟ್ಟು ನಮ್ಮ ನಮ್ಮ ಇಲಾಖೆಗಳಲ್ಲಿ ನಾವೇ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಒದಗಿಸಿ ಕೊಟ್ಟು, ನಮಗೆ ಪ್ರತಿಸಂದರ್ಭದಲ್ಲೂ ಕೂಡ ಇದು ಒಂದು ಕುಟುಂಬ, ಇದು ಒಂದು ಟೀಮ್, ನಾವು ಏನು ಮಾಡಿದರೂ ಕೂಡ ಟೀಮ್‌ಗೆ ಬರತಕ್ಕಂಥ ಗೌರವ ಎಂದು ಅನೇಕ ಸಂದರ್ಭದಲ್ಲಿ ಹೇಳಿ ನಮಗೆ ಅವಕಾಶವನ್ನು ಕೊಟ್ಟಿದ್ದಾರೆ. ಅದರ ಜೊತೆಯಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳು, ಎಲ್ಲಾ ಸ್ನೇಹಿತರು ನಮ್ಮ ವಿಧಾನಸಭೆ ಸಚಿವಾಲಯದ ಎಲ್ಲಾ ಅಧಿಕಾರಿಗಳು, ಕಾರ್ಯದರ್ಶಿಗಳು, ಉತ್ತಮರೀತಿಯಲ್ಲಿ ಕೆಲಸವನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಎಲ್ಲರಿಗೂ ಕೂಡ ನನ್ನ ಕೃತಜ್ಞತೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸಂಸದೀಯ ವ್ಯವಹಾರ ಸಚಿವರು ಬಂದಿದ್ದಾರೆ. ಅವರ ಪದ್ಧತಿ ಏನೆಂದರೆ ಅವರು ಏಳು ಗಂಟೆ ನಂತರ ಎಲ್ಲೂ ಕುಳಿತುಕೊಳ್ಳುವುದಿಲ್ಲ. ಆದುದರಿಂದ ಈಗ ಮಾತನಾಡತಕ್ಕಂಥ ಸದಸ್ಯರುಗಳೆಲ್ಲರೂ ಎರಡೆರಡು ನಿಮಿಷಗಳಲ್ಲಿ ತಮ್ಮ ಮಾತನ್ನು ಮುಗಿಸಬೇಕು. ಮಾನ್ಯ ಸಭಾನಾಯಕರು ಕೂಡ ಮಾತನಾಡಬೇಕಾಗಿದೆ.

ಶ್ರೀ ಹೆಚ್.ಎನ್. ಸಂಜೀಗೌಡ : ಕೊನೇ ದಿವಸ ಕೂಡ ತಾವು ಕಾಂಪ್ಲಿಮೆಂಟ್ಸ್ ಕೊಡುವುದನ್ನು ಬಿಡುವುದಿಲ್ಲವಲ್ಲ.

+ ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಅಧ್ಯಕ್ಷರೇ, ಗಾಜಿನ ಚೂರುಗಳ ಮಧ್ಯೆ ವಜ್ರವೊಂದು ಇದ್ದಾಗ ಮೊದಲು ವಜ್ರ ಕಾಣುವಂತೆ ಈ ಸದನಕ್ಕೆ ವಜ್ರಪ್ರಾಯವಾಗಿದ್ದೀರಿ ನೀವು. 'ಗಗನಕ್ಕೆ ಆ ಚಂದ್ರ ಭೂಷಣಂ, ರವಿಯಾಕಾಶಕೆ ಭೂಷಣಂ, ರಮೇಶ್ ಕುಮಾರ್ ಈ ಸದನಕ್ಕೆ ಭೂಷಣವಾಗಿದ್ದೀರಿ. ಇನ್ನು ಮಾನ್ಯ ಪಟೇಲರು

*'ಜಾತಿ ಮತಗಳ ಮಟ್ಟ ತೂರಿ*
*ಎಲ್ಲಾ ತತ್ವದ ಎಲ್ಲೇ ಮೀರಿ*
*ದಿಗ್‌ದಿಗಂತದತ್ತ ಏರಿ'*

ಎಂಬ ಕುವೆಂಪು ಅವರ ಕವನಕ್ಕೆ ಅನ್ವರ್ಥನಾಮ, ಹೃದಯ ವೈಶಾಲ್ಯತೆ ಅದರಲ್ಲೂ ಜಾತಿ ಕಟ್ಟಳೆಯಿಂದ ಹೊರ ಬಂದಿರತಕ್ಕಂಥ ಈ ಎರಡು ಕೇಂದ್ರ ಬಿಂದುಗಳನ್ನು ತೆಗೆದುಕೊಂಡಾಗ ಈ ಸದನಕ್ಕೆ ನಿಜವಾಗಿ ಕೂಡ ಕಳಸಪ್ರಾಯವಾಗಿದ್ದೀರಿ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ನಾಲ್ಕುವಸಂತಗಳನ್ನು ಕಳೆದು ಏಳು ಮಾಸಗಳನ್ನು ಕಳೆದು ನಾವು ಮನೆಗೆ ಹೋಗುತ್ತಿದ್ದೇವೆ. ಆದರೆ ಇಲ್ಲಿರತಕ್ಕಂಥ ಮಂತ್ರಿಮಂಡಲದ ಮಹೋದಯರು ಮಹಾ ಬುದ್ಧಿಜೀವಿಗಳ ಆದರೆ ಬೇಷರತ್ತಾಗಿ ಹಿಂದೆ ಬಿದ್ದರು. ಕಾರಣ ಅವರಲ್ಲಿರತಕ್ಕಂಥ ಮೇಧಾವಿತನವನ್ನು ಉಪಯೋಗಿಸಿ ಕೊಳ್ಳುವುದಕ್ಕೆ ಅವರ ಪಕ್ಷದವರೇ ಅವರನ್ನು ಬಿಡಲಿಲ್ಲ. ಇದು ಒಂದು ದುರ್ದೈವದ ಸಂಗತಿ. ಆದರೆ ಟೀಕೆ ಬಂದಿದ್ದು ನಮ್ಮ ಜೆ.ಹೆಚ್.ಪಟೇಲರಿಗೆ ಮಾತ್ರ. ಜೆ.ಹೆಚ್. ಪಟೇಲರಂತಹ ಸಂಭಾವಿತ ಮುಖ್ಯಮಂತ್ರಿಯನ್ನು ನಮ್ಮ ರಾಜ್ಯ ಹಿಂದೆಂದು ಕಂಡರಿಯದಂತಹ ಮುಖ್ಯಮಂತ್ರಿ ಎಂದು ಹೇಳಬಹುದು. ಅದನ್ನು ಪ್ರಾಮಾಣಿಕವಾಗಿ ಯಾವುದೇ ಪಕ್ಷದಲ್ಲಿ ಇದ್ದರು ಹೇಳುತ್ತೇನೆ. ನೀವು ಈ ಸದನವನ್ನು ಲಗಾಮು ಹಾಕಿ ಓಡಿಯದೆ ಹೋಗಿದ್ದರೆ ಇದು ಮೀನಿನ ಮಾರುಕಟ್ಟೆಯಾಗುತ್ತಿತ್ತು. ಅಂತಹ ಒಂದು ನೈಪುಣ್ಯತೆಯನ್ನು ಹೊಂದಿರತಕ್ಕಂಥ ನೀವು ಜ್ಞಾನದ ಮೆದುಳನ್ನು ಹೊಂದಿರತಕ್ಕಂಥ ಪಟೇಲರು ನಿಜವಾಗಲೂ ಬುದ್ಧಿವಂತರು. ಅವರನ್ನು ಬೇಕಾದಷ್ಟು ಜನ ಟೀಕೆ ಮಾಡಿದರು.

*'ಮಂದಮತಿ ನಿಂದಿಸಲು*
*ಮನಕ್ಕೆ ತಂದುಕೊಳ್ಳದ ನರನು ಜಾಣನು,*
*ಸಂಧಿಸಿದ ಕಲಹದಲ್ಲಿ*

*ಶಾಂತಿಯನ್ನು ಹೊಂದುವಾತ ಜಾಣನು*
*ಚಿಂದ ಬಹುಚಿಂತೆಯಲ್ಲಿ*
*ಧೈರ್ಯತಳೆಯುವವನು ಅತೀಜಾಣನು*
*ಧರಣಿಯೊಳು ಪರರಿಗೆ*
*ವನಗಾರನಾಗದ ನರನು ಜಾಣನು*
*ಹಿರಿದಾದ ಸನ್ಮಾರ್ಗದಲ್ಲಿ ನಡೆವ ನೀವು*
*ಜಾಣರು ಪಟೇಲರೆ.*

ಹಾಗೆ ಇಲ್ಲಿ ಇರತಕ್ಕಂಥ ಪತ್ರಿಕೋದ್ಯಮಿಗಳು ಕೂಡ ನಿಜವಾಗಿ ನಿಷ್ಪಕ್ಷಪಾತವಾಗಿ ಈ ರಾಜ್ಯಕ್ಕೆ ಇಲ್ಲಿ ನಡೆದಿರತಕ್ಕಂಥ ವಿಚಾರಧಾರೆಗಳನ್ನು ಕೊಟ್ಟಿದ್ದಾರೆ. ಆದರೂ ಮಾನ್ಯ ಗೋವಿಂದೇಗೌಡರು ವಿದ್ಯಾಪಯೋನಿಧಿ, ಎಲ್ಲರೂ ಸಹ ಮೇಧಾವಿಗಳು. ' ಮುಂದೆ ಮುಂದೆ ಹೋಗಿದೆ, ಹಿಂದೆ ಬಿತ್ತು ಕಾರಣ, ಅವರಲ್ಲಿ ನತದೃಷ್ಟತನ, ಬುದ್ಧಿ ಭೂಲೋಕ ಆಳಿದರೆ ಅದೃಷ್ಟ ಹೋಗಿ ಕತ್ತೆ ಕಾಲು ಕಟ್ಟುತ್ತಿತ್ತಂತೆ. ಹಾಗೆ ಏನು ಮಾಡುವುದು ಅದೃಷ್ಟ ಸರಿಯಿಲ್ಲ. ಅವರ ಅದೃಷ್ಟ ಕೆಟ್ಟುಹೋಯಿತು. ಆದರೆ ಏನಾದರೂ ಕೂಡ ನಮ್ಮ ಪಟೇಲರಿಗೆ ಒಂದು ಮಾತನ್ನು ಹೇಳುತ್ತೇನೆ.

*ಇಂತ ಜ್ಞಾನವಿಲ್ಲದ ಬಂಧುಪರಿವಾರ*
*ಹಂಗಿಸುವ ಛಲವುಳ್ಳ ಸತಿಪುತ್ರಸಖರು*
*ಬಂಗಾರ ಬೆಸುದುಂದ್ದು ಶೃಂಗಾರದ ಬಟ್ಟೆ*
*ಬಯಸುವ ಮಂದ ಬುದ್ಧಿಯ ಜನರು ಮಂಕುತಿಮ್ಮ*

ನೀವು ಇಂತಹ ಸಮಾಜದಲ್ಲಿ ಜನರಲ್ಲಿ ಸರಿಯಾದ ರೀತಿಯಲ್ಲಿ ವಿಚಕ್ಷಣೆಯಿಂದ ಪ್ರಾಮಾಣಿಕವಾಗಿ ಪರಿಶುದ್ಧವಾಗಿ ಅದರಲ್ಲೂ ಪಟೇಲರು ಭ್ರಷ್ಟಾಚಾರ ರಹಿತ ಮುಖ್ಯಮಂತ್ರಿ ಎಂದರೆ ತಪ್ಪಾಗಲಾರದು. ಇದನ್ನು ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಆದರೆ ಪಟೇಲರನ್ನು ಬಿಟ್ಟು ಬಾಕಿಯವರನ್ನು ಹೇಳುವುದಿಲ್ಲ. ಅವರಲ್ಲಿ ಇರತಕ್ಕಂಥವರು ನಮ್ಮನ್ನು ಬಯ್ದುಬಯ್ದು ಹಾಳಾಗಿ ಹೋದರು. ಆದುದರಿಂದ ನೀವು ಇಂತಹ ವಿಚಾರಕ್ಕೆ ಹೋಗದ ಜ್ಞಾನದ ಒಂದು ಹಣತೆಯಿಂದ ಸಾವಿರಾರು ಜ್ಯೋತಿಗಳನ್ನು ಪಡೆದು, ಬೆಳಗಿಸತಕ್ಕಂಥ ನಿಮ್ಮ ವ್ಯಕ್ತಿತ್ವ, ಇವತ್ತು ಕರ್ನಾಟಕದಲ್ಲಿ ಮಾತ್ರ ಅಲ್ಲ ಬೇರೆ ರಾಜ್ಯಗಳಲ್ಲಿ ಕೂಡ ಮಾದರಿಯಾಗಿದೆ. ನಮ್ಮ ನಿಮ್ಮ ಸ್ನೇಹ 20 ವರ್ಷದ ಆ ಸ್ನೇಹ, ಸ್ನೇಹವನ್ನು ಸನ್ಮಾನ್ಯರೆ, ಗೌರವಾನಿತ್ವರೆ ಎಂದರೆ ಇವರೆಲ್ಲಾ ಆಡಿಕೊಳ್ಳುತ್ತಾರೆ. ನಮ್ಮ ನಿಮ್ಮ ಬಾಂಧವ್ಯ ಅವರಿಗೆ ಗೊತ್ತಿಲ್ಲ. ನಾವು ಅಣ್ಣತಮ್ಮಂದಿರ ತರಹ ಇದ್ದೇವೆ. ಆದುದರಿಂದ ಈ ಸಭೆಗೆ ಶೋಭೆ ತಂದಿರತಕ್ಕಂಥವರು. ಮೂರು ಜನ ಈ ರಾಜ್ಯದಲ್ಲಿ ಕೆಲಸ ಮಾಡಬೇಕು. ಒಬ್ಬ ಅಧಿಕಾರಿ, ಒಬ್ಬ ರಾಜಕಾರಣಿ, ಒಬ್ಬ ಉಪಾಧ್ಯಾಯ. ಮೂರು ಜನ ಪ್ರಾಮಾಣಿಕವಾಗಿ ಬಂದಾಗ ಯಾವುದೇ ರಾಜ್ಯವಾಗಲಿ ರಾಷ್ಟ್ರವಾಗಲೀ ಸಂಪದ್ಭರಿತವಾಗುತ್ತದೆ. ಆ ಕೆಲಸವನ್ನು ಮಾಡಬೇಕಾದರೆ ಎಲ್ಲರೂ ಕೂಡ ಕಂಕಣ ತೊಟ್ಟಿದ್ದೀರಿ. ಆದರೆ ನಿಮ್ಮ ನಿಮ್ಮ ಒಳಜಗಳದಿಂದ ಗಂಡಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು ಎಂಬಂತೆ ಬಡವು

ಮಾಡಿಬಿಟ್ಟಿರಿ ನೀವು. ಆದರೂ ಕೂಡ ಮುಂದೆ ಈ ರಾಜ್ಯವನ್ನು ದಕ್ಷತೆಯಿಂದ ಆಳತಕ್ಕಂಥ ಕೆಲಸವನ್ನು ಮಾಡಬೇಕಾದಂತಹವರನ್ನು ಆರಿಸತಕ್ಕಂಥವರು ಜನರು, ಮಾಲೀಕರು ಅವರು. ಅವರು ಏನು ತೀರ್ಪು ಕೊಡುತ್ತಾರೋ, ಆ ತೀರ್ಪಿಗೆ ನಾವು ಬದ್ಧರಾಗಬೇಕೆಂದು ಹೇಳುತ್ತಾ ಕೊನೆಯಲ್ಲಿ ರಾಮಾಯಣವನ್ನು 47 ಸೆಕೆಂಡ್‌ನಲ್ಲಿ ಹೇಳಿ ಮುಗಿಸುತ್ತೇನೆ. ಅಂದು ಶ್ರೀರಾಮಚಂದ್ರ ಧರೆಗಿಳಿದು ಬಂದ ದುಷ್ಟರ ಸಂಹಾರಕ್ಕಾಗಿ, ಅಂದು ಒಬ್ಬನೇ ರಾಮ, ಒಬ್ಬನೇ ರಾವಣ, ಆದರೆ ಇಂದು ರಾಮ ಅಂತೂ ಇಲ್ಲವೇ ಇಲ್ಲ. ರಾವಣರು ಬೀದಿ ಬೀದಿಯಲ್ಲಿ ಇದ್ದಾರೆ. ಅಂತಹ ರಾಮಾಯಣವನ್ನು ನಾನೇ ಬರೆದಿರತಕ್ಕಂಥದ್ದನ್ನು 47 ಸೆಕೆಂಡುಗಳಲ್ಲಿ ಹೇಳುತ್ತೇನೆ. ಅಂಗ-ವಂಗ-ಕಳಿಂಗ -ಕಾಶ್ಮೀರ-ಕಾಂಬೋಲ-ದ್ರವಿಡ-ದ್ರಾವಿಡ-ಪುಳಿಂದ-ಮಾಗಧ-ಮಾಳವ-ಘೂರ್ಜರ-ಬರ್ಬರ-ತೆಂಕಣ-ಕೈಕೇಯ -ಪಾಂಡ್ಯ-ಚೋಳ, ಇಂಥಪ್ಪ ಚಪ್ಪನ್ನೈವತ್ತಾರು ದೇಶಗಳನ್ನಾಳುವ ಉಪ್ಪರಿಗೆಯಂತಿರ್ಪು 26 ಯೋಜನಾ ವಿಸ್ತೀರ್ಣವುಳ್ಳ ಅಯೋಧ್ಯಾ ಪಟ್ಟಣಕ್ಕೆ ಅರಸನಾದ ಧರಣೀಕುಲ- ಸಾರ್ವಭೌಮ ಮುರಹರಿ ಮಾದೇವ ನರಹರಿ ನಾರಾಯಣ ಕರದುಹ್ಲಾದಿ ಅಲ್ಲ:ಪ್ರಭಾವ ನಾಗಸುರಲೋಕವಾಗಿ ಭೀಕರಗೊಳಿಸಿ ಬೇಕಾದ ಸುರನಾರಿಯರ ಕರಪಿಡಿದು ಸೌಖ್ಯಪಡಿಸುದುದಕ್ಕಾಗಿ ಒಂದು ಸಿಕಂದರನ ಉರವಣಿಗೆಯನ್ನು ತಾಳಲಾರದೆ ಈ ಭೂಲೋಕದ ಸುತ ಮಹಾರಾಜನ ಪತ್ನಿಯಾದ ಕೌಸಲ್ಯಾದೇವಿಯ ಗರ್ಭದಲ್ಲಿ ನಾಮಾಂಕಿತ ವಹಿಸಿ, ಲೋಕಪಾವನಿಯಾದ ಜಾನಕಿಯ ಕರಮಿಡಿದು ಪಿತೃವಾಕ್ಯದಿಂದ ಕಾನನಕ್ಕೆ ತೆರಳಲು, ತಳನು ಇಳಿಸುತ ಎಂಬ ವನಕ್ಕೆ ಕರೆದೊಯ್ಯಲು ಪಂಕಜಾಂಬಕನಾದ ರಾಮ ಅಸುರನ ಜಿಂಕೆಗೆ ಶಂಕೆಯಿಲ್ಲದೆ ಕಪಿಘಟಕದೊಡನೆ ಲಂಕೆಯನ್ನು ಹೊಕ್ಕು ರಕ್ಕಸನನ್ನು ಚಚ್ಚಿ ಚೆಂಡಾಡಿದ ಕೋದಂಡರಾಮ ಹರಿಕಡೆಗೆಭೀಮ, ಮಾರ್ತಾಂಡ ಕುಲಸಾರ್ವಭೌಮ, ಅವನೇ ನಮ್ಮ ಬಿ.ಜೆ.ಪಿ.ಯ ಆದರ್ಶಪುರುಷ ಶ್ರೀರಾಮ. ಅಂದು ನಿಜಲಿಂಗಪ್ಪ, ಇಂದು ಪಟೇಲ್ ಜ. ಹಾಲಪ್ಪ ಮುಂದೆ ಯಡಿಯೂರಪ್ಪ", ನಮಸ್ಕಾರ.

+ ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ಈ ಸದನದ ನಾಯಕರೇ, ಮಾನ್ಯ ವಿರೋಧಪಕ್ಷದ ನಾಯಕರೇ, ಎಲ್ಲಾ ಮಂತ್ರಿಮಂಡಲದ ಸದಸ್ಯರೇ ಹಾಗೂ ಎಲ್ಲಾ ಪಕ್ಷದ ಶಾಸಕಾಂಗ ಮಿತ್ರರೇ, ಸರ್ಕಾರಿ ಅಧಿಕಾರಿ ಮಿತ್ರರೇ, ಪತ್ರಕರ್ತರೇ, ಸನ್ಮಾನ್ಯ ಅಧ್ಯಕ್ಷರೆ, ಈ ಸದನಕ್ಕೆ ನಾನು ಎರಡು ಬಾರಿ ಆಯ್ಕೆ ಆಗಿದ್ದೇನೆ. ಒಂದು ಸಾರಿ ನಾನು ಆಡಳಿತ ಪಕ್ಷದಲ್ಲಿದ್ದು, ಈ ರಾಜ್ಯದ ಆಡಳಿತವನ್ನು ನಡೆಸುವಂತಹ ಸಂದರ್ಭದಲ್ಲಿ ಕನ್ನಡಿಗರ ಹಿತವನ್ನು ಕಾಪಾಡುವಂಥಾದ್ದರ ಬಗ್ಗೆ ಚಿಂತನೆ ಮಾಡುವಂಥಾದ್ದು ಸರ್ವೆಸಾಮಾನ್ಯವಾಗಿದೆ. ನಮ್ಮ ರಾಜ್ಯದ ಜನರ ಏಳಿಗೆಗಾಗಿ ಅವರ ಉದ್ಧಾರಕ್ಕಾಗಿ ದುಡಿಯುವಂಥಾದ್ದು ನಮ್ಮ ಕರ್ತವ್ಯವೆಂದು ನಾನು ಭಾವಿಸಿದ್ದೇನೆ. ನನಗೆ ನನ್ನ ಕ್ಷೇತ್ರದ ಜನರು ಅಧಿಕಾರವನ್ನು ಕೊಟ್ಟಿರುವಂಥಾ ಸಂದರ್ಭದಲ್ಲಿ ನಾನು ಆತ್ಮವಿಶ್ವಾಸದಿಂದ ಕನ್ನಡಿಗರಿಗಾಗಿ ದುಡಿಯುವಂತಹ ಅವಕಾಶವನ್ನು ಕಲ್ಪಿಸಿದಂತಹ ಅವರಿಗೆ ಈ ವೇದಿಕೆಯ ಮೂಲಕ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಆದರೆ ಅವರು ಮತ್ತೊಮ್ಮೆ ನನ್ನನ್ನು ಆರಿಸಿ ಕಳುಹಿಸಿದ ನಂತರ ಈ ಸದನವನ್ನು ಪ್ರವೇಶಿಸಿದಂತಹ ಸಂದರ್ಭದಲ್ಲಿ ನಾನು ವಿರೋಧಪಕ್ಷದ ಸದಸ್ಯನಾಗಿ ಕರ್ತವ್ಯವನ್ನು ನಿರ್ವಹಿಸುವಂತಹ ಅವಕಾಶವನ್ನು ನನ್ನ ಮತದಾರರು ಮಾಡಿಕೊಟ್ಟರು. ಆದರೆ ಇಂತಹ ಸಂದರ್ಭದಲ್ಲಿ

ವಿರೋಧಪಕ್ಷದಲ್ಲಿದ್ದು ನನ್ನ ಕರ್ತವ್ಯ ಏನೆಂದು ಅರಿತುಕೊಳ್ಳುವಂತಹ ವಿಚಾರವನ್ನು ತಾವು ಈ ಪೀಠದಿಂದ ತಿಳಿಸಿದ್ದೀರೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದರಲ್ಲೂ ಸಾಕಷ್ಟು ಬಾರಿ ನನಗೆ ಅಷ್ಟು ಸ್ವಚ್ಛವಾದಂತಹ ಕನ್ನಡ ಬರದಿದ್ದರೂ ಸಹ ತಾವು ಅನೇಕ ಸಂದರ್ಭದಲ್ಲಿ ಮಾತನಾಡುವಂಥಾದ್ದರ ಬಗ್ಗೆ, ಮತ್ತೆ ವಿಷಯಗಳನ್ನು ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ ನನಗೆ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹವನ್ನು ಕೊಡುವುದರ ಜೊತೆಗೆ ಈ ನಮ್ಮ ನಾಡಿನ ಭಾಷೆಯಾದಂತಹ ಕನ್ನಡ ಭಾಷೆಯನ್ನು ಬಳಸುವುದರ ಬಗ್ಗೆ ನನಗೆ ತಾವು ಆ ಶಕ್ತಿಯನ್ನು ಕೊಟ್ಟಿದ್ದೀರಿ. ತಾವು ಈ ಸಭೆಯ ಅಧ್ಯಕ್ಷರಾಗಿ ನನಗೆ ಆ ಪ್ರೋತ್ಸಾಹ ನೀಡಿದ್ದಕ್ಕಾಗಿ ಹಾಗೂ ಈ ಸದನವನ್ನು ಬಹಳ ಚಾಣಾಕ್ಷತನದಿಂದ ಉತ್ತಮ ರೀತಿಯಲ್ಲಿ ಶಾಸಕರ ಕರ್ತವ್ಯಕ್ಕೆ ಯಾವುದೇ ಲೋಪ ಬರದಂತೆ ನಡೆಸಿದ್ದೀರಿ. ಅದರಲ್ಲೂ ವಿಶೇಷವಾಗಿ ನನಗೆ ಅವಕಾಶವನ್ನು ತಾವು ಕೊಟ್ಟಿದ್ದಕ್ಕಾಗಿ ತಮಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಇದರ ಜೊತೆಗೆ ಇವತ್ತು ಆಡಳಿತ ಪಕ್ಷವೇ ಇರಬಹುದು, ವಿರೋಧಪಕ್ಷವೇ ಇರಬಹುದು, ಇವತ್ತು ಅಧಿಕಾರವನ್ನು ಹಂಚಿಕೊಳ್ಳುವಂತಹ ಕಾಲ ಬಂದಿದೆ. ಅಧಿಕಾರದ ವಿಕೇಂದ್ರಿಕರಣದ ವ್ಯವಸ್ಥೆಯಲ್ಲಿ ಅದು ಹಿಂದುಳಿದ ವರ್ಗವಿರಬಹುದು, ಅಲ್ಪಸಂಖ್ಯಾತರು ಇರಬಹುದು. ಈ ಅಧಿಕಾರ ವಿಕೇಂದ್ರಿಕರಣದ ವ್ಯವಸ್ಥೆಯಲ್ಲಿ ನಾವು ಅಧಿಕಾರವನ್ನು ಹಂಚಿಕೊಳ್ಳುವಂತಹ ಈ ಸಂದರ್ಭದಲ್ಲಿ ನಾವು ಈ ಸದನವನ್ನು ಪ್ರವೇಶ ಮಾಡಿದಂತಹ ಸಂದರ್ಭದಲ್ಲಿ ನಮ್ಮದೇ ಆದಂತಹ ಭಾಷೆಯನ್ನು ಬಳಸುವುದರ ಬಗ್ಗೆ, ಉಳಿಸುವಂಥಾದ್ದರ ಬಗ್ಗೆ ಮಾತನಾಡುವಂಥಾದ್ದರ ಬಗ್ಗೆ ಏನು ಕಾರ್ಯಕ್ರಮಗಳನ್ನು ರೂಪಿಸಬೇಕೆಂಬುದು ಸರ್ಕಾರಗಳ ಕರ್ತವ್ಯಗಳಾಗಿರುತ್ತವೆ. ಆ ದೃಷ್ಟಿಯಿಂದ ಕನ್ನಡಭಾಷೆಯನ್ನು ಆಡದೇ ಇರುವಂತಹ ವ್ಯಕ್ತಿಗಳಿಗೆ ಆ ಭಾಷೆಯನ್ನು ಬಳಸುವುದರ ಬಗ್ಗೆ, ಆ ಭಾಷೆಯನ್ನು ಕಲಿಯುವುದರ ಬಗ್ಗೆ ಹೆಚ್ಚಿನ ಪ್ರೋತ್ಸಾಹ ಅದರಲ್ಲೂ ವಿಶೇಷವಾಗಿ ಅಲ್ಪಸಂಖ್ಯಾತರಿಗೆ ಈ ಅವಕಾಶವನ್ನು ಕಲ್ಪಿಸುವುದರ ಬಗ್ಗೆ ಮುಂದೆ ಬರುವಂತಹ ಸರ್ಕಾರಗಳು, ಹಿಂದೆ ಇದ್ದಂತಹ ಸರ್ಕಾರಗಳು ಆಗಲಿ ಪ್ರೋತ್ಸಾಹ ಕೊಟ್ಟಿಲ್ಲವೆನ್ನುವಂಥಾದ್ದರ ಬಗ್ಗೆ ನಾನು ವಾದ ಮಾಡುತ್ತೇನೆ. ನಾನು ಈ ವಿಚಾರವನ್ನು ಅಧ್ಯಕ್ಷರ ಹತ್ತಿರ ಅನೇಕ ಸಂದರ್ಭಗಳಲ್ಲಿ ಪ್ರಸ್ತಾಪ ಮಾಡಿದ್ದೇನೆ. ಆದರೆ ಈ ವಿಚಾರವಾಗಿ ಮುಂದೆ ಆಯ್ಕೆಯಾಗಿ ಬರುವಂತಹ ಶಾಸಕರಾಗಲಿ, ಸರ್ಕಾರವಾಗಲಿ, ನಮ್ಮದೇ ಆದಂತಹ ಮಾತೃಭಾಷೆಗೆ ಪ್ರೋತ್ಸಾಹ ಕೊಡುವಂತಹದ್ದರ ಬಗ್ಗೆ, ಮತ್ತು ಅಲ್ಪಸಂಖ್ಯಾತರಲ್ಲಿ ಈ ಭಾಷೆಯನ್ನು ಬಳಸುವಂಥಾದ್ದರ ಬಗ್ಗೆ ಮಾತು ಕಲಿಸುವಂಥಾದ್ದರ ಬಗ್ಗೆ ಪ್ರೋತ್ಸಾಹ ಕೊಡುವಂತೆ ನಾನು ಮುಸ್ಲಿಂ ಭಾಂದವರ ಪರವಾಗಿ ವಿಶೇಷವಾಗಿ ಅದರಲ್ಲೂ, ಮತೀಯ ಅಲ್ಪಸಂಖ್ಯಾತರ ಬಗ್ಗೆ ಈ ಸದನದ ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ವಿನಂತಿಸಿಕೊಂಡು ನಮಗೆ ವಿರೋಧಪಕ್ಷದಲ್ಲಿ ಇರುವಂತಹ ಅವಕಾಶವನ್ನು ಕಲ್ಪಿಸಿದಂತಹ ಮತದಾರರಿಗೆ, ಹಾಗೂ ನಮ್ಮ ವಿರೋಧಪಕ್ಷದ ನಾಯಕರಾದಂತಹ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ನಾವು ಅನೇಕ ವಿಚಾರಗಳನ್ನು ವಿರೋಧಪಕ್ಷದಲ್ಲಿದ್ದುಕೊಂಡು ಯಾವ ರೀತಿಯಲ್ಲಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕೆಂಬ ವಿಚಾರಗಳನ್ನು ಹೆಚ್ಚಿನ ರೀತಿಯಲ್ಲಿ ತಿಳಿದುಕೊಂಡಿದ್ದೇವೆ. ಇನ್ನು ಮುಂದಿನ ದಿವಸಗಳಲ್ಲಿ ಆಡಳಿತ ಪಕ್ಷದಲ್ಲಿ ಬರುವಂಥಾದ್ದು ಆಗಲಿ, ವಿರೋಧ ಪಕ್ಷದಲ್ಲಿ ಬರುವುದಾಗಲಿ ಅದನ್ನು ಸಾರ್ವಜನಿಕರು ತೀರ್ಮಾನ ಮಾಡುವಂಥಾದ್ದು, ನಮ್ಮ

ಮತದಾರರು ತೀರ್ಮಾನ ಮಾಡುವಂಥಾದ್ದು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನಗೆ ಮೊದಲು ಅವಕಾಶವನ್ನು ಕೊಟ್ಟು ಹೆಚ್ಚಿನ ರೀತಿಯಲ್ಲಿ ಕನ್ನಡದ ಬಳಕೆಯ ಬಗ್ಗೆ ನಮ್ಮ ರಾಜ್ಯದ ಏಳಿಗೆಯ ಬಗ್ಗೆ ವಿಚಾರಗಳನ್ನು ಚರ್ಚೆ ಮಾಡುವಂಥಾದ್ದರ ಬಗ್ಗೆ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮತ್ತೊಮ್ಮೆ ನಿಮ್ಮನ್ನು ಅಭಿನಂದಿಸುತ್ತೇನೆ. ಇನ್ನು ನಮ್ಮ ವಿರೋಧಪಕ್ಷದ ನಾಯಕರು ಸಹ ಅನೇಕ ಸಂದರ್ಭಗಳಲ್ಲಿ ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರ. ಅವರಿಗೂ ಸಹ ನಾನು ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದರ ಜೊತೆಗೆ ನಾವು ವಿರೋಧಪಕ್ಷದಲ್ಲಿದ್ದರೂ ಸಹ ಮಾನ್ಯ ಮುಖ್ಯಮಂತ್ರಿಯವರ ಬಗ್ಗೆ ಎರಡು ಮಾತುಗಳನ್ನು ಆಡಲೇಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ನಿಷ್ಪಕ್ಷಪಾತವಾಗಿ ಅನೇಕ ಸದಸ್ಯರುಗಳಿಗೆ ಸಹಕಾರವನ್ನು ಕೊಟ್ಟಿದ್ದಾರೆ. ಅವರು ಸಹಕಾರ ಕೊಡಲಿಲ್ಲವೆನ್ನುವಂತಹ ಮಾತನ್ನು ಹೇಳಿದರೆ ತಪ್ಪಾಗುತ್ತದೆ, ಏಕೆಂದರೆ ಈ ರಾಜ್ಯದ ಧಣಿಯಾಗಿ, ಈ ರಾಜ್ಯದ ಜನರ ಕಷ್ಟ ಸುಖಗಳನ್ನು ಯಾವುದೇ ಶಾಸಕರು ಅವರ ಬಳಿ ಹೇಳಿಕೊಂಡಾಗ ಅವರು ಈ ವಿಚಾರಗಳನ್ನು ತಿಳಿದುಕೊಂಡು ಅದಕ್ಕೆ ಪರಿಹಾರವನ್ನು ಒದಗಿಸಿಕೊಟ್ಟಿರುವಂತಹ ಸಂದರ್ಭದಲ್ಲಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಾವು ಸಹ ಈ ಸಭೆಯ ಕೊನೆಯ ಹಂತದಲ್ಲಿ ಈ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಲು ಅವಕಾಶವನ್ನು ನನಗೆ ಕೊಟ್ಟಿದ್ದಕ್ಕಾಗಿ ಮತ್ತೊಮ್ಮೆ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಮಂಜುನಾಥ್ ಚೆನ್ನಪ್ಪ ಕುನ್ನೂರ್ (ಶಿಗ್ಗಾಂವ್) : ಮಾನ್ಯ ಅಧ್ಯಕ್ಷರೆ, ತಾವು ಕಳೆದ ಐದು ವರ್ಷಗಳಿಂದ ನಮಗೆ ಮಾತನಾಡಲು ಅವಕಾಶಗಳನ್ನು ಕೊಟ್ಟಿದ್ದಕ್ಕಾಗಿ ಅಭಿನಂದನೆಯನ್ನು ಸಲ್ಲಿಸುತ್ತಾ, ನಾನು ಈ ಸಂದರ್ಭದಲ್ಲಿ ತಮ್ಮ ಸಿಂಹಘರ್ಜನೆಯನ್ನು ಎಂದೂ ಕೂಡ ಮರೆಯುವುದಕ್ಕಾಗು ವುದಿಲ್ಲವೆನ್ನುವಂತಹದ್ದನ್ನು ಮೆಲುಕು ಹಾಕಬೇಕಾಗಿದೆ. ಈ ವಿಧಾನಸಭೆಯ ನಡವಳಿಕೆಗಳನ್ನು ತಾವು ನಡೆಸಿಕೊಂಡು ಹೋಗುವಾಗ ಇದು ಒಂದು ಶಿಸ್ತು ಎಂದು ತಾವು ಮಾಡಿಕೊಂಡು ಬಂದಿದ್ದೀರಿ ಎಂದು ತಿಳಿದುಕೊಂಡು ನಾನು ಹೇಳಲಿಚ್ಛಿಸುತ್ತೇನೆ. ತಾವು ನನಗೆ ಒಮ್ಮೆ ಎನ್.ಐ.ಆರ್.ಡಿ. (ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಡೆವಲಪ್‌ಮೆಂಟ್) ಟ್ರೈನಿಂಗ್‌ಗೆ ಈ ಸದನದಿಂದ ಐದು ಜನರನ್ನು ಆಯ್ಕೆ ಮಾಡಿ ಕಳುಹಿಸಿ ಕೊಟ್ಟಿದ್ದೀರಿ. ಆಗ ಕರ್ನಾಟಕ ರಾಜ್ಯ ವಿಧಾನಸಭೆಯಿಂದ ಇದಕ್ಕೆ ಹೈದರಬಾದ್‌ನಲ್ಲಿ ಹಾಜರಾದಂತಹ ಸಂದರ್ಭದಲ್ಲಿ ಅಖಿಲ ಭಾರತದಿಂದ ಅನೇಕ ಸದಸ್ಯರುಗಳು ಭಾಗಿಯಾಗಿದ್ದರು. ಈ ಸಂದರ್ಭದಲ್ಲಿ ನಮ್ಮ ರಾಜ್ಯದ ಹಿಂದಿನ ಮುಖ್ಯಮಂತ್ರಿಯವರು, ಪ್ರಧಾನಮಂತ್ರಿಯವರು ಆದಂತಹ ಶ್ರೀಮಾನ್ ದೇವೇಗೌಡರು ಬಂದಿದ್ದರು. ನಾನು ಆ ಟ್ರೈನಿಂಗ್‌ಗೆ ಕರ್ನಾಟಕ ವಿಧಾನಸಭೆಯಿಂದ ಹೋಗಿದ್ದಾಗ, ಅವರು ಎಲ್ಲರೂ ನನ್ನನ್ನು ದೇವೇಗೌಡರು ಎಂದು ಕರೆಯುತ್ತಿದ್ದರು. ಆಗ ನಾನು ಕಾಂಗ್ರೆಸ್ ಪಕ್ಷದ ಶಾಸಕನೆಂದು ಹೇಳಿದರೂ ಕೂಡ ಅವರು ಏನೇ ಆದರೂ ಈಗ ನಿಮ್ಮ ರಾಜ್ಯದವರೇ, ಪ್ರಧಾನಮಂತ್ರಿಯಾಗಿದ್ದಾರೆ. ನೀವು ನಮಗೆ ಒಂದು ಪಾರ್ಟಿ ಕೊಡಬೇಕೆಂದು ವಿನಂತಿ ಮಾಡಿಕೊಂಡರು. ಆ ಸಂದರ್ಭದಲ್ಲಿ ನಾನು ಕೂಡ ನಮ್ಮ ಕನ್ನಡಿಗರ ಪರವಾಗಿ, ಈ ರಾಜ್ಯದ ಅಭಿಮಾನದಿಂದ ಅಲ್ಲಿರುವಂತಹ ಎಲ್ಲಾ ರಾಜ್ಯಗಳ ಸದಸ್ಯರುಗಳಿಗೆ ಒಂದು ಚಿಕ್ಕ ಟೀ ಪಾರ್ಟಿಯನ್ನು ಕೊಟ್ಟಿದ್ದು ನನಗೆ ಈಗ ನೆನಪಿಗೆ ಬರುತ್ತಿದೆ. ನನಗೆ ಇಂತಹ ಅವಕಾಶ

ಬರಬೇಕಾದರೆ ಅದು ತಮ್ಮಿಂದ ಸಾಧ್ಯವಾಯಿತೆಂದು ನಾನು ತಿಳಿದುಕೊಂಡಿದ್ದೇನೆ. ತಾವು ಇವತ್ತು ಯಾವ ರೀತಿಯಲ್ಲಿ ಮಾರ್ಗದರ್ಶನ ಮಾಡುತ್ತಿದ್ದೀರಿ. ತಾವು ಸಭೆಯನ್ನು ಗಾಂಭೀರ್ಯವಾದ ರೀತಿಯಲ್ಲಿ ನಡೆಸುವಂತಹ ಸನ್ನಿವೇಶಗಳನ್ನು ನಾನು ಕಳೆದ ಹತ್ತು ವರ್ಷಗಳಲ್ಲಿ ಮರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ. ನಮ್ಮ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ನಿಜಕ್ಕೂ ನನ್ನನ್ನು ಪ್ರೀತಿಸುವಂಥಾದ್ದು ನೋಡಿದರೆ ಸಂತೋಷವಾಗುತ್ತದೆ. ಅವರು ವಿರೋಧಪಕ್ಷದ ನಾಯಕರಾಗಿ ಅಧಿವೇಶನ ಹತ್ತು ಗಂಟೆಗೆ ಪ್ರಾರಂಭವಾಗುತ್ತದೆಂದರೆ ಇವರು ಒಂದು ಗಂಟೆ ಮುಂಚಿತವಾಗಿ ಬರುತ್ತಾರೆ, ಮತ್ತೆ ಸಭೆಯು 8 ಗಂಟೆಗೆ ಮುಗಿಯುತ್ತದೆಂದರೆ 9ಗಂಟೆಗೆ ಅವರು ಹೋಗುತ್ತಾರೆ. ನಾನು ಹತ್ತು ವರ್ಷಗಳು ಇಲ್ಲಿ ವಿರೋಧಪಕ್ಷದ ನಾಯಕರನ್ನು ಈ ಸ್ಥಾನದಲ್ಲಿ ಕುಳಿತು ನೋಡಿದ್ದೇನೆ. ಮಾನ್ಯ ಖರ್ಗೆಯವರು ಅತ್ಯುತ್ತಮವಾಗಿ ತಮ್ಮ ಕರ್ತವ್ಯವನ್ನು ಮಾಡಿದ್ದಾರೆ. ಕೆಲವು ಸಲ ನಮ್ಮನ್ನು ಕಾಣಲೆಂದು ಜನರು ಬಂದಿದ್ದಾರೆಂದು ಹೊರಗೆ ಹೋದಾಗ, ಮತ್ತೆ ಇಲ್ಲಿ ಬಂದಾಗ ಅವರನ್ನು ನೋಡಿದ ತಕ್ಷಣ ನಮಗೆ ಭಯವಾಗುತ್ತಿತ್ತು. ಏಕೆಂದರೆ ನಾನು ಇಲ್ಲಿ ಬರಬೇಕು. ಅದರಲ್ಲೂ ನನಗೆ ಮುಖ್ಯ ಸಚೇತಕನಾಗಿ ಮಾಡಿ ಜವಾಬ್ದಾರಿಯನ್ನು ಕೊಟ್ಟು ಅನೇಕ ಸಂದರ್ಭಗಳಲ್ಲಿ ಮಾರ್ಗದರ್ಶನವನ್ನು ಮಾಡಿದ್ದಾರೆ. ಇಲ್ಲಿ ಅವರು ಇರುವುದಕ್ಕೆ, ಇವತ್ತು ಈ ಸದನದಲ್ಲಿ ಎದ್ದು ಐದು ವರ್ಷಗಳಲ್ಲಿ ಮಾತನಾಡುವುದಕ್ಕೆ ಆಗದಿದ್ದರೂ ಕೂಡ ಮಾತನಾಡುವಂತಹ ಸಾಮರ್ಥ್ಯವನ್ನು ಕಂಡುಕೊಂಡಿದ್ದೇನೆ ಎನ್ನುವಂತಹ ಮಾತನ್ನು ಹೇಳಬೇಕಾಗುತ್ತದೆ. ಇನ್ನು ನಮ್ಮ ಹಿರಿಯ ಸದಸ್ಯರಾದಂತಹ ಮಾನ್ಯ ವಾಟಾಳ್‌ನಾಗರಾಜ್‌ರವರದು ಇತಿಹಾಸ ಪುಸ್ತಕದಲ್ಲಿ ಚರಿತ್ರೆಯನ್ನು ಬರೆಯುವಂತಹ ಅವಶ್ಯಕತೆ ಇದೆ. ಅವರು ಆಗಲೇ ಹೇಳಿದಂತೆ ಅನೇಕ ಹಿರಿಯರ ಬಗ್ಗೆ ಹೇಳಿದರು. ಅದೇ ರೀತಿಯಾಗಿ ಇವರು ಕೂಡ ಇರುವಂಥವರು ಎನ್ನುವಂಥಾದ್ದನ್ನು ಹೇಳಲಿಚ್ಛಿಸುತ್ತೇನೆ. ಇನ್ನು ಮಾನ್ಯ ಹೆಚ್.ಎನ್. ನಂಜೇಗೌಡರು ಮಾಡಿದಂತಹ ಭಾಷಣಗಳನ್ನು ನಾನು ಸ್ವಲ್ಪವೇ ಕೇಳಿದ್ದರೂ ಕೂಡ ಅವರು ಎಂತಹ ಸಂಸದೀಯ ಪಟುಗಳು ಎನ್ನುವುದರ ಬಗ್ಗೆ ನಾವು ಕಿರಿಯರಾದಂಥವರು ಆಲೋಚನೆಯನ್ನು ಮಾಡಬೇಕಾಗುತ್ತದೆ. ಇನ್ನು ನಮ್ಮ ಮಾಜಿ ಮುಖ್ಯಮಂತ್ರಿಯಾದಂತಹ ಶ್ರೀ ಎಂ. ವೀರಪ್ಪಮೊಯಿಲಿಯವರು ಹಾಗೂ ಕಾಗೋಡು ತಿಮ್ಮಪ್ಪನವರು ಈ ಸದನದಲ್ಲಿ ಹೆಚ್ಚಿನ ಬೆಳಕು ಚೆಲ್ಲಿ ನಮಗೆ ಮಾರ್ಗದರ್ಶಕರಾಗಿದ್ದಾರೆ. ಅವರೆಲ್ಲರಿಗೂ ಕೂಡ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇನ್ನು ಈ ಸರ್ಕಾರದ ಪರವಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕೂಡ ನಮಗೆ ನಿಷ್ಪಕ್ಷಪಾತವಾಗಿ ಅನೇಕ ಸಂದರ್ಭಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಟ್ಟಿದ್ದಾರೆ. ಅದರಲ್ಲೂ ವಿಶೇಷವಾಗಿ ಜಿಲ್ಲಾ ಪುನರ್ ವಿಂಗಡಣೆ ಮಾಡಿದಂತಹ ಸಂದರ್ಭದಲ್ಲಿ ಹಾವೇರಿಯನ್ನು ಜಿಲ್ಲೆಯನ್ನಾಗಿ ಮಾಡಿಕೊಟ್ಟಿದ್ದಾರೆ. ನನ್ನ ತಾಲ್ಲೂಕನ್ನು ಧಾರವಾಡಕ್ಕೆ ಸೇರಿಸುವಂತಹದ್ದನ್ನು ತಪ್ಪಿಸಿ ನಮ್ಮ ಜನರ ಅನಿಸಿಕೆಗೆ ಸ್ಪಂದಿಸಿ ಅವರ ಪಕ್ಷದ ಹಿರಿಯರ ಒತ್ತಡ ಬಂದರೂ ಅದಕ್ಕೆ ಮಣಿಯದೇ ಆ ಭಾಗದ ಜನರ ಮತ್ತು ಶಾಸಕರ ಅನಿಸಿಕೆಗಳನ್ನು ತಿಳಿದುಕೊಂಡು ನಮಗೆ ಹಾವೇರಿಯನ್ನು ಜಿಲ್ಲೆಯನ್ನಾಗಿ ಮಾಡಿಕೊಟ್ಟಿರುವಂಥಾದ್ದನ್ನು ಎಂದೂ ನಮ್ಮ ಜೀವನದಲ್ಲಿ ಮರೆಯುವುದಕ್ಕೆ ಸಾಧ್ಯವಿಲ್ಲವೆಂದು ಹೇಳಲಿಚ್ಛಿಸುತ್ತೇನೆ. ಇನ್ನು ಶಿಕ್ಷಣ ಸಚಿವರಾದ ಶ್ರೀ ಹೆಚ್.ಜಿ. ಗೋವಿಂದೇಗೌಡರು,

ಸಾರಿಗೆ ಸಚಿವರಾದ ಶ್ರೀ ಬಿ.ಎನ್.ಬಚ್ಚೇಗೌಡರು, ಈ ಸರ್ಕಾರದಲ್ಲಿ ಬಹಳ ಉತ್ತಮವಾದಂತಹ ರೀತಿಯಲ್ಲಿ ಕೆಲಸವನ್ನು ಮಾಡಿದ್ದಾರೆ. ನಮ್ಮ ಕ್ಷೇತ್ರಗಳ ಅಭಿವೃದ್ಧಿ ಕೆಲಸಗಳ ಬಗ್ಗೆಯೂ ಸಹಾಯ ಮಾಡಿದ್ದಾರೆ. ಇನ್ನು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾದಂಥ ಶ್ರೀಮಾನ್ ಉದಾಸಿ ಅವರು ಕೂಡ ಪಕ್ಷಪಾತವನ್ನು ಮಾಡದೆ ನಮ್ಮ ಶಿಗ್ಗಾಂವ್-ಸವಣೂರ್-ಬಂಕಾಪುರಕ್ಕೆ ಕುಡಿಯುವ ನೀರಿನ ಸಮಸ್ಯೆ ಬಗ್ಗೆ, ಬಸ್ ಡಿಪೋ ಮಾಡುವುದರ ಬಗ್ಗೆ, ಉತ್ತರ ಕರ್ನಾಟಕದಲ್ಲಿ ಪ್ರತಿಷ್ಠೆಯಾದಂಥ 10ನೇ ಕೆ.ಎಸ್.ಆರ್.ಪಿ. ಬೆಟಾಲಿಯನ್ ಇದನ್ನು ಪ್ರಾರಂಭ ಮಾಡಲಿಕ್ಕೆ, ಹೀಗೆ ಇನ್ನೂ ಹಲವಾರು ಕೆಲಸಗಳಲ್ಲಿ ನಮಗೆ ಅವರು ಸಹಾಯ ಮಾಡಿದ್ದಾರೆ. ಅದನ್ನು ನಾನು ಮರೆಯಲಿಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಅವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇನ್ನು ನಮ್ಮ ಪತ್ರಕರ್ತರು ಸಹ ನಾವು ಯಾವುದೇ ನಿಯಮದಡಿ ಸದನದಲ್ಲಿ ಸ್ವಲ್ಪ ಮಾತನಾಡಿದರೂ ಕೂಡ ಅವರು ಚಾಚೂ ತಪ್ಪದೆ ತಮ್ಮ ಕರ್ತವ್ಯದ ಜೊತೆ ಪತ್ರಿಕೆಗಳಲ್ಲಿ ಬೆಳಕನ್ನು ಚೆಲ್ಲಿ ನಮಗೆ ಹೆಚ್ಚಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಅವರಿಗೂ ಕೂಡ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಸದನದಲ್ಲಿ ನಾವು ಸಣ್ಣವರು ಇದ್ದರೂ ಕೂಡ ಕಲಿಯಲಿಕ್ಕೆ ಸಾಧ್ಯ ಇದೆ. ಅಸಾಧ್ಯ ಎನ್ನತಕ್ಕಂಥದ್ದು ಯಾವುದೂ ಇಲ್ಲ ಎನ್ನುವುದನ್ನು ಇವತ್ತು ಆಲೋಚನೆ ಮಾಡಿ ನೆಪೋಲಿಯನ್ ಬೋನಪಾರ್ಟ್ ಹೇಳಿದಂತೆ ``Impossible is the word found in dictionary of fools". ಆ ಪ್ರಕಾರ ಅಸಾಧ್ಯ ಎನ್ನತಕ್ಕಂಥದ್ದು ಇಲ್ಲ, ಸಾಧ್ಯ ಎನ್ನತಕ್ಕಂಥದ್ದನ್ನು ಈ ಸದನದ ಮುಖಾಂತರ ನಾವು ಕೂಡ ಇವತ್ತು ಕಲಿಯಲಿಕ್ಕೆ ಸಾಧ್ಯವಿದೆ ಮತ್ತು ಕಲಿತುಕೊಂಡಿದ್ದೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಜನತಾದಳ ಪಕ್ಷದ ಶಾಸಕರ ಬಂಧುಗಳು ಹೀಗೆ ನಾವೆಲ್ಲಾ ಐದು ವರ್ಷಗಳಲ್ಲಿ ಅನೇಕ ಸಂದರ್ಭಗಳಲ್ಲಿ ಇಲ್ಲಿ ನಾವೆಲ್ಲ ಒಡನಾಡಿ ಜೀವನವನ್ನು ಇಲ್ಲಿ ನಡೆಸಿಕೊಂಡು ಬಂದಿದ್ದೇವೆ. ಎಲ್ಲರಿಗೂ ವೈಯಕ್ತಿಕವಾಗಿ ಹೃದಯಪೂರ್ವಕವಾಗಿ ಕೃತಜ್ಞತೆಗಳನ್ನು ಸಲ್ಲಿಸಿ ಮತ್ತು ಎಲ್ಲಾ ಹಿರಿಯರಿಗೆ ನಮಸ್ಕರಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಇದೊಂದು ಬೀಳ್ಕೊಡುಗೆ ಕೂಟ, ಆದರೆ ಮೇಲ್ಮನೆಯ ಸದಸ್ಯನಾಗಿರುವುದರಿಂದ ನನಗಂತೂ ಬೀಳ್ಕೊಡುಗೆ ಆಗುವುದಿಲ್ಲ. ಮಾನ್ಯ ಸದಸ್ಯರುಗಳು ಕಳೆದ ಐದು ವರ್ಷಗಳಲ್ಲಿ ಶೂನ್ಯ ವೇಳೆ, ನಿಲುವಳಿ ಸೂಚನೆ, ಗಮನ ಸೆಳೆಯುವ ಸೂಚನೆ ಮುಖಾಂತರ ಮಾಡಿರತಕ್ಕಂಥ ಚರ್ಚೆಗಳು, ಹಲವಾರು ವಿಚಾರಗಳ ಬಗ್ಗೆ ನಾನು ಸಂಸದೀಯ ವ್ಯವಹಾರಗಳ ಸಚಿವನಾಗಿ ಕೆಲವು ಸಂದರ್ಭಗಳಲ್ಲಿ ಹಲವಾರು ಮಂತ್ರಿಗಳ ಪರವಾಗಿ ಸರ್ಕಾರದ ವತಿಯಿಂದ ಭರವಸೆಯನ್ನು ಕೊಟ್ಟಿದ್ದೇನೆ. ಉತ್ತರವನ್ನು ಕೊಟ್ಟಿದ್ದೇನೆ, ಈ ಭರವಸೆಗಳು ಸರ್ಕಾರದಿಂದ ಈಡೇರುವುದಿಲ್ಲ ಎಂದು ಎಲ್ಲಾದರೂ ತಮ್ಮ ಮನಸ್ಸಿಗೆ ಬರುವುದು ಬೇಡ. ಹೊಸ ವಿಧಾನಸಭೆಯಿಂದ ಆರಿಸಿ ಬಂದಂಥ ಪಕ್ಷದ ಸರ್ಕಾರ ಬಂದಾಗ, ಈ ಸಂದರ್ಭದಲ್ಲಿ ಒಂದು 'ಭರವಸೆ ಸಮಿತಿ' ಖಂಡಿತವಾಗಿ ಇರುತ್ತದೆ. ಆ ಸಮಿತಿಯ ಮುಖಾಂತರ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿರತಕ್ಕಂಥ ಸಂಸದೀಯ ಅಧಿಕಾರ ಈ ಸದನಕ್ಕೆ ಇರುವುದರಿಂದ ಬಹುಶಃ ಈ ಕೆಲಸವನ್ನು ನಾವು ನೀವು ಎಲ್ಲರೂ ಕೂಡ ಮಾಡಿಸಿಕೊಳ್ಳುವುದಕ್ಕೆ ಸಾಧ್ಯತೆ ಇದೆ. ಇದೇ ಸಂದರ್ಭದಲ್ಲಿ ಈ ಸದನಕ್ಕೆ ಹೊಸದಾಗಿ ಪಾದಾರ್ಪಣೆ ಮಾಡಿದವರಿಗೆ ಕಳೆದ ಐದು ವರ್ಷಗಳಲ್ಲಿ

ಹೆಚ್ಚಿನ ಅವಕಾಶಗಳನ್ನು ಮಾನ್ಯ ಅಧ್ಯಕ್ಷರು ಕೊಟ್ಟಿರುವುದನ್ನು ನಾವು ನೀವೆಲ್ಲರೂ ಗಮನಿಸಿದ್ದೇವೆ. ಮುಂದಿನ ಸಾಲಿನಲ್ಲಿ ಕುಳಿತಿರತಕ್ಕಂಥವರು ಸ್ವಲ್ಪ ಮಟ್ಟಿಗೆ ಹೆಚ್ಚಿನ ಸಮಯವನ್ನು ತೆಗೆದುಕೊಂಡರೂ ಕೂಡ ಹಿಂದಿನ ಸಾಲಿನಲ್ಲಿ ಕುಳಿತಿರತಕ್ಕಂಥ ಪ್ರಥಮವಾಗಿ ಈ ಸದನಕ್ಕೆ ಬಂದಿರತಕ್ಕಂಥ ಶಾಸಕರು, ಸಂಸದೀಯ ವ್ಯವಹಾರಗಳನ್ನು ಸಂಪೂರ್ಣವಾಗಿ ಕಲಿಯಬೇಕು, ಚರ್ಚೆಯಲ್ಲಿ ಬಹಳ ಸಕ್ರಿಯವಾಗಿ ಭಾಗವಹಿಸಬೇಕು, ಸಂಸದೀಯ ನಿಯಮಗಳು ಮತ್ತು ಚೌಕಟ್ಟಿನೊಳಗೆ ಹೆಚ್ಚಿನ ಆಸಕ್ತಿಯನ್ನು ತಾಳಬೇಕು ಅದರ ಮುಖಾಂತರ ಉತ್ತಮವಾದ ಸಂಸದೀಯಪಟು ಬರಲಿ ಎನ್ನುವ ಚಿಂತನೆಯಿಂದ ಮಾನ್ಯ ಸಭಾಧ್ಯಕ್ಷರು ಕಳೆದ ಐದು ವರ್ಷಗಳಲ್ಲಿ ಬಹಳಷ್ಟು ಹೆಚ್ಚಿನ ಅವಕಾಶವನ್ನು ಪ್ರಥಮವಾಗಿ ಆಯ್ಕೆಯಾಗಿ ಬಂದಿರತಕ್ಕಂಥ ಶಾಸಕರಿಗೆ ಕೊಡುವುದರ ಮೂಲಕ ನಿಮ್ಮ ವಿಚಾರಧಾರೆಯನ್ನು ಸಂಸದೀಯ ವಿಚಾರಗಳಲ್ಲಿ ಇರತಕ್ಕಂಥ ನಿಮ್ಮ ಆಸಕ್ತಿಯನ್ನು ಪ್ರಚೋದಿಸುವಲ್ಲಿ ಮಾನ್ಯ ಸಭಾಧ್ಯಕ್ಷರು ಹೆಚ್ಚಿನ ಸಹಾಯವನ್ನು ಮಾಡಿದ್ದಾರೆಂದು ಈ ಸಂದರ್ಭದಲ್ಲಿ ಹೇಳಿದರೆ ಅದು ಖಂಡಿತವಾಗಿ ಅತಿಶಯೋಕ್ತಿಯಾಗಲಾರದು. ಕಳೆದ ಐದು ವರ್ಷಗಳಲ್ಲಿ ನಾವು ಹಲವಾರು ಅಧಿವೇಶನದಲ್ಲಿ ಗಂಭೀರವಾಗಿರತಕ್ಕಂಥ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ. ಕ್ಲಿಷ್ಟವಾಗಿರತಕ್ಕಂಥ ಸಮಸ್ಯೆಗಳು ಬಂದಾಗ, ನಮ್ಮ ಆಡಳಿತದ ಮೇಲೆ ತಮ್ಮ ಮಾತಿನ ಚಾವಟಿಯನ್ನು ಎದುರಿಸುವಾಗಲೂ ನಾವು ಸಂಯಮವನ್ನು ಕಳೆದುಕೊಳ್ಳಲಿಲ್ಲ. ಪ್ರಸ್ತಾವ ಮಾಡಿರತಕ್ಕಂಥ ವಿಚಾರಗಳಲ್ಲಿ ಎಲ್ಲಾದರೂ ಆಡಳಿತದಲ್ಲಿ ಲೋಪ ಆಗಿದ್ದರೆ ಸ್ವಲ್ಪ ಮಟ್ಟಿಗೆ ಅದನ್ನು ಸರಿಪಡಿಸುವುದಕ್ಕೆ ನೀವು ಕೊಟ್ಟಿರತಕ್ಕಂಥ ಯಾವುದೇ ಸಲಹೆಗಳನ್ನು ಆಡಳಿತ ಪಕ್ಷ ಯಾವಾಗಲೂ ಸ್ವೀಕಾರ ಮಾಡುತ್ತಾ ಬಂದಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅದರ ಜೊತೆಯಲ್ಲಿ ನಮ್ಮ ಸಭಾಧ್ಯಕ್ಷರು ವಿಧಾನಸಭೆಯನ್ನು ಕಳೆದ ಐದು ವರ್ಷಗಳಿಂದ ನಡೆಸಿಕೊಂಡು ಬಂದಿರತಕ್ಕಂಥ ರೀತಿಯನ್ನು ನೋಡಿದಾಗ ಇಡೀ ರಾಷ್ಟ್ರಕ್ಕೆ ಮಾದರಿಯಾಗತಕ್ಕಂಥ ವಿಧಾನಸಭೆ, ಕರ್ನಾಟಕ ವಿಧಾನಸಭೆ ಎಂದು ಹೇಳುವಷ್ಟರಮಟ್ಟಿಗೆ ನಾವು ನಮ್ಮ ಚರ್ಚೆಯನ್ನು ಮೇಲ್ಮಟ್ಟಕ್ಕೆ ತೆಗೆದುಕೊಂಡು ಹೋಗಿದ್ದೇವೆಂದು ಹೇಳಿದರೂ ಕೂಡ ಅತಿಶಯೋಕ್ತಿಯಲ್ಲ. ಆದ್ದರಿಂದ ಇಂಥ ಒಂದು ಸಂದರ್ಭದಲ್ಲಿ ಮಾನ್ಯ ಸಭಾಧ್ಯಕ್ಷರ ಮಾರ್ಗದರ್ಶನದಲ್ಲಿ ಹತ್ತಾರು ವಿಚಾರಗಳು ಬಂದಾಗಲೂ ಕೂಡ ಹತ್ತಾರು ವಿಚಾರಗಳು ಎಷ್ಟೇ ಕ್ಲಿಷ್ಟವಾದ ಪರಿಸ್ಥಿತಿಯಲ್ಲಿ ಗಂಭೀರ ಸ್ವರೂಪಕ್ಕೆ ಹೋಗುತ್ತಿರತಕ್ಕಂಥದ್ದನ್ನು ನಾವು ನೀವು ಯೋಚನೆ ಮಾಡಿದಾಗಲೂ ಕೂಡ ಅದಕ್ಕೆ ಸುಲಲಿತವಾಗಿರತಕ್ಕಂಥ ಪರಿಹಾರವನ್ನು ಹುಡುಕುವಲ್ಲಿ ನಾವು ನೀವು ಸಹಕಾರಿಗಳಾಗಿದ್ದೇವೆ. ಆದ್ದರಿಂದ, ಸಂಸದೀಯ ವ್ಯವಹಾರ ಸಚಿವನಾಗಿ ಮಾನ್ಯ ಸಭಾಧ್ಯಕ್ಷರಿಗೆ ಮತ್ತು ವಿರೋಧ ಪಕ್ಷದಲ್ಲಿರತಕ್ಕಂಥ ತಮಗೆಲ್ಲರಿಗೂ ಕೂಡ ನಾನು ಆಡಳಿತ ಪಕ್ಷದ ವತಿಯಿಂದ ಅತ್ಯಂತ ಆದರ ಪೂರ್ವಕವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಾನು ಕೂಡ ಸಂಸದೀಯ ವ್ಯವಹಾರ ಸಚಿವನಾಗಿ ನನ್ನ ಹಲವಾರು ಮಿತ್ರರು ಹೊಸದಾಗಿ ಬಂದಿರತಕ್ಕಂಥವರು ಆ ಕಡೆ ಈ ಕಡೆ ಇರತಕ್ಕಂಥವರು ಅವರು ಆಡಿರತಕ್ಕಂಥ ಮಾತುಗಳನ್ನು ಮತ್ತು ಅವರು ಎತ್ತಿರತಕ್ಕಂಥ ಹಲವಾರು ಗಂಭೀರವಾಗಿರತಕ್ಕಂಥ ವಿಚಾರಗಳನ್ನು ಮತ್ತು ಅವರ ಮನಸ್ಸಿನ ಆಳದಲ್ಲಿ ಇರತಕ್ಕಂಥ, ಕೆಲವಾರು ಗಂಭೀರವಾಗಿ ಇರತಕ್ಕಂಥ ಸಮಸ್ಯೆಗಳನ್ನು ಇಲ್ಲಿ ಮಾತನಾಡಿದಾಗ ನಮ್ಮಲ್ಲಿರತಕ್ಕಂಥ ಶಕ್ತಿ, ಆ ಸಂಸದೀಯ ಶಕ್ತಿ ಎಷ್ಟು ಇದೆಯೆಂದು

ಹೇಳುತ್ತಿರತಕ್ಕಂಥದ್ದನ್ನು ನೀವು ಆಡಿರತಕ್ಕಂಥ ಮಾತುಗಳಲ್ಲಿ ನಾವು ಕೂಡ ಕಲಿಯಲಿಕ್ಕೆ ಅವಕಾಶವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಿದರೆ ತಪ್ಪಾಗಲಾರದು. ಯಾರೂ ಕೂಡ ಸಂಸದೀಯ ವ್ಯವಹಾರಗಳಲ್ಲಿ ಪ್ರಬುದ್ಧರು ಎಂದು ಹೇಳುವುದಕ್ಕಾಗುವುದಿಲ್ಲ. ನಾವೂ ಕೂಡ ಇತರರಿಂದ ಕಲಿಯಬೇಕಾದದ್ದು ಬೇಕಾದಷ್ಟಿರುತ್ತದೆ. ಒಬ್ಬ ಸದಸ್ಯ ಸದನಕ್ಕೆ ಮೊದಲ ಬಾರಿಗೆ ಬಂದಿರಲಿ ಅಥವಾ ಐದಾರು ಸಲ ಬಂದಿರಲಿ, ಹಲವಾರು ಅತೀ ಮುಖ್ಯವಾದ ವಿಚಾರಗಳು ಪ್ರತಿಯೊಬ್ಬರ ಮನಸ್ಸಿನಲ್ಲಿ, ಭಾವನೆಗಳಲ್ಲಿ, ಮಾತಿನಲ್ಲಿ ಆಗುತ್ತಿರುವಂಥದ್ದನ್ನು ನಾವು ಕೂಡ ಕಲಿಯಲಿಕ್ಕೆ ಇರುತ್ತದೆ, ಅದನ್ನು ನಾವು ಕೂಡ ಕಲಿತುಕೊಂಡಾಗ ಬಹುಶಃ ನಾವು ಹೆಚ್ಚಿಗೆ ಈ ವಿಧಾನಸಭೆಗೆ, ಆಡಳಿತಕ್ಕೆ ಮತ್ತು ಸಮಾಜಕ್ಕೆ ನಾವು ಉತ್ತಮವಾಗಿರತಕ್ಕಂಥ ಕೆಲಸ ಕಾರ್ಯಗಳನ್ನು ಮಾಡುವಲ್ಲಿ ಇಂತ ಚರ್ಚೆ ಗಂಭೀರವಾಗಿ ಇರತಕ್ಕಂಥ ಮಾತುಗಳು ಎತ್ತರಕ್ಕೆ ತೆಗೆದುಕೊಂಡು ಹೋಗುತ್ತದೆ ಎಂದು ಹೇಳುತ್ತೇನೆ. ಇನ್ನು ಮಾನ್ಯ ನಾಯಕರ ಬಗ್ಗೆ ತಾವೆಲ್ಲರೂ ಕೂಡ ಮಾತನಾಡಿದ್ದೀರಿ. ಮಾನ್ಯ ಜೆ.ಹೆಚ್.ಪಟೇಲರು ಅಧಿಕಾರವನ್ನು ಸ್ವೀಕಾರ ಮಾಡಿ ಬಹುಶಃ ನಾವು ಅಕ್ಟೋಬರ್ 5ನೇ ತಾರೀಖಿಗೆ ಮತಗಳ ಎಣಿಕೆ ನಡೆಯುತ್ತದೆ, ಅಕ್ಟೋಬರ್ 6ನೇ ತಾರೀಖಿಗೆ ಮುಂದೆ ಆಡಳಿತಕ್ಕೆ ಯಾರು ಬರುತ್ತಾರೆ ಎಂಬುದು ಗೊತ್ತಾಗುತ್ತದೆ. ಕಾನೂನು ಬದ್ಧವಾಗಿ ನಮಗೆ ಇರತಕ್ಕಂಥ ಅಧಿಕಾರ ಒಂದು ಭಾಗ. ಆದರೆ ಚುನಾವಣಾ ವೇಳೆಯನ್ನು ನಿಗದಿ ಮಾಡಿರುವುದರಿಂದ ನಾವು ಚುನಾವಣೆಯನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಇಂದು ಬೆಳಿಗ್ಗೆ ನಡೆದಿರತಕ್ಕಂಥ ಸಭೆಯಲ್ಲಿ 'ನಾವು ಇನ್ನು ಮುಂದಕ್ಕೆ ಯಾವುದೇ ನೀತಿಯ ಪ್ರಶ್ನೆಗಳನ್ನಾಗಲೀ, ಭರವಸೆಗಳನ್ನಾಗಲೀ ಅಥವಾ ಈ ಸಭೆಯಲ್ಲಿ ಹತ್ತಾರು ವಿಚಾರಗಳನ್ನು ಚರ್ಚೆ ಮಾಡಿ ಸರ್ಕಾರದಿಂದ ಕೊಡತಕ್ಕಂಥ ಭರವಸೆಗಳನ್ನು ಸ್ವಲ್ಪಮಟ್ಟಿಗೆ ಸಂಸದೀಯ ಮಟ್ಟದಲ್ಲಿ ನಾವು ಮಾಡುತ್ತಿರತಕ್ಕಂಥದ್ದು, ನಾವು ನಡೆದುಕೊಂಡು ಬಂದಿರತಕ್ಕಂಥ ಸಂಪ್ರದಾಯಕ್ಕೆ ಅದು ಲೋಪ ಆಗಬಾರದು ಎನ್ನುವಂಥ ರೀತಿಯಲ್ಲಿ ಅವೆಲ್ಲವನ್ನೂ ಕೂಡ ಈ ಸಂದರ್ಭದಲ್ಲಿ ಕೊನೆ ಎಳೆಯಬೇಕೆಂದು ಹೇಳಿ ಹತ್ತಾರು ವಿಚಾರಗಳನ್ನು ಚರ್ಚೆ ಮಾಡಿ ಈ ವಿದಾಯಕ ಕೂಟವನ್ನು ಮಾನ್ಯ ಸಭಾಧ್ಯಕ್ಷರು ಹೇಳಿರತಕ್ಕಂಥ ರೀತಿಯಲ್ಲಿ ನಾವು ಮಾಡಿದ್ದೇವೆ. ನಾನು ಸಂಸದೀಯ ವ್ಯವಹಾರ ಸಚಿವನಾಗಿ ಸರ್ಕಾರದ ಪರವಾಗಿ ನೀವು ನನಗೆ ಕೊಟ್ಟಿರತಕ್ಕಂಥ ಸಹಕಾರಕ್ಕೆ ನಾನು ಅತ್ಯಂತ ಆದರಪೂರ್ವಕವಾಗಿ ಅಭಿನಂದನೆಯನ್ನು ಸಲ್ಲಿಸಿ, ತಾವು ಯಾರು ಮುಂದೆ ಚುನಾವಣೆಗೆ ನಿಲ್ಲುವವರು ಇದ್ದೀರಿ, ನಿಲ್ಲತಕ್ಕಂಥ ಎಲ್ಲರೂ ಕೂಡ ಪುನಃ ವಿಧಾನಸಭೆಗೆ ಪಾದಾರ್ಪಣೆ ಮಾಡತಕ್ಕಂಥ ಅವಕಾಶ ಸಿಗಲಿ, ಭಗವಂತ ನಿಮಗೆ ಚುನಾವಣೆಯಲ್ಲಿ ಹೆಚ್ಚಿನ ಶಕ್ತಿಯನ್ನು ಕೊಡುವುದರ ಮೂಲಕ ಹೆಚ್ಚು ಹೆಚ್ಚಾಗಿ ಈ ಒಂದು ಸಂಸದೀಯ ವ್ಯವಸ್ಥೆಯಲ್ಲಿ, ಈ ವಿಧಾನಸಭೆಯಲ್ಲಿ ನಿಮ್ಮ ಘನತೆಯನ್ನು, ಎತ್ತರವನ್ನು ಎತ್ತಿಹಿಡಿಯುವಲ್ಲಿ ನೀವು ಸಹಕಾರಿ ಆಗಬೇಕೆಂದು ಹೇಳಿ, ನಿಮಗೆ ಅತ್ಯಂತ ಆದರ ಶುಭಾಷಯಗಳನ್ನು ಹೇಳುತ್ತೇನೆ. ಮುಂದೆ ನಡೆಯುತ್ತಿರತಕ್ಕಂಥ ಚುನಾವಣೆಯಲ್ಲಿ ನಿಮಗೆ ಯಶಸ್ಸು ದೊರೆಯಲಿ. ನಾನು ಸಂಸದೀಯ ವ್ಯವಹಾರ ಸಚಿವನಾಗಿ ಕೆಲಸ ಮಾಡುವಾಗ ಮಾನ್ಯ ಸಭಾಧ್ಯಕ್ಷರು, ಮತ್ತು ವಿರೋಧ ಪಕ್ಷದ ನಾಯಕರು ಹಾಗೂ ಜಿಲ್ಲಾ ಪಕ್ಷಗಳ ಹಿರಿಯ ಸದಸ್ಯರು ಸಹಕಾರ ಕೊಟ್ಟಿದ್ದಾರೆ. ಎಲ್ಲಾ ಸಂದರ್ಭಗಳಲ್ಲಿ ನೀವು ಸಹಕಾರವನ್ನು ಕೊಟ್ಟಿದ್ದೀರಿ. ಎಂಥ ಪರಿಸ್ಥಿತಿ ಬಂದರೂ ಕೂಡ ಸಭಾಧ್ಯಕ್ಷರ ಕೊಠಡಿಗೆ ಕರೆದುಕೊಂಡು ಹೋಗಿ ಅಲ್ಲಿ ಅರ್ಧ ಗಂಟೆ ಮಾತುಕತೆ ಆದಮೇಲೆ, ಧರಣಿ ಆಗಿದ್ದಂಥ ಸಂದರ್ಭದಲ್ಲಿ ಅಥವಾ ವಿರೋಧ ಪಕ್ಷದವರು ಹೋದಂಥ

ಸಂದರ್ಭದಲ್ಲಿ, ನಾವು ಸಹಕಾರವನ್ನು ಇನ್ನುಮುಂದೆ ಕೊಡುವುದಿಲ್ಲವೆಂದು ಹೇಳತಕ್ಕಂಥ ಸಂದರ್ಭದಲ್ಲಿ, ವಿಚಾರಗಳನ್ನು ಮಾಡಿ ಆಡಳಿತವನ್ನು ಒಟ್ಟಿಗೆ ತೆಗೆದುಕೊಂಡು ಹೋಗತಕ್ಕಂಥ ದೃಷ್ಟಿಯಲ್ಲಿ ನೀವು ಕೊಟ್ಟಿರತಕ್ಕಂಥ ಸಹಕಾರಕ್ಕೆ ಮತ್ತು ಅದನ್ನು ಮಾನ್ಯ ಸಭಾಧ್ಯಕ್ಷರು ಕೊಟ್ಟಿರತಕ್ಕಂಥ ಮಾರ್ಗದರ್ಶನ ಅವರ ಸಹಕಾರಕ್ಕೆ ಆಡಳಿತ ಪಕ್ಷದ ವತಿಯಿಂದ ತಮಗೆಲ್ಲರಿಗೂ ಅತ್ಯಂತ ಹೃದಯಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ, ಎಲ್ಲರಿಗೂ ನಮಸ್ಕಾರ.

+ ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೆ, ಈ ಚುನಾವಣೆಯು ಘೋಷಣೆ ಆದಕಾರಣ ನಾಳೆ ಅಧಿವೇಶನ ಮುಗಿಸಬೇಕೆಂದು ಇದ್ದ ವಿಚಾರವನ್ನು ಕೈಬಿಟ್ಟು ಇವತ್ತು ಹಿಂದೆಂದೂ ಮಾಡದೇ ಇರುವಷ್ಟು ಲೆಜಿಸ್ಲೇಟೀವ್ ಬ್ಯುಸಿನೆಸ್‌ನ್ನು ಒಂದೇ ದಿನ ಮಾಡಿ ಈಗ ಚುನಾವಣೆಗೆ ಹೋಗತಕ್ಕಂಥ ಪೂರ್ವ, ಈ ಕಳೆದ ನಾಲ್ಕೂ ಮುಕ್ಕಾಲು ವರ್ಷ ಏನೇನು ನಡೆಯಿತು, ಅದರ ಬಗ್ಗೆ ಸ್ವಲ್ಪ ನೆನೆಸಿಕೊಂಡು, ಕೆಲವು ಸಾರಿ ನಿರೀಕ್ಷಣೆಗೆ ತಕ್ಕ ಹಾಗೆ ಕೆಲಸ ಮಾಡಿಲ್ಲವೇ? ಮಾಡದೇ ಇದ್ದರೆ ಅದಕ್ಕೆ ಏನು ಕಾರಣ?

7.00 ಪಿ.ಎಂ

ಚುನಾವಣೆಗೆ ಹೋಗತಕ್ಕಂಥ ಪೂರ್ವದಲ್ಲಿ ಕಳೆದ ನಾಲ್ಕೂಮುಕ್ಕಾಲು ವರ್ಷಗಳಲ್ಲಿ ಏನೇನು ನಡೆಯಿತು ಅದರ ಬಗ್ಗೆ ಸ್ವಲ್ಪ ನೆನೆಸಿಕೊಳ್ಳೋಣ. ಕೆಲವು ಸಾರಿ ನಾವು ನಿರೀಕ್ಷಣೆಗೆ ತಕ್ಕ ಹಾಗೆ ಕೆಲಸ ಮಾಡಿದ್ದೇವೆಯೇ, ಮಾಡದೇ ಇದ್ದರೆ ಅದಕ್ಕೆ ಏನು ಕಾರಣ? ಶಾಸಕರಾಗಿ, ಮಂತ್ರಿಗಳಾಗಿ ನಮ್ಮ ಬಗ್ಗೆ ಜನರ ನಿರೀಕ್ಷೆ ಏನು? ಅವರ ಅಸೆಸ್‌ಮೆಂಟ್ ಏನು? ಅವರ ಮನಸ್ಸಿನಲ್ಲಿ ಶಾಸನ ಸಭೆಗಳ ಬಗ್ಗೆ, ಸಭೆಗಳಲ್ಲಿ ನಡೆಯತಕ್ಕಂಥ ಕಾರ್ಯಕಲಾಪಗಳ ಬಗ್ಗೆ ಅವರು ಮೂಡಿಸಿ ಕೊಂಡಿರತಕ್ಕಂಥ ಅಭಿಪ್ರಾಯವೇನು? ಎನ್ನುವುದೆಲ್ಲಾ ಮುಂದೆ ಗೊತ್ತಾಗುತ್ತದೆ. ಆಳುವ ಪಕ್ಷ ತಪ್ಪು ಮಾಡಬಹುದು. ಆಳುವ ಪಕ್ಷ ಒಂದು ಔನ್ಸ್ ತಪ್ಪು ಮಾಡಿದರೆ ವಿರೋಧ ಪಕ್ಷಗಳು ಒಂದು ಕೆ.ಜಿ. ತಪ್ಪು ಮಾಡುತ್ತವೆ. ಸಮಾಜದಲ್ಲಿ ಶಾಂತಿ, ಸಮಾಧಾನ ಇದ್ದರೆ ಆಗ ನಮ್ಮ ವಿಚಾರದ ಮಟ್ಟ ಏರುತ್ತದೆ. ದಿನನಿತ್ಯದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ ಅಲ್ಲಿ ಇಂಥ ಕೆಲಸ ಆಗಬೇಕು, ಇಲ್ಲಿ ಇಂಥ ಕೆಲಸ ಆಗಬೇಕು ಎನ್ನುವುದರಲ್ಲಿ ಸಮಯ ಕಳೆಯದೇ ಇನ್ನೂ ಹೆಚ್ಚಿನ ಅಂದರೆ ನಮ್ಮ ಜನತಂತ್ರದ ವ್ಯವಸ್ಥೆಯ ಬಗ್ಗೆ, ನಮ್ಮಲ್ಲಿರತಕ್ಕಂಥ ಸಾಮಾಜಿಕ ರೋಗರುಜಿನಗಳ ಬಗ್ಗೆ ಅಥವಾ ಈಗ ದೇಶದಲ್ಲಿರತಕ್ಕ ವ್ಯವಸ್ಥೆಯಲ್ಲಿ ಸಾಮಾಜಿಕ ರೋಗರುಜಿನಗಳ ಬಗ್ಗೆ ಅಥವಾ ಈಗ ದೇಶದಲ್ಲಿರತಕ್ಕ ವ್ಯವಸ್ಥೆಯಲ್ಲಿ ಕಂಡು ಬರತಕ್ಕಂಥ ಅಪಸ್ವರಗಳ ಬಗ್ಗೆ ಒಂದು ರಾಷ್ಟ್ರವನ್ನು ಗುರಿಯಾಗಿಟ್ಟು ಚರ್ಚೆ ಮಾಡತಕ್ಕಂಥ ಅವಕಾಶ ಬರಲಿಲ್ಲ. ಒಂದು ಸಾರಿ ಮಾತ್ರ ಜ್ಯುಡಿಷಿಯರಿ ಬಗ್ಗೆ ನಾವು ಚರ್ಚೆ ಮಾಡಿದೆವು. ಒಂದು ಮಾತನ್ನು ಒಪ್ಪುತ್ತೇನೆ, ತಾವೆಲ್ಲಾ ಹೇಳಿದಿರಿ, ಬೇರೆ ವಿಧಾನಸಭೆಗಳ ಕಲಾಪಗಳನ್ನು ನೋಡಿದರೆ ಕರ್ನಾಟಕ ವಿಧಾನಸಭೆಯ ಕಲಾಪದ ಮಟ್ಟ ಎತ್ತರದ್ದು. ಆದರೆ, ನಿಜವಾಗಿ ಸಂಸದೀಯ ಕಲಾಪಗಳು ಎಂದರೆ ಏನು? ಒಬ್ಬ ನ್ಯಾಯಾಧೀಶನ ಮುಂದೆ ಒಬ್ಬ ವಕೀಲ ವಾದ ಮಾಡುವುದು, ಅದು ಪಾರ್ಲಿಮೆಂಟೇರಿಯನ್ ಮಾಡುವುದಲ್ಲ, ಕ್ಲಾಸ್‌ನಲ್ಲಿ ಹುಡುಗರನ್ನು ಕೂರಿಸಿಕೊಂಡು ವಿಜ್ಞಾನದ ಬಗ್ಗೆ ತಿಳುವಳಿಕೆ ಹೇಳುವುದು

ಪಾರ್ಲಿಮೆಂಟೇರಿಯನ್ ಡಿಬೇಟ್ ಅಲ್ಲ, ಸಾರ್ವಜನಿಕ ಸಭೆಗಳಲ್ಲಿ ರಾಜಕೀಯ ಪಕ್ಷದ ಮುಖಂಡರುಗಳಾಗಿ ಪರಸ್ಪರ ದೋಷದ ಆರೋಪಗಳನ್ನು ಮಾಡಬಹುದು, ಅದು ಒರೇಟರಿ ಇರಬಹುದು, ಪಬ್ಲಿಕ್ ಸ್ಪೀಕಿಂಗ್ ಇರಬಹುದು. ಆದರೆ ಅದು ಪಾರ್ಲಿಮೆಂಟೇರಿಯನ್ ಡಿಬೇಟ್ ಅಲ್ಲ. ಸಂಸದೀಯ ಭಾಷಣಗಳು ಎಂದರೆ ಅದರಲ್ಲಿ ಈ ಎಲ್ಲಾ ಅಂಶಗಳೂ ಇರುತ್ತವೆ. ವಿಜ್ಞಾನವನ್ನು ಹೇಳತಕ್ಕಂಥ ಒಬ್ಬ ಶಿಕ್ಷಕನ ದೃಷ್ಟಿಯೂ ಇರಬೇಕು, ನ್ಯಾಯಾಧೀಶನ ಎದುರಿಗೆ ನಿಂತು ಕಾನೂನು ಪ್ರಕಾರ ಅಚ್ಚುಕಟ್ಟಾಗಿ ವಾದ ಮಾಡತಕ್ಕಂಥ ಅಂಶವೂ ಇರಬೇಕು, ಕೆಲವು ಸಾರಿ ಪಬ್ಲಿಕ್ ಮೀಟಿಂಗ್‌ನ ಟೆಂಡೆನ್ಸಿಯೂ ಇರಬೇಕು. ಆದರೆ ಒಂದು ಮಾತು, ಬರೀ ಪಬ್ಲಿಕ್ ಮೀಟಿಂಗ್‌ನ ಭಾಷಣವನ್ನು ನಾವು ವಿಧಾನಸಭೆಯಲ್ಲಿ ಮಾಡಿದರೆ ಜನರ ಸಮಸ್ಯೆಗಳು ಬಗೆಹರಿಯುವುದಿಲ್ಲ ಅದು ಮಾತ್ರವಲ್ಲ, ಈ ವಿಧಾನಸಭೆಯ ಸಮಯ ಹಾಳಾಗುತ್ತದೆ. ಈ ನಾಲ್ಕೂಮುಕ್ಕಾಲು ವರ್ಷಗಳಲ್ಲಿ ನಾವು ಎಷ್ಟೆಷ್ಟು ಸಮಸ್ಯೆಗಳನ್ನು ಬಗೆಹರಿಸಬಹುದಾಗಿತ್ತು. ಚರ್ಚೆ ಮಾಡಬಹುದಿತ್ತು. ಎಷ್ಟು ಎತ್ತರಕ್ಕೆ ಹೋಗಬಹುದಿತ್ತು. ಅಷ್ಟು ಎತ್ತರಕ್ಕೆ ಹೋಗುವುದಕ್ಕೆ ಆಗಲಿಲ್ಲ. ಅದಕ್ಕೆ ನಾನು ಯಾರನ್ನೂ ದೂಷಣೆ ಮಾಡುತ್ತಿಲ್ಲ. ನಾನು ಮೊದಲನೇ ಭಾರಿಗೆ ಲೋಕಸಭೆಗೆ ಹೋದಾಗ ಲೋಹಿಯಾ, ಕೃಪಲಾನಿ, ಮೀನುಮಸಾನಿಗಳಂಥ ಮಹಾನ್ ವಿಚಾರವಂತರು ಇದ್ದರು. ಲೋಹಿಯಾರವರು ಒಂದು ಡಿಬೆಟ್ ಪ್ರಾರಂಭ ಮಾಡಿದರು. ನೆಹರೂರವರು, ನಮ್ಮ ಪರ್‌ಕ್ಯಾಪಿಟಾ ಇನ್‌ಕಂ 12ಆಣೆ ಇದೆ ಎಂದು ಹೇಳಿದರು. ಲೋಹಿಯಾರವರು, ಅದು 12 ಆಣೆ ಇಲ್ಲ, ನಿಮ್ಮ ಲೆಕ್ಕ ತಪ್ಪು, 3 ಆಣೆ ಇದೆ ಎಂದು ಹೇಳಿದರು. ಆಗ ಒಂದು ಕ್ವಿಕ್, ಸ್ಯಾಂಪಲ್ ಸರ್ವೆ ಮಾಡಿಸಿದರು. ಆಗ ಲೋಹಿಯಾ ಹೇಳಿದ್ದು ಸರಿ ಎಂದು ಗೊತ್ತಾದಾಗ, ಪ್ರಧಾನಮಂತ್ರಿಯಾದ ಪಂಡಿತ್ ಜವಹರಲಾಲ್ ನೆಹರೂರವರಂಥ ಎತ್ತರದ ರಾಜಕಾರಣಿ, ರಾಷ್ಟ್ರೀಯ ನಾಯಕರು, ನನಗೆ ನಮ್ಮ ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟರು ಎಂದು ಒಪ್ಪಿಕೊಂಡರು. ಅಂಥ ವಿಷಯಗಳನ್ನು, ಅಂದರೆ ಅದು ಮೂರು ಆಣೆ ಡಿಬೆಟ್ ಇರಬಹುದು ಅಥವಾ ಸಾಂಸ್ಕೃತಿಕವಾಗಿ ಇರಬಹುದು. ಒಂದು ಸಾರಿ ರಷ್ಯಾದ ಸ್ಟಾಲಿನ್ನನ ಮಗಳು ಸೆಟ್ಲಾನಾ, ಆ ದೇಶದಲ್ಲಿ ಆತ ಹೋದಮೇಲೆ ತಾನು ಇರಲು ಆಗುವುದಿಲ್ಲ ಎಂದು ಹಿಂದೂ ದೇಶದ ಒಬ್ಬ ರಾಜನ ಮಗನನ್ನು ಅವಳು ಪ್ರೀತಿಸಿ, ಮದುವೆಯಾದಳು. ಆಗ ಹಿಂದೂಸ್ಥಾನದಲ್ಲಿ ನನಗೆ ರಕ್ಷಣೆ ಸಿಗುತ್ತದೆ ಎಂದು ಆ ಮಹಿಳೆ ಇಲ್ಲಿಗೆ ಬಂದಳು. ಆದರೆ ಆಗ ಇದ್ದ ರಾಜಕೀಯ ಒತ್ತಡಕ್ಕೆ ಮಣಿದು ಸೆಟ್ಲಾನಾಗೆ ಈ ರಾಷ್ಟ್ರದಲ್ಲಿ ಅವಕಾಶ ಕೊಡಲಿಲ್ಲ. ಒಂದು ಕಡೆ ಸೋವಿಯಟ್ ಯೂನಿಯನ್‌ನಿಂದ, ಇನ್ನೊಂದು ಕಡೆ ಬೇರೆಯವರಿಂದ ಅಷ್ಟು ಒತ್ತಡಗಳು ಇದ್ದವು. ಕೊನೆಗೆ ಅವರು ಅಮೇರಿಕಾಗೆ ಹೋದರು. ಆ ವಿಷಯ ಪ್ರಸ್ತಾಪ ಮಾಡಿದಾಗ ಎಷ್ಟು ಎತ್ತರದ ಡಿಬೆಟ್ ಆಯಿತು ಎಂದರೆ, ನಮ್ಮ ವಿದೇಶಾಂಗ ನೀತಿಯ ಬಗ್ಗೆ ಚರ್ಚೆಯಾಯಿತು. ಆಗ ಅಲ್ಲಿ ಯಾರೂ ದಿನನಿತ್ಯ ನನಗೆ ಹಾಗಾಗಿದೆ, ಆ ಕೆಲಸವಾಗಬೇಕಾಗಿದೆ, ಈ ಕೆಲಸವಾಗಬೇಕಾಗಿದೆ ಎಂದು ಕೇಳುತ್ತಿರಲಿಲ್ಲ. ಬೇಸಿಕ್ ಎಕನಾಮಿಕ್ ಪಾಲಿಸಿ ಎಂದರೆ ಏನು?, ನ್ಯಾಷನಲ್ ಡೈಮೆನ್‌ಷನ್ ಅಂದರೆ ಏನು ? ಇಂಥ ವಿಷಯಗಳ ಬಗ್ಗೆ ಬಹಳ ಎತ್ತರಕ್ಕೆ ಹೋಗುತ್ತಿದ್ದರು. ಡಿಮ್ಯಾಂಡ್ಸ್ ಎಂದು ನಾವು ಏನು ಮಾಡುತ್ತೇವೆ, ಆ ಡಿಮ್ಯಾಂಡ್ಸ್ ಚರ್ಚೆಯ ಸಮಯದಲ್ಲಿ ಮಾತ್ರ ದಿನನಿತ್ಯದ ಕೆಲಸಗಳ ಬಗ್ಗೆ ಚರ್ಚೆಯಾಗುತ್ತಿತ್ತು. ಆದರೆ ಈಗ ಲೋಕಸಭೆಯ ಕಲಾಪಗಳನ್ನು

ಟಿ.ವಿ.ಯಲ್ಲಿ ನೋಡಲೂ ಸಹ ನಾಚಿಕೆಯಾಗುತ್ತದೆ. ಅಷ್ಟು ಕೆಳಮಟ್ಟಕ್ಕೆ ಇಳಿದಿದೆ. ಹಾಗೆ ನೋಡಿದರೆ ನಮ್ಮ ವಿಧಾನಸಭೆ ಅಷ್ಟು ಕೆಳಮಟ್ಟಕ್ಕೆ ಇಳಿದಿಲ್ಲ. ಇಲ್ಲಿ ಇನ್ನೂ ಸ್ವಲ್ಪವಾದರೂ ವಿಚಾರವಿದೆ. ಆಮೇಲೆ, ಹೊಸದಾಗಿ ಆರಿಸಿ ಬಂದಿರುವ ಕೆಲವು ಶಾಸಕರಿಗೆ ರೂಲ್ಸ್ ಅಂದರೇನು, ಅದನ್ನು ಹೇಗೆ ಕಾಪಾಡಬೇಕು, ಅಧ್ಯಕ್ಷರ ರೂಲಿಂಗ್ ಅಂದರೇನು, ಅದನ್ನು ಹೇಗೆ ನೋಡಬೇಕು ಇಂಥವುಗಳ ಬಗ್ಗೆ ಏನೇನೂ ಗೊತ್ತಿರುವುದಿಲ್ಲ. ಒಟ್ಟಾರೆ ಪೇಪರ್‌ನಲ್ಲಿ ಅವರ ಹೆಸರು ಬರಬೇಕು ಎಂದು ಮಾಡುತ್ತಾರೆ. ಏನಾದರೊಂದು ಅಸಭ್ಯ ಅಥವಾ ಅಸಹಜವಾದ ವರ್ತನೆಯಿಂದ, ಪೇಪರ್‌ನಲ್ಲಿ ಹೆಸರು ಬರಬೇಕು ಎಂದು ಮಾಡುತ್ತಾರೆ. ಪೇಪರ್‌ನವರು ಕೂಡ ಅಷ್ಟೇ, ಯಾವುದಾದರೂ ಬಹಳ ಉತ್ತಮವಾದ ವಿಚಾರವನ್ನು ನೀವು ಹೇಳಿದರೆ ಅದನ್ನು ಪ್ರಿಂಟ್ ಮಾಡುವುದಿಲ್ಲ. ವಿರೋಧ ಪಕ್ಷದ ಆಕ್ರೋಶ, ಸಭಾತ್ಯಾಗ, ಧರಣಿ ಸತ್ಯಾಗ್ರಹ, ಈ ತರಹದ ಪಬ್ಲಿಸಿಟಿ ಬಂದು, ಯಾವುದನ್ನು ವಿಧಾನಸಭೆಯಲ್ಲಿ ವಿಚಾರ ಮಾಡಬೇಕು, ಅದನ್ನು ಬಿಟ್ಟು ಪ್ರಚಾರಕ್ಕೋಸ್ಕರ ಏನು ಮಾಡಬೇಕೋ ಅದನ್ನು ಮಾಡತಕ್ಕಂಥ ಟೆಂಡನ್ಸಿ ಬಂದುಬಿಟ್ಟಿದೆ. ಮಾನ್ಯ ಅಧ್ಯಕ್ಷರೇ, ನೀವು ಬಹಳ ಎತ್ತರದ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದಿರಿ. ಆದರೆ ಆ ವಿಷಯಗಳು ತಲೆಗೇ ಹೋಗುವುದಿಲ್ಲ. ವಿರೋಧ ಪಕ್ಷದ ನಾಯಕರುಗಳು, ಅದು ಖರ್ಗೆಯವರಾಗಲೀ, ಮೊಯ್ಲಿಯವರಾಗಲೀ, ಸುರೇಶಕುಮಾರ್‌ರವರಾಗಲೀ, ವಾಟಾಳ್‌ರವರಾಗಲೀ, ನಂಜೇಗೌಡರಾಗಲೀ, ಶ್ರೀರಾಮರೆಡ್ಡಿಯವರಾಗಲೀ, ನಿಮಗೆ ಶಕ್ತಿ ಇದೆ, ಪ್ರಜ್ಞೆ ಇದೆ. ಆದರೆ ಅವುಗಳನ್ನು ಪರಿಣಾಮಕಾರಿಯಾಗಿ ಸರ್ಕಾರದ ಮೇಲೆ ಹೇಳಲು ಅವಕಾಶವಿಲ್ಲ. ನಾನು ಹೇಳುವುದು, ನಾವು ತಪ್ಪು ಮಾಡಿಲ್ಲ ಎಂದು ಅಲ್ಲ. ಈ ಪತ್ರಿಕೆಯಲ್ಲಿ ಇಂಥ ಒಂದು ಹಗರಣದ ವಿಚಾರ ಬಂದಿದೆ. ಸ್ವಾಮಿ ಇದಕ್ಕೆ ಒಂದು ಜ್ಯುಡಿಶಿಯಲ್ ಎನ್‌ಕ್ವಯರಿ ಆಗಬೇಕು, ಅದು ಆಗದಿದ್ದರೆ ಸಿ.ಒ.ಡಿ.ಎನ್‌ಕ್ವಯರಿ ಆಗಬೇಕು, ಇಲ್ಲವೆಂದರೆ ಸದನಸಮಿತಿ ಆಗಬೇಕು, ಹೀಗೆ ಬರೀ ಇದನ್ನೇ ಪದೇ ಪದೇ ಕೇಳುತ್ತಾರೆ. ಇದನ್ನು ನೋಡಿ, ನೋಡಿ, ಓದಿ, ಓದಿ ಜನರಿಗೆ ಏನಾಗುತ್ತದೆ ಎಂದರೆ ಈ ತನಿಖೆಯಿಂದ ಏನಾಗುತ್ತದೆ ಎನ್ನುವ ಭಾವನೆಯಿಂದ ಈ ವ್ಯವಸ್ಥೆ ಬಗ್ಗೆ ಇರತಕ್ಕಂಥ ಮೂಲತಃ ವಿಶ್ವಾಸ ಕುಸಿದುಹೋಗುತ್ತದೆ. ಈ ಡೆಮಾಕ್ರಟಿಕ್ ಇನ್ಸ್ಟಿಟ್ಯೂಷನ್ಸ್ ಏನು ಇವೆ ಅವುಗಳ ಬಗ್ಗೆ ಮೂಲತಃ ಗೌರವ ಹೋದರೆ ಚುನಾವಣೆಗಳಿಗೆ ಅಥವಾ ಚುನಾವಣೆಯಲ್ಲಿ ಆರಿಸಿ ಬಂದಂಥವರಿಗೆ ಯಾವುದೇ ರೀತಿಯ ಗೌರವವಾಗಲೀ, ಮನ್ನಣೆ ಆಗಲೀ, ಅವರ ಮಾತಿನ ಬಗ್ಗೆ ವಿಶ್ವಾಸ ಆಗಲೀ ಉಳಿಯುವುದಿಲ್ಲ. ಒಬ್ಬ ಎಂ.ಎಲ್.ಎ. ಆದವನು ಏನೇನೋ ಹೇಳಿಬಿಟ್ಟು ಕುಳಿತುಕೊಂಡರೆ, ಅದರ ಪರಿಣಾಮವಾಗಿ ಒಬ್ಬ ತಹಶೀಲ್ದಾರ್ ಮಾತು ಕೇಳುವುದಿಲ್ಲ, ಒಬ್ಬ ಡೆಪ್ಯುಟಿ ಕಮೀಷನರ್ ಹೇಳಿದ್ದನ್ನು ಒಬ್ಬ ತಹಶೀಲ್ದಾರ್ ಕೇಳುವುದಿಲ್ಲ, 'ಡಿ.ಸಿ. ನನಗೆ ಏನು ಮಾಡುತ್ತಾನೆ. ಬೇಕಾದರೆ ನಮ್ಮ ಎಂ.ಎಲ್.ಎ. ಹತ್ತಿರ ಹೇಳಿ ಅವನನ್ನೇ ಚೇಂಜ್ ಮಾಡಿಸುತ್ತೇನೆ' ಎಂದು ಹೇಳುತ್ತಾನೆ. ಹೀಗಾಗಿ Administrative machinery loses its grip when we lose the very fundamental grasp of politics. ಇನ್ನು ಒಂದು ಮಾತು ಅಧ್ಯಕ್ಷರಿಗೆ ಹೇಳುವುದಾದರೆ, ತಾವು ಸದನಕ್ಕೆ ಸಾಕಷ್ಟು ಮಾರ್ಗದರ್ಶನ ಮಾಡಿದ್ದೀರಿ. ಸ್ಪೀಕರ್ ಏಕೆ ಇಷ್ಟು ಹಿಂಸೆ ತೆಗೆದುಕೊಳ್ಳುತ್ತಾರೆಂದು ನಾನು ಎಷ್ಟೋ ಸಾರಿ ಆಲೋಚನೆ ಮಾಡುತ್ತಿದ್ದೆ. ನಾನು ಇಲ್ಲಿ ಯಾವುದೋ ಒಂದು ಪಕ್ಷದ ಬಗ್ಗೆ ಹೇಳುತ್ತಿಲ್ಲ. 'ಸ್ವಾಮಿ, ನಮ್ಮ ಊರು ಕೆರೆ ಏನಾಯಿತು?

ಎಂದು ಆ ಕಡೆಯಿಂದ ಒಬ್ಬ ಕೇಳಿದರೆ, 'ಸ್ವಾಮಿ, ನಮ್ಮ ಊರು ರಸ್ತೆ ಏನಾಯಿತು? ಎಂದು ಈ ಕಡೆಯಿಂದ ಒಬ್ಬ ಕೇಳುತ್ತಾರೆ. ಹೀಗೆ ಅಡ್ಡಾದಿಡ್ಡಿಯಾಗಿ ಕೇಳುತ್ತಿರುತ್ತಾರೆ. ಇದೇನು ವಿಧಾನಸಭೆಯೋ ಅಥವಾ ತಾಲ್ಲೂಕು ಆಫೀಸ್ ಅಥವಾ ಡಿ.ಸಿ. ಆಫೀಸ್ ಎಂದು ಭಾವಿಸಿಕೊಂಡಿದ್ದಾರೋ ಏನೋ ಗೊತ್ತಿಲ್ಲ. ವಿಧಾನಸಭೆ ಅಂದರೆ ಅದಕ್ಕೆ ಒಂದು ಕ್ಯಾರೆಕ್ಟರ್ ಇದೆ, ಅದಕ್ಕೆ ಒಂದು ಪರ್‌ಪಸ್‌ಇದೆ. ಅದನ್ನು ನಾವು ಕಳೆದುಕೊಂಡು ಆರ್ಡಿನರಿ ಡಿಸ್ಕಷನ್ ಮಾಡತಕ್ಕಂಥ ವಿಷಯಗಳಲ್ಲಿ ಸಮಯ ಕಳೆದವು. ನಿಜವಾಗಿ ಡಿಮ್ಯಾಂಡ್ ಬಗ್ಗೆ ಡಿಸ್ಕಷನ್ ಆಗಬೇಕಿತ್ತು, ಆದರೆ ಅದು ಆಗಲಿಲ್ಲ, ಬಜೆಟ್ ಮೇಲೆ ಸರಿಯಾದ ಡಿಸ್ಕಷನ್ ಆಗಲಿಲ್ಲ, ನಾವು ಏನಾದರೂ ತಪ್ಪು ಮಾಡಿದ್ದನ್ನು ನೀವು ಹೇಳುವುದಕ್ಕಾಗಲಿಲ್ಲ. ಇವತ್ತು ಅಧಿವೇಶನದ ಕೊನೆಯ ದಿವಸ. ಸಂಪೂರ್ಣ ಧನವಿನಿಯೋಗ ವಿಧೇಯಕಗಳು, ಆರ್ಡಿನೆನ್ಸ್ ರಿಪ್ಲೇಸ್‌ಮೆಂಟ್ ಬಿಲ್ಸ್ ಹೀಗೆ ಎಲ್ಲವನ್ನೂ ಒಂದೇ ದಿವಸ ಪಾಸ್ ಮಾಡಬೇಕಾಯ್ತು ಇಡೀ ಒಂದು ತಿಂಗಳಿನಲ್ಲಿ 20 ದಿನ ಅನಾವಶ್ಯಕವಾದ ವಿಷಯಗಳಿಗೆ ಸಮಯ ಖರ್ಚು ಮಾಡಿದರೆ ಅವಶ್ಯಕವಾಗಿ ಚರ್ಚೆ ಮಾಡತಕ್ಕಂಥ ವಿಷಯಗಳು ಮೂಲೆಗೆ ಹೋಗಿಬಿಡುತ್ತದೆ. ಹೀಗಾಗಿ we had to face this kind of situation. ಯಾವುದೇ ಪಾರ್ಟಿ ಆಗಿರಲಿ ಒಂದು ವಿಷಯದಲ್ಲಿ ನಮ್ಮ ಶಾಸಕರು 'ಸಭ್ಯರು' ಬೇರೆ ರಾಜ್ಯಗಳ ವಿಧಾನಸಭೆಯಲ್ಲಿ ನಡೆಯುವ ಹಾಗೆ ತೋಳು ಮುದುರಿ, ಕುರ್ಚಿ ಹಿಡಿದುಕೊಂಡು ಹೊಡೆದಾಡುವಷ್ಟು ಅಸಭ್ಯತನ ಬಂದಿಲ್ಲ. ಅಷ್ಟು ಅಸಭ್ಯರು ಏಕೆ ಇಲ್ಲ ಎಂದರೆ ನಮ್ಮ ರಾಜ್ಯದ ಜನರು ಸಭ್ಯರಾಗಿದ್ದಾರೆ. ಅಂಥ ಅಸಭ್ಯ ನಡವಳಿಕೆಯನ್ನು ನಮ್ಮ ಜನ ಸಹಿಸುವುದಿಲ್ಲ. ಅಸಭ್ಯ ನಡವಳಿಕೆ ತಮಿಳುನಾಡಿನಲ್ಲಿ ನಡೆಯಬಹುದು, ಆಂಧ್ರಪ್ರದೇಶದಲ್ಲಿ ನಡೆಯಬಹುದು. ಬಿಹಾರದಲ್ಲಂತೂ ಅಲ್ಲಿಯ ವಿಧಾನಸಭೆಯಲ್ಲಿ ಹೊಡೆದಾಟ ನಡೆಯದಿದ್ದರೆ ಅಲ್ಲಿಯ ಜನ ನಂಬುವುದೇ ಇಲ್ಲ. ಏಕೆಂದರೆ ಅಲ್ಲಿಯ ಜನರಿಗೆ ಅದೇ ತರಹದ ಹೊಡೆದಾಟ ಬೇಕು. ಏಕೆಂದರೆ ಅಲ್ಲಿರುವಂಥವರು ಅದೇ ತರಹದ ಜನ. ಪೈಲ್ವಾನ್‌ಗಿರಿ ಮಾಡಿ ಯಾರು ಕುಸ್ತಿ ಮಾಡುತ್ತಾನೋ ಅವನೇ ಅಲ್ಲಿ ದೊಡ್ಡವನು. ಹಾಗಾಗಿ parliamentary institutions and the character of these institutions and the purpose for which they are existing, ಅದು ಹೋದರೆ ಏನು ಮಾಡುವುದು, ಬ್ರಿಟಿಷರ ಕಾಲದಲ್ಲಿ ಅಡ್ಮಿನಿಸ್ಟ್ರೇಷನ್ ಬಹಳ ಚೆನ್ನಾಗಿ ಇತ್ತು ಎಂದು ನಾವು ಹೇಳುತ್ತೇವೆ, ಹಳ್ಳಿಯಲ್ಲೂ ಕೂಡ 'ಬ್ರಿಟೀಷರ ಕಾಲದಲ್ಲಿ ಆಡಳಿತ ಚೆನ್ನಾಗಿತ್ತು, ಬಿಡಪ್ಪಾ' ಎಂದು ಹೇಳುತ್ತಾರೆ. ಏಕೆಂದರೆ ಆವಾಗ ಬರೀ ಆಜ್ಞೆ ಹೊರಡಿಸುವುದು, ಅದನ್ನು ಪರಿಪಾಲನೆ ಮಾಡಿದ್ದಾರೆಯೇ ಅಥವಾ ಇಲ್ಲವೇ ಎನ್ನುವುದನ್ನು ನೋಡುವುದು, ಪರಿಪಾಲಿಸದಿದ್ದರೆ ಶಿಕ್ಷೆ ಮಾಡುವುದು, ಇದು ಆಗ ಇದ್ದಂಥದ್ದು. ಇಲ್ಲಿ ಯಾವನಾದರೂ ನಾಲ್ಕು ಜನ ಇಂಜಿನಿಯರ್ ಏನೋ ಮಾಡಿರುತ್ತಾರೆ. ಅದಕ್ಕೆ ಬೈರೇಗೌಡರು ಸಸ್ಪೆಂಡ್ ಮಾಡಿಬಿಡುತ್ತಾರೆ ಅಥವಾ ಕೋಲು ಹಿಡಿದು ಯಾವನನ್ನೋ ನೂಕುತ್ತಾರೆ. ಆ ಕೂಡಲೆ ಇಲ್ಲಿ ಯಾವನು ಶಿಕ್ಷಾರ್ಹನೋ ಅವನ ಪರವಾಗಿ ವಕೀಲಿ ಮಾಡತಕ್ಕಂಥ ಕೆಲಸ ನಡೆಯುತ್ತದೆ. 'ಅವನನ್ನು ಬಿಡಪ್ಪಾ, ನಮಗೇನು ಆಗಬೇಕಾಗಿದೆ, ಸುಮ್ಮನೆ ಏಕೆ ನಿಷ್ಠೂರ ಆಗಬೇಕು, ನಂಜೇಗೌಡರು ಮನಸ್ಸು ಕೆಡಿಸಿಕೊಳ್ಳುತ್ತಾರೆ ಅಥವಾ ಸರ್ಕಾರದ ಮೇಲೆ ಏನಾದರೂ ಕೆಲವು ನಿರ್ದಿಷ್ಟವಾದಂಥ ಮಾಹಿತಿ ನಂಜೇಗೌಡರಿಗೆ ಇದ್ದರೆ 'ನನಗೂ ಪಟೇಲರಿಗೂ ಸ್ನೇಹ ಇದೆ, ನಾನು ಏಕೆ ಹೇಳಲಿ' ಎನ್ನುವಂಥ ಯೋಚನೆ, ಭಾವನೆ, ಕಲ್ಪನೆ

ಇರಬಾರದು. ಇದರೊಳಗೆ ಈ ತರಹದ ಮರ್ಜಿ ಇರಬಾರದು. ಶ್ರೀ ವಾಟಾಳ್‌ರು ಕನ್ನಡದ ಬಗ್ಗೆ ಯಾರ ಮರ್ಜಿನೂ ಕೇಳುವುದಿಲ್ಲ. ಅವರಿಗೆ ತಿಳಿದಂತೆ ಅವರು ಮಾಡುತ್ತಾರೆ. ಯಾರಾದರೂ ಕನ್ನಡಕ್ಕೆ ವಿರೋಧ ಮಾಡಿದರೆ ಅಪಾಯವಿದೆ ಎನ್ನತಕ್ಕಂಥ ವಾತಾವರಣವನ್ನು ಅಟ್‌ಲೀಸ್ಟ್ ಆದರೂ ಅವರು ನಿರ್ಮಾಣ ಮಾಡಿದ್ದಾರೆ. ಕೆಲವು ಸಾರಿ ವಿಧಾನಸಭೆಯಲ್ಲಿ ಅವರ ವರ್ತನೆ ಸ್ವಲ್ಪ ಹೆಚ್ಚಾಗಬಹುದು. ಕನ್ನಡಕ್ಕೆ ಏನಾದರೂ ಅವಮಾನ ಆದರೆ ವಾಟಾಳರು ಇದ್ದಾರೆ ಎನ್ನುವಂಥ ವಾತಾವರಣ ನಿರ್ಮಾಣ ಮಾಡಿರುವುದು ಸರಿಯಾಗಿದೆ. ಇವತ್ತು ವಿಧಾನಸಭೆಯ ಅಧಿವೇಶನದ ಕೊನೆಯ ದಿವಸವಾಗಿದೆ. ನಾನು ವೈಯಕ್ತಿಕವಾಗಿ ಹೇಳುವುದಾದರೆ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಅನುಭವಿಗಳು, ಶ್ರೀಮಾನ್ ಮೊಯಿಲಿಯವರು ಮಾಜಿ ಮುಖ್ಯಮಂತ್ರಿಗಳು, ಇವರೆಲ್ಲರನ್ನು ಬಹಳ ವರ್ಷಗಳಿಂದ ನೋಡಿರತಕ್ಕವರೇ ಮತ್ತು ನಮ್ಮೆಲ್ಲರ ಸ್ನೇಹಿತರು ಕೂಡ ಹೌದು. ಇನ್ನು ಶ್ರೀ ಸುರೇಶ್ ಕುಮಾರ್‌ರವರು ನಾನು ನೋಡಿರುವ ಹಾಗೆ very alert legislator, ಅವರು ಏನಾದರೂ ಹೇಳಿದರೆ ಅದು ಸೂಕ್ತ ಸಮಯದಲ್ಲಿ ಸಮಯಕ್ಕೆ ತಕ್ಕಂತೆ ಇರಬೇಕು, ಅದು ಬಿಟ್ಟು ಹರಿಕಥೆ ತರಹ ಆಗಬಾರದು. ನಮ್ಮ ಶಂಕರಲಿಂಗೇಗೌಡರು ಮಾಡಿದರಲ್ಲಾ ಹರಿಕಥೆ, ಅದು ಇವತ್ತಿಗೆ ಏನೋ ಸರಿ, ಆದರೆ ಪ್ರತೀ ದಿವಸ ಕೂಡ ಅದೇ ಆಗಬಾರದು. ಅವರು ಹರಿಕಥೆಯನ್ನು ಬಹಳ ಚೆನ್ನಾಗಿ ಹೇಳುತ್ತಾರೆ. ಒಂದು ಸಾರಿ ಮೈಸೂರಿನಲ್ಲಿ ಅವರ ರಾಮಾಯಣ ಹರಿಕಥೆ ಕೇಳಿದೆ, ಎಷ್ಟು ವೇಗವಾಗಿ ಹೇಳುತ್ತಾರೆಂದರೆ ನಾನು ಒಂದು ತಿಂಗಳು ಪ್ರಾಕ್ಟೀಸ್ ಮಾಡಿದರೂ ಸಹ ನಮ್ಮ ಕೈಯಲ್ಲಿ ಆಗುವುದಿಲ್ಲ ಅಷ್ಟು ಚೆನ್ನಾಗಿ ಹೇಳುತ್ತಾರೆ. ಒಂದೊಂದು ಸಾರಿ ವಿಧಾನಸಭೆಯಲ್ಲಿ ಈ ತರಹ ಸಾಂಸ್ಕೃತಿಕ, ವೈಚಾರಿಕ, ಶ್ರೀ ನಂಜೇಗೌಡರು ಹೇಳಿದ ಹಾಗೆ 'ವಿಟ್' 'ರಿಪಾರ್ಟಿಸ್', ಹಿಂದೆ ಶ್ರೀ ದೇವರಾಜ ಅರಸು ಅವರು ಮುಖ್ಯಮಂತ್ರಿಗಳಾಗಿದ್ದರು. ನಾನು ವಿರೋಧ ಪಕ್ಷದ ಸಾಲಿನಲ್ಲಿ ಕುಳಿತಿದ್ದೆ. ಶ್ರೀ ಬೊಮ್ಮಾಯಿ ಅವರು ವಿರೋಧ ಪಕ್ಷದ ನಾಯಕರಾಗಿದ್ದರು. ಅರಸುರವರ ಸರ್ಕಾರವನ್ನು ವಜಾ ಮಾಡಿದ ನಂತರ ಮತ್ತೆ ಎಲೆಕ್ಟ್ ಆಗಿ ಪುನಃ ಅವರು ಮುಖ್ಯಮಂತ್ರಿಗಳಾದರು. ಆಗ ಒಂದು ಕಮೀಷನ್ ಅಪಾಯಿಂಟ್ ಆಯಿತು. ಆ ಕಮೀಷನ್‌ನವರು ಅರಸುರವರ ಮನೆ ರೈಡ್ ಮಾಡಿದರು, ಅವರಿಗೆ ಸೇರಿದ ಎಲ್ಲಾ ಕಡೆ ರೈಡ್ ಮಾಡಿದರು, ನಂತರ ಊರಿಗೆ ಹೋಗಿ ಅವರ ತೋಟವನ್ನು ಕಮೀಷನ್‌ನವರು ಅಗೆದು ನೋಡಿ ಬಂದರು. ಶ್ರೀ ದೇವರಾಜ ಅರಸ್ ಅವರ wit and repartees ಅದು ಶ್ರೀ ವೀರೇಂದ್ರ ಪಾಟೀಲರಿಗೆ ಇರಲಿಲ್ಲ. ಶ್ರೀ ವಿರೇಂದ್ರ ಪಾಟೀಲರು ಕರಾರುವಕ್ಕಾಗಿ ಆಡಳಿತಶಾಹಿಗಳು ಉತ್ತರ ಕೊಡುವ ಹಾಗೆ ಕೊಡುತ್ತಿದ್ದರೇ ಹೊರತು ಅವರಿಗೆ ಪಾರ್ಲಿಮೆಂಟರಿ ಪೊಟೆನ್‌ಶಿಯಲ್ ಇರಲಿಲ್ಲ. ಶ್ರೀ ದೇವರಾಜು ಅರಸು ಅವರು ಎದ್ದು ನಿಂತುಕೊಂಡು ಅವರದೇ ಧಾಟಿಯಲ್ಲಿ 'ಏನಪ್ಪಾ ಬೊಮ್ಮಾಯಿ, ನನ್ನ ಹೊಲ ಅಗೆಸಿದಿರಿ, ತೋಟ ಹುಡುಕಿಸಿದಿರಿ, ಮನೆ ಎಲ್ಲಾ ರೈಡ್ ಮಾಡಿಸಿದಿರಿ, ಏನಾದರೂ ಸಿಕ್ತೇನಪ್ಪಾ' ಎಂದು ಕೇಳಿದರು. ಬೊಮ್ಮಾಯಿ ಅವರು ಸುಮ್ಮನೆ ಕುಳಿತಿದ್ದರು. ನಾನು ಎದ್ದು ನಿಂತು 'ಸರ್, ತಪ್ಪು ಮಾಡಿಬಿಟ್ಟೆವು, ನಾವು ಎಲ್ಲಲ್ಲೋ ಹುಡುಕಿಸಿದೆವು, ಎಲ್ಲಿಟ್ಟಿದ್ದೀರಿ?' ಎಂದು ಕೇಳಿದರೆ ಕಳೆದ ಸಲ ವಿರೋಧ ಪಕ್ಷದವರು ಮಾತನಾಡುತ್ತಾ ನಮ್ಮ ಸರ್ಕಾರದ ಬಗ್ಗೆ 'ದೋಣಿ ಹುಟ್ಟು ಹಾಕಿದಿರಿ, ಹಗ್ಗ ಬಿಚ್ಚಿರಲಿಲ್ಲ' ಎಂದು ಆ ತರಹ ಹೇಳಿದರೆ ಆವಾಗ ದೋಣಿ ನಮ್ದಪ್ಪ, ಹಗ್ಗ ನಿಮ್ಮದು' ಎಂದು ನಾವು

ಹೇಳುತ್ತೇವೆ. ಹೀಗೆ ತಮಾಷೆಯಾಗಿಯೂ ನಡೆಯಬೇಕು ಆದರೆ ವಿಚಾರದ ಮಟ್ಟ ಎತ್ತರದಲ್ಲಿರಬೇಕು. ಮೂಲತಃ ನಮ್ಮೆಲ್ಲರ ಕಳಕಳಿ ಏನೆಂದರೆ you are as much worried about the people of Karnataka as the Chief Minister or any Minsiter. ಕರ್ನಾಟಕದ ಜನರ ಸಮಸ್ಯೆಗಳ ಬಗ್ಗೆ ನಿಮಗೆ ಕಡಿಮೆ ಕಳಕಳಿ ಇದೆಯೆಂದು ನಾನು ಎಂದೂ ಯೋಚನೆ ಮಾಡಿಲ್ಲ. ಆ ಕಳಕಳಿ ಎಲ್ಲಿ ಎಂದರೆ ನಮ್ಮ ಲೆಜಿಸ್ಲೇಟೀವ್ ಪರ್‌ಫಾರ್ಮೆನ್ಸ್‌ನಲ್ಲಿ ಬರಬೇಕು. ಆ ಕಾರಣದಿಂದ ಹೊಸಬರು ತಿಳಿದುಕೊಳ್ಳಬೇಕು, ಎನ್ನುವ ಆಸಕ್ತಿ ಇರಬೇಕು. ಸದನದಲ್ಲಿಯೇ ಕುಳಿತುಕೊಳ್ಳುವುದಿಲ್ಲ, ಸದನ ನಡೆಯುವಾಗ ಶಾಸಕರ ಭವನದಲ್ಲಿ ಸೀರಿಯಸ್ ಆಗಿ ಇಸ್ಪೀಟನ್ನು ಆಡುತ್ತಾ ಕುಳಿತಿರುತ್ತಾರೆ. ನಮ್ಮ ಪಕ್ಷದವರೇ ಇರಲಿ, ಬೇರೆ ಪಕ್ಷದವರೇ ಇರಲಿ, ಸದನ ನಡೆಯುವಾಗ ಈ ರೀತಿ ಮಾಡಬಾರದು. ನಾನು ಕೂಡ ಇಸ್ಪೀಟನ್ನು ಆಡಿರುತ್ತೇನೆ. ಮಾನ್ಯ ನಂಜೇಗೌಡರು ಇಸ್ಪೀಟನ್ನು ಆಡುವಾಗ ಸಾಲ ಹೇಳಿದ್ದನ್ನು ಅವರು ಇದುವರೆಗೂ ಕೊಟ್ಟಿಲ್ಲ. ನಾವು ರಜೆಯಿದ್ದಾಗ ಯಾರೋ ಸ್ನೇಹಿತರ ಜೊತೆ ಪಾರ್ಟಿ ಸೇರಿದಾಗ ಇಸ್ಪೀಟ್ ಆಡುತ್ತೇನೆ, ಆದರೆ ಸದನವು ನಡೆಯುವಾಗ ನಾವು ಬೇರೆ ಕಡೆ ಹೋಗುವುದಕ್ಕೆ ಮನಸ್ಸೇ ಬರುತ್ತಿರಲಿಲ್ಲ. ನಾನು ಯಾವಾಗಲೂ ಆರೋಗ್ಯ ಸರಿಯಿದ್ದಾಗ ಸದನಕ್ಕೆ ಬಂದರೆ ಸಂಜೆಯವರೆಗೂ ಕುಳಿತುಕೊಳ್ಳುತ್ತೇನೆ, ಇಲ್ಲದಿದ್ದರೆ ನನ್ನ ಛೇಂಬರಿನಲ್ಲಾದರೂ ಕುಳಿತುಕೊಂಡು ಸದನವನ್ನು ನೋಡುತ್ತಿರುತ್ತೇನೆ. ಮಾನ್ಯ ಖರ್ಗೆಯವರು, ಎಲ್ಲಿ ನಿಮ್ಮ ಸಮಾಜವಾದಿ ಮುಖ್ಯಮಂತ್ರಿಗಳು ಎನ್ನುತ್ತಿರುತ್ತಾರೆ, ನಾನು ಇಲ್ಲೇ ಇದ್ದೇನೆಂದು ಟಿ.ವಿ. ಮುಂದೆ ಕುಳಿತುಕೊಂಡು ಹೇಳುತ್ತಿರುತ್ತೇನೆ. ಆರಿಸಿ ಬಂದ ನಂತರ ನಮಗೆ ಆಸಕ್ತಿ ಇರಬೇಕು, ಒಂದು ಸಲ ಮಾನ್ಯ ಕೃಪಲಾನಿಯವರು ಈ ಕಾನ್ಷಿಯೆನ್ಸ್ ಓಟು ಎಂದು ಮಾಡಿದಾಗ ಸಂಜೀವರೆಡ್ಡಿಯವರು ಸೋತರು, ವಿ.ವಿ. ಗಿರಿಯವರು ಆರಿಸಿ ಬಂದರು. ಇದನ್ನು ಯಾರು ಪ್ರಾರಂಭ ಮಾಡಿದರು ಅಂದರೆ ಕಾಂಗ್ರೆಸ್ ಸರ್ಕಾರ ಇದ್ದಾಗ ಇದು ಆಗಿರುತ್ತದೆ. ಕಾನ್ಷಿಯೆನ್ಸ್ ಓಟು ಪ್ರಾರಂಭವಾದ ಮೇಲೆ ಅವರವರು ಅವರಿಗೆ ತಿಳಿದಂತೆ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರು. ಆಗ ಕೃಪಲಾನಿಯವರು ಏನು ಹೇಳಿದರು ಎಂದರೆ, ``Hon'ble Speaker Sir, I have been told by the doctors that there is some brain here and I am also told that there is a heart here. But where is this conscience? Is it in the stomach or below?" This is the word. This is the language he used. ಅಂತಹವರ ಫರ್‌ಫಾಮನ್ಸನ್ನೂ ನೋಡಿ ಕಲಿತುಕೊಳ್ಳಬೇಕು. ನಮಗೂ ಅದೊಂದು ಶಿಕ್ಷಣವಾಯಿತು. ಕಳೆದ $4\,^3/_4$ ವರ್ಷಗಳಿಂದ ಪಾರ್ಟಿಸಿಪೇಟ್ ಮಾಡಿದಂತಹ ಶಾಸಕರಾದಂತಹ ಶ್ರೀ ಕಾಗೋಡು ತಿಮ್ಮಪ್ಪನಂಥವರಿಗೆ ಸರ್ಕಾರ ನಡೆಸಿದ ಅನುಭವವಿದೆ. ಸರ್ಕಾರ ನಡೆಸಿರುವುದು, ಗೊತ್ತಿಲ್ಲದವರು ಹಾಗೂ ವಿರೋಧಪಕ್ಷವು ಗೊತ್ತಿಲ್ಲ ಎನ್ನುವ ಹೊಸ ಶಾಸಕರು ಕೂಡ ಬಂದಿದ್ದಾರೆ. ಮಾಧುಸ್ವಾಮಿಯವರು ಕೆಲವು ಸಲ ರೆಲೆವೆಂಟಾದ ವಿಷಯಗಳನ್ನು ರೈಸ್ ಮಾಡುತ್ತಾರೆ. ಬರೀ ಅಡ್ಮಿನಿಸ್ಟ್ರೇಟೀವ್ ಬಗ್ಗೆ ಪಾಯಿಂಟ್ ರೈಸ್ ಮಾಡುತ್ತಾರೆ, ಒಂದು ಟ್ರಾನ್ಸ್‌ಫಾರ್ಮರ್ ಸುಟ್ಟು 3 ತಿಂಗಳಾಯಿತು, ಯಾವ ಕೆಇಬಿ ಅಧಿಕಾರಿಗಳು ಬಂದಿಲ್ಲ. ಕೆರೆ ಒಣಗಿ ಎರಡು ವರ್ಷಗಳಾಯಿತು ಅದನ್ನು ಸರಿಪಡಿಸಿರುವುದಿಲ್ಲ, ಬರೀ ಇಷ್ಟಕ್ಕೆ ಮಾತ್ರ ಸೀಮಿತವಾಗಿರಬಾರದು. ಇರಬೇಕು, ಮೊದಲು ನಮ್ಮ ಕ್ಷೇತ್ರದಲ್ಲಿ ನಾವು ಉಳಿದುಕೊಳ್ಳಬೇಕಾಗುತ್ತದೆ. ಕ್ಷೇತ್ರದಲ್ಲಿ ನಮ್ಮ ಬಗ್ಗೆ ಗೌರವ ಉಳಿದುಕೊಳ್ಳಬೇಕು,

ಅದಕ್ಕಾಗಿ ನಾವು ಕೆಲಸ ಮಾಡಿಸಬೇಕು. ನಾವು ಯಾವ ಪಕ್ಷದಲ್ಲಿರುತ್ತೇವೆ, ಆ ಪಕ್ಷಕ್ಕೆ ಕೆಟ್ಟ ಹೆಸರನ್ನು ತರಬಾರದು. ಗುಂಪುಗಳನ್ನು ಮಾಡಿಕೊಂಡು ಓಡಾಡಬಾರದು, ಗುಂಪುಗಳನ್ನು ಮಾಡಿಕೊಂಡು ಪಕ್ಷಕ್ಕೆ ಹಾಗೂ ಸರ್ಕಾರಕ್ಕೆ ಕೆಟ್ಟ ಹೆಸರನ್ನು ತಂದು, ನಮ್ಮ ಸರ್ಕಾರವೇ ಇರಲಿ, ನಿಮ್ಮ ಸರ್ಕಾರವೇ ಇರಲಿ ಆಗ ಜನರ ದೃಷ್ಟಿಯಲ್ಲಿ we fall down, our image falls down.ನೀವೆಲ್ಲಾ ಮುಗಂ ಆಗಿ ತುಂಬಾ ಕೆಲಸವನ್ನು ಮಾಡಿದ್ದೀರಿ. ಆದರೆ ಇದು ಜನಕ್ಕೆ ತಲುಪಲಿಲ್ಲ ವೆಂದು ಮಾನ್ಯ ಪುಟ್ಟಣ್ಣಯ್ಯನವರು ಹೇಳಿದರು. ಇಲ್ಲಿ ಒಂದು ಸ್ವಿಚ್ ಹಾಕಿದರೆ ಅಲ್ಲಿ ಬಲ್ಬ್ ಉರಿಯಬೇಕು. ಆದರೆ ಮಧ್ಯದಲ್ಲಿ ಸ್ವಲ್ಪ ವೈರ್ ಕಟ್ಟಾಗಿದ್ದರೆ ಬಲ್ಬ್ ಉರಿಯುವುದಿಲ್ಲ. ನಾವು ಆ ರೀತಿಯಾಗಿ ಬಹಳ ಸಲ ವೈರನ್ನು ಕಟ್ಟು ಮಾಡಿಕೊಂಡಿರುತ್ತೇವೆ. ಸ್ವಿಚ್ ಹಾಕಿದೆವು, ಕರೆಂಟ್ ಇತ್ತು, ಬಲ್ಬ್ ಇತ್ತು, ಆದರೆ ವೈರ್ ಕಟ್ಟು ಮಾಡಿಕೊಂಡಿದ್ದೆವು. ಹಾಗೆ ಆಗದಂತೆ ನಾವು ನೋಡಿಕೊಳ್ಳಬೇಕು. ಇವತ್ತು ಯಾವುದೇ ಪಕ್ಷದ ಬಗ್ಗೆ, ಚುನಾವಣೆಯ ಬಗ್ಗೆ ಮಾತನಾಡುವುದು ಒಳ್ಳೆಯದಲ್ಲ. ಯಾವುದೇ ಹೊಸ ಘೋಷಣೆಗಳನ್ನು ಮಾಡುವುದು ಒಳ್ಳೆಯದಲ್ಲ. ತಾವು ಎಲ್ಲರಿಗೂ ಒಳ್ಳೆಯದಾಗಲಿ, ಎನ್ನುವ ನಾಲ್ಕು ಒಳ್ಳೆಯ ಮಾತುಗಳನ್ನು ಹೇಳಿದಿರಿ. ಈ ಅಧಿವೇಶನದ ಕೊನೆಯ ದಿನ ತಮ್ಮ ಅಧ್ಯಕ್ಷ ಭಾಷಣವಾಗುವ ಮುಂಚೆ, ಮೊದಲನೆಯದಾಗಿ ಎಲ್ಲಾ ವಿರೋಧಪಕ್ಷದ ಸದಸ್ಯರಿಗೆ ನಾನು ಹೇಳಿದಂತಹ ವಿಚಾರದ ಮಟ್ಟಕ್ಕೆ ಹೋಗದೆ ಇದ್ದರೂ ಸಭ್ಯತೆಯ ದೃಷ್ಟಿಯಿಂದ ಎ ಡಿಸೆಂಟ್ ಬಿಹೇವಿಯರ್ ಕೆಲವು ಸಲ ರೂಲ್ಸ್ ಗೊತ್ತಿಲ್ಲದೆ ಅಧ್ಯಕ್ಷರು ಹೇಳಿದ್ದನ್ನು ತಿಳಿದುಕೊಳ್ಳದೆ ತಪ್ಪು ಮಾಡಿರಬಹುದು. ನಮ್ಮ ಕಡೆ ಕೆಲವು ಶಾಸಕರು ಮಾಡಿರಬಹುದು. ಆದ್ದರಿಂದ ಸದನದ ಸಮಯ ಹಾಗೂ ಜನತೆಯ ದುಡ್ಡು ಒಂದು ನಿಮಿಷಕ್ಕೆ ಎಷ್ಟು ಖರ್ಚಾಗುತ್ತದೆ ಗೊತ್ತೇ? ವಿಧಾನ ಸಭೆಯ ಅಧಿವೇಶನ ನಡೆಯುವಾಗ ಒಂದು ನಿಮಿಷಕ್ಕೆ 30 ಸಾವಿರ ರೂಪಾಯಿಗಳಿಗೂ ಹೆಚ್ಚು ಖರ್ಚಾಗುತ್ತದೆ. ಈಗ ನೀವೆಲ್ಲರೂ ಚುನಾವಣೆಗೆ ಕೆಲವರು ನಿಲ್ಲಬಹುದು, ಕೆಲವರು ನಿಲ್ಲದೆ ಇರಬಹುದು. ಕೆಲವರು ಆರಿಸಿ ಬರಬಹುದು, ಎಲ್ಲರೂ ಆರಿಸಿ ಬರಬೇಕೆಂದು ಹೇಳುವುದಿಲ್ಲ. ಜನರು ಯಾರನ್ನು ಆರಿಸಬೇಕು, ಯಾರನ್ನು ಮನೆಗೆ ಕಳುಹಿಸಬೇಕು ಅವರನ್ನು ಕಳುಹಿಸಿಕೊಡುತ್ತಾರೆ. ಆಗ ನಾವು ಜನರ ತೀರ್ಮಾನವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಯಾರು ಸರ್ಕಾರವನ್ನು ರಚಿಸುತ್ತಾರೋ, ದೇಶದಲ್ಲಿ ಯಾವ ಸ್ಥಿತಿ ಬರುತ್ತದೆಯೋ, ಪರಿಸ್ಥಿತಿ ಅಷ್ಟು ಸರಳವಿಲ್ಲ. ಮಾನ್ಯ ಖರ್ಗೆಯವರೆ, ಪರಿಸ್ಥಿತಿಯ ಚಿತ್ರಣ ಇವತ್ತು ಅಷ್ಟು ಸರಳವಿಲ್ಲ. ದೆಹಲಿಯಲ್ಲಿ ಯಾವ ಸರ್ಕಾರ ಬರುತ್ತದೆಂದು ಹೇಳುವುದಕ್ಕೆ ಕಷ್ಟವಿದೆ. ಯಾವ ಯಾವ ಪಕ್ಷಗಳು ಏನೇನು ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತವೆಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಪ್ರತಿಯೊಬ್ಬರು ಒಂದಲ್ಲ ಒಂದು ಒತ್ತಡದಲ್ಲಿದ್ದಾಗ ಸಮ್ ಕಂಪ್ಲಾಯೆನ್ಸ್ ಇದ್ದಾವೆ. ಅದಕ್ಕಾಗಿ ಚುನಾವಣೆಯಾದ ಮೇಲೆ ಅಥವಾ ಚುನಾವಣೆ ಆಗುವ ಮುಂಚೆ ಈಗಿರತಕ್ಕಂಥಹ ಒಂದು ಕನ್‌ಫ್ಯೂಷನ್ ಬಗ್ಗೆ ತಾವು ಈ ಸದನದಿಂದ ತಮ್ಮಲ್ಲಿ ಹೇಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾವು ಯಾವ ಪಾರ್ಟಿಯವರೇ ಇರಲಿ, ಯಾವ ಕ್ಷೇತ್ರದಲ್ಲಿಯೇ ನಿಂತುಕೊಳ್ಳಲಿ, ಕರೆಪ್ಟ್ ಮಾಡಬಾರದು. ಜನರನ್ನು ಕರೆಪ್ಟ್ ಮಾಡಿ ಮಾಡಿಯೇ ಇವತ್ತು ಸರ್ಕಾರ ಕರೆಪ್ಟ್ ಆಗಿರುವುದು. ನೀವು ಚುನಾವಣೆಗೆ ನಿಲ್ಲುತ್ತೀರಾ ಎಂದು ಯಾರನ್ನಾದರೂ ಕೇಳಿದರೆ ದುಡ್ಡು ಕೊಡುತ್ತೀರಾ ಎಂದು ಕೇಳುತ್ತಾರೆ. ನಾನು 1967ರಲ್ಲಿ ಕೇವಲ 29

ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಗೆದ್ದು ಲೋಕಸಭೆಗೆ ಹೋಗಿದ್ದೆ. ಈಗ ಒಬ್ಬ ಪಂಚಾಯಿತಿ ಸದಸ್ಯ 50 ಸಾವಿರ ರೂಪಾಯಿಗಳನ್ನು ಎದುರಾಳಿಯನ್ನು ಸೋಲಿಸುವುದಕ್ಕೆ ಖರ್ಚುಮಾಡುತ್ತಾನೆ. ಆದರೆ, ಈ ಪಂಚಾಯಿತಿಯಲ್ಲಿ 30 ಸಾವಿರ ರೂಪಾಯಿಗಳ ಬಂಡವಾಳ ಇರುವುದಿಲ್ಲ. ಈ ರೀತಿಯಾಗಿ ಚುನಾವಣೆಗಳು ಭ್ರಷ್ಟಾಚಾರವನ್ನು ಹುಟ್ಟಿಸತಕ್ಕಂತಹ ಮಾತೃಭೂಮಿಗಳಾಗಿವೆ. ಅಲ್ಲಿಂದ ಚುನಾವಣೆಯ ಭ್ರಷ್ಟಾಚಾರಗಳು ಪ್ರಾರಂಭವಾಗುತ್ತದೆ. ಅದಕ್ಕಾದರೂ ನಾವು ರಾಷ್ಟ್ರಮಟ್ಟದಲ್ಲಿ ಒಂದು ಕೋಡ್ ಆಫ್ ಕಾಂಟಕ್ಟನ್ನು ರಾಜಕೀಯ ಪಕ್ಷಗಳವರು ಮಾಡಿಕೊಳ್ಳಬೇಕು. ಆದರೆ ಕೋಡ್ ಆಫ್ ಕಾಂಡಕ್ಟ್ ಅದನ್ನು ನಾವು ಮಾಡಿಕೊಳ್ಳುವುದಿಲ್ಲ. ನನಗಿಂತಲೂ ಅವನು ಹೆಚ್ಚು ಖರ್ಚು ಮಾಡಿದನೆಂದು ಗೆಲ್ಲುವ ಸಲುವಾಗಿ ನಾವು ಖರ್ಚು ಮಾಡುವುದು. ದುಡ್ಡು ಚುನಾವಣೆಯ ಸಲುವಾಗಿ ಇದ್ದದ್ದು; ಎಲ್ಲಿಂದಲಾದರೂ ತೆಗೆದುಕೊಂಡು ಬಾ, ಹೇಗಾದರೂ ತೆಗೆದುಕೊಂಡು ಬಾ, ಆಮೇಲೆ ಜೈಲಿಗೆ ಹೋದರೂ ಪರವಾಗಿಲ್ಲ, ಒಟ್ಟಿನಲ್ಲಿ ಚುನಾವಣೆಗೆ ಸ್ಪರ್ಧಿಸಲು ದುಡ್ಡನ್ನು ತೆಗೆದುಕೊಂಡು ಬಾ. ಎಲ್ಲ ಮುಖಂಡರು ಅನುಭವಸ್ಥರಿದ್ದೀರಿ, ಜನರನ್ನು ಕರೆಪ್ಟ್ ಮಾಡುವುದು ಬೇಡ. ಚುನಾವಣೆಯಲ್ಲಿ ಹೆಂಡ ಕೊಡುತ್ತಾರೆ.

7.30 ಪಿ.ಎಂ

ಚುನಾವಣೆಯು ಒಂದೆರಡು ದಿವಸ ಇದೆ ಎಂದರೆ, ಲಾರಿ ಬಂದಿದೆಯೇ, ವ್ಯಾನ್ ಬಂದಿದೆಯೇ, ಅದು ಯಾರ ಮನೆ ಮುಂದೆ ಬಂದು ನಿಂತುಕೊಂಡಿತು ಎಂದು ಎಲ್ಲರೂ ಊರಿನ ಮುಂದೆ ಬಂದು ಕುಳಿತುಕೊಂಡಿರುತ್ತಾರೆ. ನಿಮ್ಮಲ್ಲಿ ವ್ಯಾನ್ ಮನೆ ಹತ್ತಿರ ಬರುವುದಿಲ್ಲ, ಇವರೇ ವ್ಯಾನ್‌ನ ಹತ್ತಿರ ಹೋಗುತ್ತಾರೆ. ಹೀಗಾಗಿ ಯಾವ ಈ ಒಂದು ಬುನಾದಿಯನ್ನು ವ್ಯವಸ್ಥೆಯು ಕೆಡಿಸುತ್ತಿದ್ದವೆಯೋ ಅದನ್ನು ಮೊದಲು ನಿಲ್ಲಿಸೋಣ. ಯಾವ ಪಾರ್ಟಿಯವರಾದರೂ ಅಧಿಕಾರಕ್ಕೆ ಬರಲಿ, ಯಾರಾದರೂ ಬಂದು ಸರ್ಕಾರವನ್ನು ನಡೆಸಲಿ, ಜನರನ್ನು ಭ್ರಷ್ಟರನ್ನಾಗಿ ಮಾಡುವುದಕ್ಕೆ ಹೋಗಿ, ನಾವುಗಳು ಭ್ರಷ್ಟರಾಗಿ, ಸರ್ಕಾರಗಳಂತೂ ಅನಿವಾರ್ಯವಾಗಿ ಭ್ರಷ್ಟರಾಗದಿದ್ದರೆ ಸಾಧ್ಯವಿಲ್ಲವೆನ್ನುವಂತಹ ಒಂದು ಹೀನಾಯ ಸ್ಥಿತಿಗೆ ಬಂದಿದ್ದೇವೆ. ಮಾನ್ಯ ವಾಟಾಳ್ ನಾಗರಾಜ್‌ರವರೇ, We have to save this country from this rut. ನಾವು ಚುನಾವಣೆಯನ್ನು ಎದುರಿಸುವುದಕ್ಕೆ ಹೋಗುತ್ತೇವೆ. ನಾವು ಎಷ್ಟರಮಟ್ಟಿಗೆ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವೋ ಅಷ್ಟಾದರೂ ಕಂಟ್ರೋಲನ್ನು ಮಾಡೋಣ. ಈ ಸಾರಿ ಕರ್ನಾಟಕದಲ್ಲಿ ಚುನಾವಣೆಯು ಅಷ್ಟೊಂದು ಕೆಟ್ಟು ಹೋಗಲಿಲ್ಲ ಎನ್ನುವ ಹೆಸರು ಬರುವ ಹಾಗೆ ನಾವೆಲ್ಲರೂ ತೀರ್ಮಾನವನ್ನು ಮಾಡೋಣ. ಯಾರಾದರೂ ಚುನಾವಣೆಗೆ ಸ್ಪರ್ಧಿಸಲಿ ಬಿಡಲಿ, ಅದು ಹಳ್ಳಿಯಾಗಿರಲಿ ಅಥರಾ ಪಟ್ಟಣವಾಗಿರಲಿ, ಆ ರೀತಿಯಾಗಿ ನಾವು at least let us have it. ಮೀಟಿಂಗನ್ನು ತಾವಾದರೂ ಕರೆಯಿರಿ, ಇಲ್ಲಾ ನಾನಾದರೂ ಮೀಟಿಂಗನ್ನು ಕರೆಯುತ್ತೇನೆ. ಇದಕ್ಕೆ ಮಾನ್ಯ ಸುರೇಶ್‌ಕುಮಾರರವರ ಪಾರ್ಟಿಯವರು ಬರಲಿ, ಮಾಧುಸ್ವಾಮಿ, ನಮ್ಮ ಸ್ನೇಹಿತರು ಶ್ರೀ ಕೆ.ಎಸ್.ಪುಟ್ಟಣ್ಣಯ್ಯ, ಶ್ರೀರಾಮರೆಡ್ಡಿ ಅವರು of course they will be ready. ಈ ದೊಡ್ಡ ರಾಜಕೀಯ ಪಕ್ಷಗಳು ಏನಿವೆ, ಇಲ್ಲಿ ದೊಡ್ಡದಾಗಿ ದುಡ್ಡನ್ನು ಎತ್ತುವವರದೆ ಬಂದಿರುವುದು ತಲೆನೋವು. ಅದೊಂದು ತಮ್ಮಲ್ಲಿ ವಿನಂತಿ, ತಾವಾದರೂ

ಮಾರ್ಗದರ್ಶನ ನೀಡಿ let us try to have some kind of a code of conduct by all political parties in this election. Let us try. ಕಾನೂನು ಇಲ್ಲ. ಕಾನೂನಿನ ಪ್ರಕಾರ ಎಲ್ಲಾ ಕಾನೂನನ್ನು ಎಷ್ಟೆಷ್ಟು ಎಫೆಕ್ಟೀವ್ ಆಗಿ ಮುರಿಯಬೇಕೋ ಅಷ್ಟೆಲ್ಲವನ್ನು ಮುರಿದು ಆಗಿದೆ. ಆ ಎಲೆಕ್ಷನ್ ಲಾ ಏಕೆ ಇದೆಯೋ, ಡಿಫೆಕ್ಷನ್ ಏಕೆ ಇದೆಯೋ, ಅದು ಯಾರಿಗೆ, ಏತಕ್ಕೋಸ್ಕರ ಇದೆಯೋ ಬಹುಶಃ ಅಮೇರಿಕನ್ಸ್‌ರವರಿಗೋಸ್ಕರ ನಾವು ಕಾನೂನನ್ನು ಮಾಡಿರಬಹುದು. ಇದು ನಮಗಲ್ಲ, ಏಕೆಂದರೆ ಅವರು ಅಲ್ಲಿ ಅಬ್ಸರ್ವ್ ಮಾಡುತ್ತಾರೆ. ಮುಂದೆ ಯಾವುದೇ ಪಾರ್ಟಿಯವರು ಸರ್ಕಾರವನ್ನು ಮಾಡಲಿ, ಯಾರೇ ವಿರೋಧಪಕ್ಷದಲ್ಲಿರಲಿ, ಈ ವಿಚಾರದ ಮಟ್ಟ ಇನ್ನು ಎತ್ತರವಾಗಬೇಕು. ಅಧ್ಯಕ್ಷರು, ತಾವು ಸಾಕಷ್ಟು ಪ್ರಜ್ಞೆ, ತಿಳುವಳಿಕೆ, ವಿಚಾರ ಮತ್ತು ಸೆಲ್ಫ್ ಡಿಸ್‌ಪ್ಲೀನ್ ಇರುವ ಒಬ್ಬ ಅಪರೂಪದ ವ್ಯಕ್ತಿ, ನನ್ನ ಸ್ನೇಹಿತರ ಪೈಕಿ ಈ ವಿಶೇಷ ಗುಣಗಳನ್ನು ನಾನು ಕಂಡಿರುವುದು ನಿಮ್ಮಲ್ಲಿ ಮಾತ್ರ. ಆ ಗುಣಗಳು ನಿಮ್ಮಲ್ಲಿದ್ದುದರಿಂದ ಈ ಸದನವನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಯಿತು. ತಾವು ಸದನವನ್ನು ಚೆನ್ನಾಗಿ ನಡೆಸಿಕೊಂಡು ಬಂದಿದ್ದೀರಿ. ಸರ್ಕಾರಕ್ಕೂ ಅವಶ್ಯಕತೆ ಬಿದ್ದಾಗ ತೆಗಳಿದ್ದೀರಿ ಕೆಲವು ಮಂತ್ರಿಗಳು ಅವರಿಗೆ ನಾಚಿಕೆ ಏನಾದರೂ ಇದ್ದರೆ ಅವರು ಓಡಿಹೋಗಿ ಬಿಡಬೇಕಾಗಿತ್ತು. ಹಾಗೆಯೇ ವಿರೋಧ ಪಕ್ಷದವರು ದಾರಿಯನ್ನು ತಪ್ಪಿದಾಗ, ಅವರಿಗೆ ದಾರಿಯನ್ನು ತೋರಿಸಿದ್ದೀರಿ. ಆದ್ದರಿಂದ, ತಮ್ಮ ಈ ಅವಧಿಯನ್ನು ಯಶಸ್ವಿಯಾಗಿ ಮಾಡಿದ್ದೀರಿ. ನಾವು ಹೇಗೆ ಸರ್ಕಾರವನ್ನು ನಡೆಸಿಕೊಂಡು ಹೋಗಿದ್ದೇವೆಯೋ, ಬಿಟ್ಟಿದ್ದೇವೆಯೋ ಅದನ್ನು ಪಬ್ಲಿಕ್ ಮೀಟಿಂಗ್‌ನಲ್ಲಿ ಹೇಳುತ್ತೇವೆ. ಇಡೀ ಸದನದ ಪರವಾಗಿ ನನ್ನ ಅತ್ಯಂತ ಹೃತ್ಪೂರ್ವಕವಾದ, ವಿನಯಪೂರ್ವಕವಾದ ವಂದನೆಗಳನ್ನು ತಮಗೆ ಅರ್ಪಿಸುತ್ತೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು ಮುಂದೆಯೂ ಸಹ ತಾವು ಸ್ಪೀಕರ್ ಆಗಿರಬೇಕೆಂದು ಹೇಳಿದರು. Once a Speaker always a Speaker ಅಲ್ಲ. ಸ್ಪೀಕರ್‌ಗೆ ಘನತೆ ಮತ್ತು ಗೌರವವಿದೆ, ಅಧಿಕಾರವಿದೆ, ಇಂತಹವರನ್ನು ಇನ್ನೂ ಹೆಚ್ಚಿನ ಎಫೆಕ್ಟೀವ್ ಕೆಲಸಕ್ಕೆ ಉಪಯೋಗಿಸಬೇಕೇ ಹೊರತು ಬರೀ ಸ್ಪೀಕರ್ ಆಗಿ ಕೂರಿಸುವುದಲ್ಲ. ಆ ದೃಷ್ಟಿಯಿಂದ ಆರೋಗ್ಯ ಮುಖ್ಯ. ದೇಶದ ಬಗ್ಗೆ ನೀವು ಮಾಡತಕ್ಕಂತಹ ಚಿಂತನೆಯ ಮಟ್ಟ ಅದನ್ನು ಉಳಿಸಿಕೊಂಡು ಹೋಗಬೇಕು. ಒಂದು ಪಾರ್ಟಿಯವರು ಕುಳಿತುಕೊಳ್ಳಬಹುದು, ಅವರವರ ಪಾರ್ಟಿಯವರು ಕುಳಿತುಕೊಂಡು ಮಾತನಾಡಿಕೊಳ್ಳಬಹುದು, ಈ ಅಧಿವೇಶನ ನಡೆಯುತ್ತಿರುವುದು ಇದೇ ಕೊನೆಯ ದಿವಸವಾಗಿರುವುದರಿಂದ, ಚುನಾವಣೆಯು ಆದಮೇಲೆ ಏನು ಕಾಂಪೋಜಿಶನ್ ಆಗುತ್ತದೆಯೋ ಅದನ್ನು ಒಪ್ಪಿಕೊಂಡು ಅಟ್‌ಲೀಸ್ಟ್ ಈ ಕೆಲವು ಕೋಡ್ ಆಫ್ ಕಾಂಡಕ್ಟನ್ನು ನಮ್ಮಷ್ಟಕ್ಕೆ ನಾವು We have to impose on ourselves. ಚುನಾವಣೆಯನ್ನು ಆ ರೀತಿ ನಡೆಸೋಣವೆಂದು ಎಲ್ಲರಲ್ಲಿ ಮನವಿಯನ್ನು ಮಾಡಿಕೊಂಡು, ನನ್ನ ಪಕ್ಷದವರಿಗೂ, ತಮಗೂ ಎಲ್ಲರಿಗೂ ಸರ್ಕಾರದ ಪರವಾಗಿ ನನ್ನ ವೈಯುಕ್ತಿಕ ಅಭಿನಂದನೆಗಳನ್ನು ಅರ್ಪಿಸಿ ಅಧ್ಯಕ್ಷರ ಅನುಮತಿಯನ್ನು ಪಡೆದು ಕುಳಿತುಕೊಳ್ಳುತ್ತೇನೆ.

## ಪ್ರಕಟಣೆ

ಅಧ್ಯಕ್ಷರು : ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ